ಸಂಪುಟ: ೦೭/ ಸಂಚಿಕೆ: ೧೦೧/ಮಂಗಳವಾರ ದಿನಾಂಕ : ೦೩-೦೬-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ಧಾರವಾಡ ಬಾಗಲಕೋಟ ವಿಜಯಪುರ ಗದಗ ಕೊಪ್ಪಳ ಹಾವೇರಿ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 101/ TUESDAY Date : 03-06-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ರಾಜ್ಯ ನೂತನ ಶಿಕ್ಷಣ ನೀತಿ ಆಯೋಗ

### ಜೂನ್ 2ನೇ ವಾರದಲ್ಲಿ ಅಂತಿಮ ವರದಿ ಸಲ್ಲಿಕೆ : ಸಚಿವ ಎಂ.ಸಿ.ಸುಧಾಕರ್

ಬೆಂಗಳೂರು : ರಾಜ್ಯ ನೂತನ ಶಿಕ್ಷಣ ನೀತಿ ಆಯೋಗ ಜೂನ್ ಎರಡನೇ ವಾರದಲ್ಲಿ ನೂತನ ಶಿಕ್ಷಣ ನೀತಿ ಅಂತಿಮ ವರದಿ ಸಲ್ಲಿಕೆ ಮಾಡಲಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ. ಸಿ. ಸುಧಾಕರ್ ತಿಳಿಸಿದರು.

ರಾಜ್ಯ ಶಿಕ್ಷಣ ನೀತಿಯ ಕರಡು ರೂಪಿಸಲು ಶಿಕ್ಷಣ ತಜ್ಞ ಹಾಗೂ ಯುಜಿಸಿ ಮಾಜಿ ಅಧ್ಯಕ್ಷ ಪ್ರೊ. ಸುಖ್‌ದೇವ್ ಥೋರಟ್ ಅಧ್ಯಕ್ಷತೆಯಲ್ಲಿ 11 ಸದಸ್ಯರನ್ನು ಒಳಗೊಂಡ 'ರಾಜ್ಯ ಶಿಕ್ಷಣ ನೀತಿ ಆಯೋಗ' ರಚಿಸಿ ರಾಜ್ಯ ಸರ್ಕಾರ ಕಳೆದ ಅ. 11, 2023ರಂದು ಆದೇಶ ಹೊರಡಿಸಿತ್ತು. ಆಯೋಗ ಈಗಾಗಲೇ ಪ್ರಥಮ ವರದಿ ಸಲ್ಲಿಸಿದೆ. ಇನ್ನಷ್ಟು ವಿಷಯಗಳ ಕುರಿತು ಅಧ್ಯಯನ ನಡೆಸಲು, ಮಾಹಿತಿ ಸಂಗ್ರಹಿಸಲು ಸಮಯಾವಕಾಶ ನೀಡುವಂತೆ ಆಯೋಗ ಮನವಿ ಮಾಡಿತ್ತು. ಹಾಗಾಗಿ, ಅವಧಿ ವಿಸ್ತರಿಸಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ನಿವಾಸದಲ್ಲಿ ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಶುಭ ಕೋರಿದರು.

ಬಳಿಕ ಮಾತನಾಡಿದ ಎಂ. ಸಿ. ಸುಧಾಕರ್, ರಾಜ್ಯ ಶಿಕ್ಷಣ ನೀತಿ ಆಯೋಗ ತನ್ನ



ಕಾರ್ಯವನ್ನು ಮುಗಿಸಿದ್ದು, ಜೂನ್ ಎರಡನೇ ವಾರದಲ್ಲಿ ವರದಿ ಸಲ್ಲಿಸಲಿದೆ. ಈ ಸಂಬಂಧ ಮುಖ್ಯಮಂತ್ರಿಗಳ ಭೇಟಿ ದಿನಾಂಕ ಕೋರಲಾಗಿದೆ ಎಂದು ತಿಳಿಸಿದರು. 2025 ಮೇ 31ರವರೆಗೆ ಸುಖದೇವ್ ತೋರಟ್ ಅವರ ರಾಜ್ಯ ನೂತನ ಶಿಕ್ಷಣ ನೀತಿ ಆಯೋಗಕ್ಕೆ ಅವಕಾಶ ನೀಡಲಾಗಿತ್ತು ಎಂದರು.

**ಎಡಿಬಿ ಬ್ಯಾಂಕ್ ಸಾಲ :** ನಮ್ಮ ತಾಂತ್ರಿಕ ಶಿಕ್ಷಣವನ್ನು ಬಲಗೊಳಿಸಲು ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 2,600 ಕೋಟಿ ಸಾಲ ಪಡೆಯಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ನಿರ್ವಹಣೆಯ ಇಲಾಖೆ ಕೂಡ ಒಪ್ಪಿಗೆ ಸೂಚಿಸಿದ್ದು, ಈ ಸಂಬಂಧ ಎಡಿಬಿ ಬ್ಯಾಂಕ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವರು ತಿಳಿಸಿದರು.

ಈಗಾಗಲೇ ಎಡಿಬಿ ಬ್ಯಾಂಕ್ ಅಧಿಕಾರಿಗಳು ನಮ್ಮ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಸದ್ಯದಲ್ಲೇ ಸಾಲ ಬಿಡುಗಡೆಯಾಗಲಿದೆ. ಈ ಹಣದಿಂದ ನಮ್ಮ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳನ್ನು ಉತ್ತಮವಾಗಿ ಸುಧಾರಣೆ ಮಾಡಿ, ವಿದ್ಯಾರ್ಥಿಗಳಿಗೆ ಕೌಶಲ್ಯಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡುವ ಉದ್ದೇಶ ಹೊಂದಲಾಗಿದೆ ಎಂದರು.

ರಾಜ್ಯದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಶೈಕ್ಷಣಿಕ ಮಾಹಿತಿ ನೀಡುವ ದೃಷ್ಟಿಯಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಹೊರ ತಂದಿರುವ ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆ ಕಾರ್ಯನಿರ್ವಹಿಸಲಿದೆ. ಮುಂಬರುವ ದಿನಗಳಲ್ಲಿ ಈ ಪತ್ರಿಕೆ ಮೂಲಕ ಉನ್ನತ ಶಿಕ್ಷಣ ಇಲಾಖೆಯ ಆದೇಶಗಳು, ಸೂಚನೆಗಳು, ನಿಯಮಾವಳಿಗಳನ್ನು ಕಾಲಕಾಲಕ್ಕೆ ರಾಜ್ಯದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿ ನೀಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳು ಹಾಗೂ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪ್ರಗತಿ, ತಂತ್ರಜ್ಞಾನ ಬಳಕೆ ಸೇರಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿನ ಜಾಗತಿಕ ನಡೆಯನ್ನು ಈ ಪತ್ರಿಕೆಯಲ್ಲಿ ದಾಖಲಿಸಿ, ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿ ನೀಡಲಾಗುವುದು. ಖ್ಯಾತ ಶಿಕ್ಷಣ ತಜ್ಞರು, ಸಂಶೋಧಕರು ಪತ್ರಿಕೆಗೆ ಬರೆಯಲಿದ್ದಾರೆ ಎಂದರು.

## ಮಹಾರಾಷ್ಟ್ರ ಸಿಎಂ ತಗಾದೆಗೆ ಡಿಸಿಎಂ ಡಿಕೆಶಿ ಕಿಡಿನುಡಿ

ಬೆಂಗಳೂರು: ಕೃಷ್ಣಾ ನ್ಯಾಯಾಧೀಕರಣದ ತೀರ್ಪಿನಂತೆ ನಮ್ಮ ರಾಜ್ಯದ ಪಾಲಿನ ನೀರು ಬಳಸಿಕೊಳ್ಳಲು ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಬೇಕಿದೆ. ನ್ಯಾಯಧೀಕರಣದ ತೀರ್ಪು ಬಂದಾಗ ಸುಮ್ಮನಿದ್ದ ಮಹಾರಾಷ್ಟ್ರ ಸಿಎಂ ಈಗ ಹಠಾತ್ತನೇ ಕರ್ನಾಟಕದ ಸಿಎಂ ಅವರಿಗೆ ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿರುವುದು ತೀವ್ರ ಆಶ್ಚರ್ಯ ತಂದಿದೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ಸೋಮವಾರ ಮಾತನಾಡಿದ ಅವರು, ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಅವರು ನಮ್ಮ ಸಿಎಂ ಸಿದ್ದರಾಮಯ್ಯ ಅವರಿಗೆ ಮೇ 9 ರಂದು ಪತ್ರ ಬರೆದಿದ್ದಾರೆ. ಆಣೆಕಟ್ಟೆ ಎತ್ತರ ಹೆಚ್ಚಳ ಮಾಡಿದರೆ ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಹಾಪುರ ಜಿಲ್ಲೆಗಳು ಪ್ರವಾಹ ಸಮಸ್ಯೆ ಎದುರಿಸುತ್ತವೆ. ಹೀಗಾಗಿ ಈ ತೀರ್ಮಾನ ಮರುಪರಿಶೀಲಿಸಿ ಎಂದು ಪತ್ರದಲ್ಲಿ ತಿಳಿಸಿದ್ದಾರೆ" ಎಂದರು.

ಈ ಹಿನ್ನೆಲೆಯಲ್ಲಿ, ಯೋಜನೆ ಜಾರಿ ಮಾಡಿ ರಾಜ್ಯ ಹಾಗೂ ರೈತರ ಹಿತ ಕಾಯಲು ಎಲ್ಲಾ ಸಂಸದರು, ಕೇಂದ್ರ ಸಚಿವರು ಸಹಕರಿಸಬೇಕು ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮನವಿ ಮಾಡಿದರು.

"ಮಹಾರಾಷ್ಟ್ರ ಸಿಎಂ ಅವರ ಈ ಪತ್ರ ನಮಗೆ ಆಘಾತ ತಂದಿದೆ. ಕಾರಣ ಇದುವರೆಗೂ ಈ ಯೋಜನೆ ವಿಚಾರವಾಗಿ ಮಹಾರಾಷ್ಟ್ರ ಎಂದೂ ಆಕ್ಷೇಪ ಸಲ್ಲಿಸಿರಲಿಲ್ಲ. 2010 ರ ತೀರ್ಪಿನ ಬಗ್ಗೆ ಮಹಾರಾಷ್ಟ್ರ ಎಲ್ಲೂ ಪ್ರಶ್ನೆ ಎತ್ತಿರಲಿಲ್ಲ. ಈ ಯೋಜನೆ ಜಾರಿ ಮಾಡಲಿ ಎಂದು ಮಹಾರಾಷ್ಟ್ರ ಕೂಡ ಅಫಿಡವಿಟ್ ಸಲ್ಲಿಸಿತ್ತು. ಆದರೆ ಈಗ ಇದ್ದಕ್ಕಿದ್ದಂತೆ ಈ ಪತ್ರ ಬರೆದಿದ್ದಾರೆ" ಎಂದು ತಿಳಿಸಿದರು. "ಈ ಯೋಜನೆ ನ್ಯಾಯಾಧಿಕರಣದಲ್ಲಿ ನಮಗೆ ಸಿಕ್ಕಿರುವ ಹಕ್ಕು. ಹೀಗಾಗಿ ನಮ್ಮ ಸಿಎಂ ಸಹ ಒಂದೆರಡು ದಿನಗಳಲ್ಲಿ ಪತ್ರ ಬರೆಯಲಿದ್ದಾರೆ. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಎಲ್ಲಾ ಸಂಸದರು, ಕೇಂದ್ರದ ಸಚಿವರು ಈ ವಿಚಾರವಾಗಿ ನಮಗೆ ಸಹಕಾರ ನೀಡಬೇಕು ಎಂದು ಕೈ ಮುಗಿದು ಮನವಿ ಮಾಡುತ್ತೇನೆ" ಎಂದು ತಿಳಿಸಿದರು.



"ಕೇಂದ್ರ ಸಚಿವ ಸೋಮಣ್ಣ ಅವರು ಕೇಂದ್ರ ಜಲಶಕ್ತಿ ಸಚಿವಾಲಯದ ಭಾಗ. ಆಲಮಟ್ಟಿ ಯೋಜನೆ ನಮ್ಮ ರಾಜ್ಯದ ಹಿತ. ನಮಗೆ ನೆರೆ ರಾಜ್ಯಗಳ ಜತೆ ತಿಕ್ಕಾಟ ಇಷ್ಟವಿಲ್ಲ. ಈ ಯೋಜನೆ ತಡವಾಗುತ್ತಿರುವುದರಿಂದ ಯೋಜನೆ ವೆಚ್ಚ ವಿಪರೀತ ಏರಿಕೆಯಾಗುತ್ತಿದೆ. ಯೋಜನೆ ಭೂಸ್ವಾಧೀನಕ್ಕೆ 1 ಲಕ್ಷ ಕೋಟಿ ರೂಪಾಯಿ ಬೇಕಾಗಿದೆ. ನಮ್ಮ ಪಾಲಿನ ನೀರು ಬಳಸಲು ಈ ಯೋಜನೆ ಮುಖ್ಯ" ಎಂದು ಹೇಳಿದರು.

ಅವರ ರಾಜ್ಯದಲ್ಲಿ ಪ್ರವಾಹ ಎದುರಾದರೆ ಅದನ್ನು ಅವರು ಆಂತರಿಕವಾಗಿ ಸರಿಪಡಿಸಿಕೊಳ್ಳಲಿ. ನಾವು ಈ ವಿಚಾರವಾಗಿ ಕೇಂದ್ರ ಸಚಿವರು ಹಾಗೂ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಡ ಹಾಕಬೇಕಿದೆ. ಈ ವಿಚಾರದಲ್ಲಿ ನಾವು ಒಗ್ಗಟ್ಟಿನಿಂದ ಧ್ವನಿ ಎತ್ತಬೇಕು. 2013 ರಿಂದ ಈ ಯೋಜನೆಗೆ ಗೆಜೆಟ್ ನೋಟಿಫಿಕೇಶನ್ ಆಗಬೇಕು ಎಂದು ಕಾಯುತ್ತಿದ್ದೇವೆ. ಇನ್ನು ಎಷ್ಟು ದಿನ ಕಾಯಬೇಕು?" ಎಂದು ಪ್ರಶ್ನಿಸಿದರು. "ನಮ್ಮ ರೈತರ ಹಿತ ಕಾಯಲು ನೀವು ಯಾವಾಗ ಎಲ್ಲಿಗೆ ಕರೆಯುತ್ತೀರೋ ಅಲ್ಲಿಗೆ ಬರಲು ನಮ್ಮ ಸರ್ಕಾರ ಸಿದ್ಧವಿದೆ. ಮಹಾರಾಷ್ಟ್ರ ಸಿಎಂ ಹಾಗೂ ಅದಕ್ಕೆ ನಮ್ಮ ಸಿಎಂ ಬರೆಯುವ ಪತ್ರವನ್ನು ಎಲ್ಲಾ ಸಂಸದರಿಗೆ ರವಾನಿಸುತ್ತೇವೆ ಎಂದರು.

## ತಾಲೂಕಾ ಪ್ರಜಾಸೌಧ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ



ಬಾಗಲಕೋಟೆ, : ಬಾಗಲಕೋಟೆ ಜಿಲ್ಲೆಯ ಇಳಕಲ್ಲ, ತೇರದಾಳ, ರಬಕವಿ-ಬನಹಟ್ಟಿ ಮತ್ತು ಗುಳೇದಗುಡ್ಡ ತಾಲೂಕಿಗೆ ತಾಲೂಕು ಪ್ರಜಾಸೌಧ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಬಾಗಲಕೋಟೆ ಉಪವಿಭಾಗ ಹಾಗೂ ಬಾದಾಮಿ ತಾಲೂಕು ತಹಶೀಲ್ದಾರ ಅವರಿಗೆ ವಾಹನವನ್ನು ಖರೀದಿಸಲು ಮಂಜೂರಾತಿ ನೀಡಲಾಗಿದೆ. ಮುಖ್ಯಮಂತ್ರಿಗಳಿಂದ ಅನುಮೋದನೆಯ ಆದೇಶ ಪ್ರತಿಯನ್ನು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಪಡೆದುಕೊಂಡರು.

## ಪಠ್ಯಪುಸ್ತಕದಲ್ಲಿ ಕೆಂಪೇಗೌಡರ ಪಾಠ ಸೇರಿಸಲು ಸಲಹೆ : ಡಿಕೆಶಿ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯ ಪ್ರಯುಕ್ತ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಘೋಷಿಸಿದೆ. ಕೆಂಪೇಗೌಡರ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಾಲೆಯ ಪಠ್ಯದಲ್ಲಿ ಕೆಂಪೇಗೌಡರ ಕುರಿತು ಒಂದು ಪಾಠ ಸೇರಿಸಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲಹೆ ನೀಡುತ್ತೇನೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು.

ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಕುರಿತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸೋಮವಾರದಂದು ವಿಧಾನಸೌಧದಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದರು.

ಸಭೆ ಬಳಿಕ ಸುದ್ದಿಗೋಷ್ಠಿದ ಅವರು, ಜೂನ್ 27 ಕೆಂಪೇಗೌಡ ಜನ್ಮದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಬಾಬು ಜಗಜೀವನ್ ರಾಮ್ ಭವನದಲ್ಲಿ ಕಾರ್ಯಕ್ರಮ ನಡೆಯುತ್ತದೆ. ಕೆಂಪೇಗೌಡ ಪ್ರಾಧಿಕಾರ ನಿರ್ಮಾಣಕ್ಕೆ ಸುಮ್ಮನಹಳ್ಳಿಯಲ್ಲಿ ಐದು ಎಕರೆ ಜಮೀನು ಖರೀದಿಸಲಾಗಿದೆ. ಕೆಂಪೇಗೌಡರ ಜಯಂತಿಯಂದೇ ಭೂಮಿ ಪೂಜೆ ನೆರವೇರಿಸಲಾಗುತ್ತದೆ ಎಂದು ಹೇಳಿದರು.

ನಾಡಪ್ರಭು ಕೆಂಪೇಗೌಡ ಅವರ ಹೆಸರಿನಲ್ಲಿ ಸಂಸ್ಥೆಗಳು ಮತ್ತು ಎಲ್ಲ ವರ್ಗದ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ಸಂಬಂಧ ಸಮಿತಿ ರಚಿಸಲಾಗುತ್ತದೆ. ಕೆಂಪೇಗೌಡ ಪ್ರಾಧಿಕಾರದ ವತಿಯಿಂದ ಮೈಸೂರು ದಸರಾಕ್ಕೆ ಸ್ತಬ್ಧಚಿತ್ರ ಕಳುಹಿಸಲಾಗುತ್ತದೆ. ಕೆಂಪೇಗೌಡರ ಜಯಂತಿ ಆಚರಿಸಲು ಒಂದು ಲಕ್ಷ ಹಣ ನೀಡಲು ತೀರ್ಮಾನಿಸಲಾಗಿದೆ ಎಂದರು.

ನಮ್ಮ ಮೆಟ್ರೋಗೆ ಕೆಂಪೇಗೌಡ ಮೆಟ್ರೋ ಅಂತ ಹೆಸರಿಡಬೇಕೆಂದು ಮನವಿ ಸಲ್ಲಿಸಿದ್ದಾರೆ. ಆದರೆ, ನಮ್ಮ ನಿಮ್ಮ ಮೆಟ್ರೋ ಅಷ್ಟೇ. ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಪ್ರತಿಮೆ ನಿರ್ಮಿಸಿ ಹೋದರು. ಆದರೆ, ಹಣ ನೀಡಿಲ್ಲ. ಈಗ ನಾವೆಲ್ಲ ಇದನ್ನು ಕ್ಲಿಯರ್ ಮಾಡುತ್ತಿದ್ದೇವೆ. ದೆಹಲಿಯಲ್ಲಿ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡುವ ವಿಚಾರವಾಗಿ ಮಾತನಾಡಿದ ಅವರು, ನಾವು ಅಲ್ಲಿಗೆ ಹೋಗಿ ಪ್ರತಿಮೆ ನಿರ್ಮಿಸಲು ಆಗಲ್ಲ. ದೆಹಲಿ ಸಿಎಂ ಮತ್ತು ಅಲ್ಲಿನ ಸರ್ಕಾರಕ್ಕೆ ಮನವಿ ಮಾಡಬೇಕಾಗುತ್ತದೆ.

ಈ ಬಗ್ಗೆ ಎಲ್ಲ ಸಂಸದರಿಗೂ ನಾನು ಮನವಿ ಮಾಡುತ್ತೇನೆ ಎಂದರು.

## ಕಠಿಣ ಪರಿಶ್ರಮದಿಂದ ಯಶಸ್ಸು ಸಾಧಿಸಲು ಸಾಧ್ಯ - ಲೀಲಾವತಿ ಹಿರೇಮಠ

ಬೆಳಗಾವಿ. ಜೂ.2: ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ನಿರ್ದಿಷ್ಟವಾದ ಗುರಿ ಹೊಂದಿರಬೇಕು. ನಿರಂತರ ಅಧ್ಯಯನ ಮತ್ತು ಕಠಿಣ ಪರಿಶ್ರಮದಿಂದ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಳಗಾವಿ ಉಪ ನಿರ್ದೇಶಕರಾದ ಶ್ರೀಮತಿ ಲೀಲಾವತಿ ಹಿರೇಮಠ ಅವರು ಅಭಿಪ್ರಾಯ ಪಟ್ಟರು.

ಬೆಳಗಾವಿಯ ಮಿಲೇನಿಯಂ ಗಾರ್ಡನದಲ್ಲಿ ಜೈನ ಇಂಟರ್ ನ್ಯಾಷನಲ್ ಟ್ರೇಡ ಆರ್ಗನೈಝೇಶನ ಜಿತೋ ಸಂಸ್ಥೆಯ ವತಿಯಿಂದ 2025 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಾಗೂ ಆರ್ಥಿಕವಾಗಿ ಹಿಂದುಳಿದ ಜೈನ ಸಮಾಜದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 12 ನೇ ಆವೃತ್ತಿಯ ವಿದ್ಯಾರ್ಥಿವೇತನ "ಶ್ಯಾಂಕಿ ಯೋಜನೆಯಡಿ " (ಸ್ಕಾಲರಶಿಪ್) ಚೆಕ್ಕ ವಿತರಣೆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿ ಸಮಾರಂಭವನ್ನು ಉದ್ಘಾಟಿಸಿ ಮತ್ತು ವಿದ್ಯಾರ್ಥಿಗಳಿಗೆ ಚೆಕ್ಕ ವಿತರಿಸಿ ಅವರು ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿ ಅವರುಗಳು ಮಾಡುವ ಕೆಲಸದಲ್ಲಿ ಸಹಾಯ ಮಾಡುತ್ತ ಕಲಿಕೆಯತ್ತ ಹೆಚ್ಚಿನ ಗಮನ ನೀಡಬೇಕು. ಪಾಲಕರು ಯಾವತ್ತು ತಮ್ಮ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ಸಾಕಷ್ಟು ಕಷ್ಟ



ಪಡುತ್ತಾರೆ. ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಮೂಲಕ ಜೀನವದಲ್ಲಿ ಯಶಸ್ಸಿನ ದಾರಿಯಲ್ಲಿ ನಡೆಯಬೇಕೆಂದು ಅವರು ಸಲಹೆ ನೀಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉದ್ಯಮಿ ವಿಜಯ ಮೆಟಗುಡ್ಡ ಅವರು ಮಾತನಾಡಿ, ಇಂದು ಜಿತೋ ಸಂಸ್ಥೆಯ ಸದಸ್ಯರು ತನು ಮನ ಧನದಿಂದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಜಿತೋ ಸಂಸ್ಥೆಯ ಕಾರ್ಯ ಇತರೆ ಸಾಮಾಜಿಕ ಸಂಸ್ಥೆಗಳಿಗೆ ಮಾದರಿ ಸಂಸ್ಥೆಯಾಗಿದೆ. ಈ ಸಂಸ್ಥೆಯ ಮಾಡುತ್ತಿರುವ ಕಾರ್ಯವನ್ನು ಎಲ್ಲ ಸಂಘ ಸಂಸ್ಥೆಗಳು ಸಹ ಮಾಡಬೇಕೆಂದು ಹೇಳಿದ ಅವರು, ವಿದ್ಯಾರ್ಥಿಗಳು ತಮ್ಮ ಹೆಚ್ಚಿನ ಸಮಯವನ್ನು ಶೈಕ್ಷಣೀಕ ಅಧ್ಯಯನಕ್ಕಾಗಿ ಬಳಿಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು.

ಸಮಾರಂಭದಲ್ಲಿ ಗೌರವ ಅತಿಥಿಯಾಗಿ ಆಗಮಿಸಿದ ಉದ್ಯಮಿ ಶಾಂತಿಲಾಲಜಿ ಪೋರವಾಲ ಅವರು ಮಾತನಾಡಿ, ವಿದ್ಯಾರ್ಥಿಗಳು ಶೀಕ್ಷಣ ಪಡೆಯುವುದು ಇಂದಿನ ಅವಶ್ಯಕತೆಯಾಗಿದೆ. ಉನ್ನತ ಶೀಕ್ಷಣ ಪಡೆದು ಸಮಾಜದ ಉನ್ನತ ಹುದ್ದೆಯನ್ನು ಅಲಂಕರಿಸಬೇಕೆಂದು ಹೇಳಿದರು . ಸಮಾರಂಭದಲ್ಲಿ ಬೆಳಗಾವಿಯ ಜಿಲ್ಲೆಯಲ್ಲಿ ಜೈನ ಸಮಾಜದ ಆರ್ಥಿಕವಾಗಿ ಹಿಂದುಳಿದ ಒಟ್ಟು 157 ವಿದ್ಯಾರ್ಥಿಗಳಿಗೆ ತಲಾ 7 ಸಾವಿರ ರೂ.ಗಳಂತೆ ವಿದ್ಯಾರ್ಥಿ ವೇತನ (ಸ್ಕಾಲರಶಿಪ್) ವಿತರಿಸಲಾಯಿತು. ಸಮಾರಂಭದಲ್ಲಿ ಶ್ಯಾಂಕಿ ಯೋಜನೆಯ ಮುಖ್ಯ ರೂವಾರಿ ಪೋರವಾಲ ಪರಿವಾರ ಮತ್ತು ಇತರೆ ದಾನಿಗಳು ಹಾಗೂ ಜಿತೋ ಸಂಸ್ಥೆಯ ಪದಾಧಿಕಾರಿಗಳು , ಸದಸ್ಯರು ಉಪಸ್ಥಿತರಿದ್ದರು.

## ಬಿಜೆಪಿಯವರು ಹಿಂದೂ- ಮುಸ್ಲಿಮರೆಂದು ಭೂತ ಕನ್ನಡಿಯಿಂದ ನೋಡುವುದು ಬಿಡಬೇಕು : ಲಕ್ಷ್ಮೀ ಹೆಬ್ಬಾಳ್ಕರ್



ಬೆಂಗಳೂರು: ಬಿಜೆಪಿಯವರು ಹಿಂದೂ, ಮುಸ್ಲಿಮರೆಂದು ಭೂತ ಕನ್ನಡಿಯಿಂದ ನೋಡುವುದನ್ನು ಬಿಡಬೇಕು. ಸಾಮಾಜಿಕ ಬದ್ಧತೆಯಿಂದ ಎಲ್ಲವನ್ನೂ ನೋಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವವೆ ಲಕ್ಷ್ಮೀ ಹೆಬ್ಬಾಳ್ಕರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಸಂಘಪರಿವಾರವನ್ನು ಸರ್ಕಾರ ಟಾರ್ಗೆಟ್ ಮಾಡುತ್ತಿದೆ ಎಂಬ ಬಿಜೆಪಿಯ ಸುನೀಲ್ ಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಮೊದಲು ಸುನೀಲ್ ಕುಮಾರ್ ಅವರು ಮಾತನಾಡುವಾಗ ಜವಾಬ್ದಾರಿಯುತವಾಗಿ ಮಾತನಾಡಬೇಕೆಂದು ತಿರುಗೇಟು ನೀಡಿದರು.

ನಾವು ಕೂಡ ಹಿಂದೂನೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರಲ್ಲೇ ರಾಮ ಇದ್ದಾನೆ. ಮಹಾತ್ಮಾ ಗಾಂಧಿ ಪಕ್ಷದವರು ನಾವು. ರಾಮನ ಮೇಲೆ ನಮಗೂ ಭಕ್ತಿ ಇದೆ. ಬಿಜೆಪಿಯವರು ಹಿಂದೂ, ಮುಸ್ಲಿಂ ವಿಷಯದಲ್ಲಿ ರಾಜಕೀಯ ಮಾಡಿಕೊಂಡು ಬರುತ್ತಿದ್ದಾರೆ. ಯಾರೇ ಕಾನೂನು ಕೈಗೆತ್ತಿಕೊಂಡರೂ, ಕಾನೂನು ಸುವ್ಯವಸ್ಥೆ ಕಾಪಾಡಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು.

ನಾವು ಯಾರನ್ನೂ ಟಾರ್ಗೆಟ್ ಮಾಡುವ ಅನಿವಾರ್ಯತೆ ಇಲ್ಲ. ಬಿಜೆಪಿಗೆ ಮಾತ್ರ ಅಂತಹ ಅನಿವಾರ್ಯತೆ ಇದೆ. ನಮ್ಮ ಮೊದಲ ಆದ್ಯತೆ ಕಾನೂನು ಸುವ್ಯವಸ್ಥೆ ಇರಬೇಕು ಎಂಬುದು. ಉಡುಪಿಯಲ್ಲಿ ಕಾನೂನು ಸುವ್ಯವಸ್ಥೆ ಸುಸ್ಥಿತಿಯಲ್ಲಿದೆ. ಅವಿಭಾಜ್ಯ ಜಿಲ್ಲೆ ದಕ್ಷಿಣ ಕನ್ನಡದಲ್ಲಿ ಕಾನೂನು ಸುವ್ಯವಸ್ಥೆಯನ್ನು ಸರಿ ಮಾಡುತ್ತೇವೆ ಎಂದು ಹೇಳಿದರು.

ಸಂತ್ರಸ್ತರ ಗೌಪ್ಯತೆ ಕಾಪಾಡಬೇಕು : ಬೆಳಗಾವಿ ಸಾಮೂಹಿಕ ಅತ್ಯಾಚಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಚಿವರು, ಬೆಳಗಾವಿಯಲ್ಲಿ ಹದಿನೈದು ದಿನದ ಹಿಂದೆ ಒಂದು ಪ್ರಕರಣ ಆಗಿತ್ತು. ಇದು ಬಹಳ ಸೂಕ್ಷ್ಮ ವಿಚಾರ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಹೇಳುತ್ತಿದ್ದೇನೆ. ಸಂತ್ರಸ್ತರ ಗೌಪ್ಯತೆಯನ್ನು ಕಾಪಾಡಬೇಕು. ಪೊಲೀಸ್ ಕಮಿಷನರ್ ಜೊತೆ ಸಂಪರ್ಕದಲ್ಲಿದ್ದೇನೆ. ಪ್ರಕರಣದಲ್ಲಿ ಭಾಗಿಯಾದವರನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಬೆಳಗಾವಿಯಲ್ಲಿ ಈಗ ಆಗಿರುವ ಘಟನೆಯನ್ನು ನಾನು ಅತ್ಯಂತ ಕಠಿಣ ಶಬ್ದಗಳಿಂದ ಖಂಡಿಸುತ್ತೇನೆ. ಈಗಾಗಲೇ ಇಬ್ಬರ ಬಂಧನ ಕೂಡ ಆಗಿದೆ. ಸಂತ್ರಸ್ತೆ ಅಪ್ರಾಪ್ತೆಯಾಗಿದ್ದಾಳೆ. ಉಳಿದ ಆರೋಪಿಗಳನ್ನು ಶೀಘ್ರದಲ್ಲೇ ಬಂಧನ ಮಾಡುತ್ತೇವೆ ಎಂದು ಸಚಿವರು ಹೇಳಿದರು.

## ಕಾರ್ಮಿಕರು ದೇಶದ ಆರ್ಥಿಕ ಶಕ್ತಿ ಮತ್ತು ಕಾರ್ಖಾನೆಯ ಕರ್ತೃತ್ವ ಶಕ್ತಿ



ಮಹಾಲಿಂಗಪುರ : ದೇಶದ ಆರ್ಥಿಕ ಶಕ್ತಿ ಮತ್ತು ಕಾರ್ಖಾನೆಯ ಕರ್ತೃತ್ವ ಶಕ್ತಿ ಎನಿಸಿದ ಕಾರ್ಮಿಕರ ಶ್ರಮವನ್ನು ಗೌರವಿಸಬೇಕು ಎಂದು ಬಾಗಲಕೋಟ ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ ಹೇಳಿದರು. ಸಮೀಪದ ಸಮೀರವಾಡಿಯ ಗೋದಾವರಿ ಸಕ್ಕರೆ ಕಾರ್ಖಾನೆಯ ಮಜದೂರ ಯೂನಿಯನ್ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಮಿಕರಿಗೆ ನ್ಯಾಯಯುತ ಪ್ರತಿಫಲ ನೀಡುವುದರಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆ ಮುಂಚೂಣಿಯಲ್ಲಿದೆ. ಆದರೆ ಜಿಲ್ಲೆಯಲ್ಲಿ ಬಹಳಷ್ಟು ಕಾರ್ಖಾನೆಗಳಲ್ಲಿ ಕೆಲಸದ ಸಮಯ ಮತ್ತು ಸಂಬಳದಲ್ಲಿ ಅನ್ಯಾಯವಾಗುತ್ತಿರುವುದು ಗಮನಕ್ಕೆ ಬಂದಿದೆ ಎಂದು ವಿಷಾದಿಸುತ್ತ ಕಾರ್ಮಿಕ ಇಲಾಖೆಯ ಯೋಜನೆ ಮತ್ತು ಸೌಲಭ್ಯಗಳ ಬಗ್ಗೆ ತಿಳಿಸಿದರು.

ಕಬ್ಬು ಬೆಳೆಗಾರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ, ಕಾರ್ಯದರ್ಶಿ ರಂಗನಗೌಡ ಪಾಟೀಲ ಮಾತನಾಡಿ ಕಾರ್ಖಾನೆಯ ಸಾಧನೆಯಲ್ಲಿ ರೈತರು ಮತ್ತು ಕಾರ್ಮಿಕರ ಕೊಡುಗೆ ಅಪಾರವಾದುದು ಎಂದರು. ರಾಜ್ಯ ಸಕ್ಕರೆ ಕಾರ್ಮಿಕರ ಮಹಾಮಂಡದ ಅಧ್ಯಕ್ಷ ಬಿ.ನಾಗರಾಜ ಮಾತನಾಡಿ ಕಾರ್ಮಿಕರಿಗೆ ವೇತನ ಮಂಡಳಿ ನಿಯಮದಂತೆ ಸಂಬಳ ನೀಡುವ ಮೂಲಕ ಗೋದಾವರಿ ಸಕ್ಕರೆ ಕಾರ್ಖಾನೆ ಕಳಕಳಿಯ ಕಾರ್ಯ ಮಾಡುತ್ತಿದೆ. 8 ನೇ ವೇತನ ಆಯೋಗದ ಸಂಬಳ ಜಾರಿಗೊಳಿಸುವ ಯತ್ನ ಮಾಡುತ್ತಿದ್ದೇವೆ ಎಂದರು. ಎಂಪ್ಲಾಯ್ ಯೂನಿಯನ್ ಅಧ್ಯಕ್ಷ ಬಸವರಾಜ ಭದ್ರಶೆಟ್ಟಿ ಮಾತನಾಡಿದರು.

ಗೋದಾವರಿ ಸಕ್ಕರೆ ಕಾರ್ಖಾನೆಯ ಸಹಾಯಕ ವ್ಯವಸ್ಥಾಪಕ ಎಂ.ರಾಮಚಂದ್ರ ಮಾತನಾಡಿ ಕಾರ್ಖಾನೆಯ ರೈತ ಸ್ನೇಹಿ, ಕಾರ್ಮಿಕ ಸ್ನೇಹಿ ಮತ್ತು ಪರಿಸರ ಸ್ನೇಹಿ ಆಡಳಿತ ಬಗ್ಗೆ ವಿವರಿಸಿದರು. ಮುಖ್ಯ ಅತಿಥಿಗಳನ್ನು, ನಿವೃತ್ತ ಕಾರ್ಮಿಕರನ್ನು, ಸಾಧಕ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ನಂತರ ಎಲ್ಲರೂ ಸೇರಿ ಜಿಲೇಬಿ, ಮಸಾಲೆ ರೈಸ್ ಮತ್ತು ಸಾಂಬಾರದ ಭೋಜನ ಸವಿದರು. ಮಜದೂರ ಯೂನಿಯನ್ ಕಾರ್ಯಾಧ್ಯಕ್ಷ ಬಿ.ವಿ.ಮೇಲಪ್ಪಗೋಳ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಕೆ.ಬಿ.ವಾಜಂತ್ರಿ, ಪ್ರಧಾನ ಕಾರ್ಯದರ್ಶಿ ಎನ್.ಪಿ. ಮಾಳಿ,ವಿ.ಎಸ್.ಕಮತೆ, ಕಾರ್ಯದರ್ಶಿ ಎಸ್.ಬಿ.ಬಿರಾದಾರ ಪಾಟೀಲ, ಸಹ ಕಾರ್ಯದರ್ಶಿ ಸಿ.ಎಂ.ಅಥಣಿ ಸೇರಿದಂತೆ ಕಾರ್ಮಿಕ ಕಾರ್ಮಿಕ ವರ್ಗದವರಿದ್ದರು.

## ಹಾಸ್ಟೆಲ್ ಗಳಿಗೆ ದಿಢೀರ ಭೇಟಿ ನೀಡಿದ :ಜಿಪಂ ಸಿಇಓ ರಾಹುಲ್ ಶಿಂಧೆ



ಬೆಳಗಾವಿ, ಜೂ-02: ಬೆಳಗಾವಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು, ಬೆಳಗಾವಿ ನಗರದ ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆಯ ಅಜಮನಗರದ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಹಾಗೂ ಶಿವಬಸವ ನಗರದ ಮೆಟ್ರಿಕ್ ಪೂರ್ವ ಬಾಲಕರ ಹಾಸ್ಟೆಲ್ ಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಪರಿಶೀಲನೆ : ಹಾಸ್ಟೆಲ್ ನ ಅಡುಗೆ ಕೋಣೆ, ಶೌಚಾಲಯ ಸೇರಿದಂತೆ ಕೊಠಡಿಗಳಿಗೆ ಸಿಇಓ ಭೇಟಿ ನೀಡಿ ಅಲ್ಲಿರುವ ವ್ಯವಸ್ಥೆಯ ಕೂಲಂಕಷ ಪರಿಶೀಲನೆ ನಡೆಸಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿದ್ದಾರೆ. ಹಾಸ್ಟೆಲ್ ನಲ್ಲಿ ಲಭ್ಯವಾಗುತ್ತಿರುವ ಸೌಲಭ್ಯ, ಕುಡಿಯುವ ನೀರಿನ ಶುದ್ಧತೆ ಹಾಗೂ ಶುಚಿತ್ವದ ಕುರಿತಂತೆ ಮಾಹಿತಿ ಕಲೆ ಹಾಕಿದ್ದಾರೆ. ಅಜಮನಗದಲ್ಲಿರುವ ವಸತಿ ನಿಲಯದಲ್ಲಿ ಗಂಥಾಲಯ ಚಿಕ್ಕದಾಗಿದ್ದು ಮಕ್ಕಳಿಗೆ ಓದುವುದಕ್ಕೆ ಅನಾನಕೂಲವಾಗುತ್ತಿರುವುದನ್ನು ಮನಗಂಡು ಗಂಥಾಲಯವನ್ನು ದೊಡ್ಡದಾಗಿ ವಿಸ್ತರಣೆ ಮಾಡಲು ಅಧಿಕಾರಿಗಳಿಗೆ ತಿಳಿಸಿದರು. ಆಹಾರದ ಗುಣಮಟ್ಟ ಪರಿಶೀಲನೆ ನಡೆಸಿದ್ದಾರೆ. 'ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಲಭ್ಯವಾಗುವ ಸೌಲಭ್ಯಗಳನ್ನು ನಿಯಮಾನುಸಾರ ವಿತರಣೆ ಮಾಡಬೇಕು' ಎಂದು ಹಾಸ್ಟೆಲ್ ಸಿಬ್ಬಂದಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ವಸತಿ ನಿಲಯದ ವಿದ್ಯಾರ್ಥಿಗಳು ಶಿಸ್ತು ಮತ್ತು ಜವಾಬ್ದಾರಿಗಳನ್ನು ಪಾಲಿಸಬೇಕು. ಇದರಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ' ಎಂದು ಇದೇ ವೇಳೆ ವಿದ್ಯಾರ್ಥಿಗಳಿಗೆ ಸಿಇಓ ಅವರು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪರಿಶಿಷ್ಠ ವರ್ಗಗಳ ಕಲ್ಯಾಣಾಧಿಕಾರಿ ಬಸವರಾಜ ಕುರಿಹುಲಿ, ವಸತಿ ನಿಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# “ಚಕ್ ದೇ” ಮಹಿಳಾ ಕ್ರಿಕೆಟ್ ಟೂರ್ನಮೆಂಟ್ ಬೆಳಗಾವಿಗೆ ಹೊಸ ಉತ್ಸಾಹ ತಂದುಕೊಟ್ಟಿತು

ಬೆಳಗಾವಿ, : ಬೈಲಹೊಂಗಲದ ಜೆಐಎಂಟ್ಸ್ ಗ್ರೂಪ್ ಆಫ್ ಬೆಳಗಾವ್ ಪ್ರೈಡ್ ಸಾಹೆಲಿ ಮತ್ತು ಎನ್‌ಎಕ್ಸ್ಟ್ ಲೆವೆಲ್ ಫಿಟ್‌ನೆಸ್‌ನ ಸಹಯೋಗದಲ್ಲಿ “ಚಕ್ ದೇ” ಮಹಿಳಾ ಓಪನ್ ಕ್ರಿಕೆಟ್ ಟೂರ್ನಮೆಂಟ್ ಅನ್ನು ಯಶಸ್ವಿಯಾಗಿ ಬೆಳಗಾವಿಯ ಕಿಕ್‌ಫ್ಲಿಕ್ಸ್ ಕ್ರಿಕೆಟ್ ಟರ್ಫ್‌ನಲ್ಲಿ ಆಯೋಜಿಸಲಾಯಿತು.

ಈ ಟೂರ್ನಮೆಂಟ್‌ಗೆ ಬೆಳಗಾವಿ ಮಹಾನಗರಪಾಲಿಕೆಯ ಮೇಯರ್ ಶ್ರೀ ಮಂಗೇಶ್ ಪವಾರ್ ಅವರು ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಅನೇಕ ಗಣ್ಯರು ಉಪಸ್ಥಿತರಿದ್ದರು ? ಬಿಜೆಪಿ ನಾಯಕಿ ಡಾ. ಸೋನಾಲಿ ಸಾರ್ನೋಬತ್, ಕಿಸ್ನಾ ಡೈಮಂಡ್ ಅಂಡ್ ಗೋಲ್ಡ್‌ನ ಮಾರ್ಕೆಟಿಂಗ್ ಮುಖ್ಯಸ್ಥೆ ಮಿಸಸ್ ಟ್ವಿಂಕಲ್, ಶ್ರೀ ರಾಮ್ ಇನವೇಶನ್ಸ್‌ನ ಮಾಲೀಕರಾದ ಶ್ರೀ ಸಚಿನ್ ಹಂಗಿರ್ಗೆಕರ, ಮುತೂತ್ ಫಿನ್‌ಕಾರ್ಪ್‌ನ ಹಿರಾಲಾಲ್ ಹಾಗೂ ಅಂಬಿಕಾ ಮ್ಯಾಡಮ್, ಹಾಗೂ ರಾಜ್ಯ ಮಟ್ಟದ ಕ್ರಿಕೆಟ್ ಆಟಗಾರ್ತಿ ಶ್ರೇಯಾ ಪೋಟೆ.



ಜೈಂಟ್ಸ್ ಪರಿವಾರದ ಯೂನಿಟ್ ಸೆಕ್ರಟರಿ ಶ್ರೀ ತ್ರಿವೇದಿ, ಕ್ರೀಡಾ ಸಂಯೋಜಕ ಶ್ರೀ ಗಂಗಾಧರ್, ಮತ್ತು ಇತರ ಸದಸ್ಯರು ಉಪಸ್ಥಿತರಿದ್ದರು.

ಪಂದ್ಯದಲ್ಲಿ ಭಾಗವಹಿಸಿದ್ದ ತಂಡಗಳು: ಉಕ ವಾರಿಯರ್ಸ್, ಔಕಐ ಡೈನಾಮಿಕ್ ಗರ್ಲ್ಸ್, ಬೆಳಗಾವಿ ಪ್ಯಾಂಥರ್ಸ್, ಕೆ-ಎಲ್‌ಇ ಟೈಟಾನ್ಸ್, ಬೆಳಗಾವಿ ಬ್ಯಾಶರ್ಸ್, ಯೋಗಿನೀಸ್, ಸ್ಕ್ವಾಡ್ ಇಂಡಿಯಾ, ಮತ್ತು ಪವರ್ ರೇಂಜರ್ಸ್.

ಈ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಹಲವಾರು ಸಂಸ್ಥೆಗಳ ಸಹಕಾರ ದೊರೆತಿದೆ: ಕಿಸ್ನಾ ಡೈಮಂಡ್ಸ್ ಅಂಡ್ ಗೋಲ್ಡ್ ಜ್ಯುವೆಲ್ಲರ್ಸ್, ಶ್ರೀ ರಾಮ್ ಇನವೇಶನ್ಸ್, ಶ್ರೀ ಚೈತನ್ಯ ಅಕಾಡೆಮಿ, ಮುತೂತ್ ಫಿನ್‌ಕಾರ್ಪ್, ಡಾ. ಸಾರ್ನೋಬತ್ ಕ್ಲಿನಿಕ್, ಸಮರ್ಥ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ, ಕಿರಣ್ ಏರ್‌ಕಾನ್, ದಾರಗಶೆಟ್ಟಿ ಸೇಲ್ಸ್ & ಕೋ-ಆಪ್, ಮತ್ತು ಶ್ರೀ ಮಂಜುನಾಥ್ ಅಲ್ವಾಣಿ.

ಈ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಪಾತ್ರವಹಿಸಿದವರು: ಮಿಸಸ್ ಆರ್ತಿ ಶಾ (ಯೂನಿಟ್ ಡೈರೆಕ್ಟರ್), ಮಿಸಸ್ ಮೋನಾಲಿ ಶಾ (ಐಪಿಪಿ), ಕಾರ್ಯಕ್ರಮದ ಮುಖ್ಯಸ್ಥೆ ಮಿಸಸ್ ಅಸ್ಮಿತಾ ಜೋಶಿ, ಶ್ರೀ ಸಂತೋಷ್ ಚವಾಣ್, ಜೈಂಟ್ಸ್ ಪ್ರೈಡ್ ಸಾಹೆಲಿ ಅಧ್ಯಕ್ಷೆ ಮಿಸಸ್ ಜಿಗ್ನಾ ಶಾ, ಉಪಾಧ್ಯಕ್ಷೆ ಮಿಸಸ್ ರಶ್ಮಿ ಕಡಂ, ಹಾಗೂ ಎಲ್ಲಾ ಸದಸ್ಯರು.

“ಚಕ್ ದೇ” ಮಹಿಳಾ ಓಪನ್ ಕ್ರಿಕೆಟ್ ಟೂರ್ನಮೆಂಟ್ ಎಂಬುದು ಮಹಿಳಾ ಶಕ್ತೀಕರಣ ಹಾಗೂ ಕ್ರೀಡಾ ಸಾಮರ್ಥ್ಯವನ್ನು ಪ್ರತಿಬಿಂಬಿಸಿದ ಸ್ಮರಣೀಯ ಕಾರ್ಯಕ್ರಮವಾಗಿದ್ದು, ಬೆಳಗಾವಿಯ ಸಮುದಾಯಾಧಾರಿತ ಕ್ರೀಡಾಕೂಟಗಳಿಗೆ ಹೊಸ ಮಾದರಿ ನಿರ್ಮಿಸಿತು.

## ನೂತನ ಅಧ್ಯಕ್ಷರಾಗಿ - ಉಪಾಧ್ಯಕ್ಷರಾಗಿ ಮಹೇಶ್ ಪತ್ರಪ್ಪ ಹೊಂಗಲ್ ಆಯ್ಕೆ



ಬೈಲಹೊಂಗಲ - ಸಮೀಪದ ಯಕ್ಕುಂಡಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಶ್ರೀಮತಿ ಶೇಖವ್ವ ರವಿ ತಿಮ್ಮೇಶಿ ಮತ್ತು ಉಪಾಧ್ಯಕ್ಷರಾಗಿ ಮಹೇಶ್ ಪತ್ರಪ್ಪ ಹೊಂಗಲ್ ಆಯ್ಕೆಯಾಗಿದ್ದಾರೆ.

ಇವರಿಗೆ ಮಾಜಿ ಶಾಸಕ ಜಗದೀಶ ಮೆಟಗುಡ್ಡ ಅವರು ತಮ್ಮ ಗೃಹ ಕಚೇರಿಯಲ್ಲಿ ಮಾಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಶಿವಾನಂದ ಹೊಂಗಲ, ಯಕ್ಕುಂಡಿ ಗ್ರಾಮ ಪಂಚಾಯತಿ ಸದಸ್ಯರಾದ ಭಾಷಾ ದೊಡ್ಡಮನಿ, ಗೋರಿಮಾ ದಿನ್ನಿಮನಿ , ಕುಮಾರ ಲಮಾಣಿ, ಈರವ್ವ ಮಾದರ, ಖಾನಪ್ಪ ಮಾದರ, ಮಲ್ಲವ್ವ ಮಾದರ, ಸಾಹೇಬಿ ದಿನ್ನಿಮನಿ, ಪ್ರಕಾಶ ಪಾಶ್ಚಾಪೂರ, ಮಾಸಾಬಿ ಇಮ್ಮನ್ನವರ, ಹನಮಂತ ಗೌಡನ್ನವರ, ತಾ-ರಿಫ್ ಮುಜಾವರ, ಮಂಡಲ ಅಧ್ಯಕ್ಷರಾದ ಸುಭಾಸ ತುರಮರಿ, ಜಿಲ್ಲಾ ಉಪಾಧ್ಯಕ್ಷರಾದ ಗುರು ಮೆಟಗುಡ್ಡ ,ಮಂಡಲ ಮಾಜಿ ಅಧ್ಯಕ್ಷರಾದ ಗುರುಪಾದ ಕಳ್ಳಿ, ಯುವ ಮುಖಂಡರಾದ ಶಿವಾನಂದ ಬಡ್ಡಿಮನಿ, ಮಂಡಲ ಪ್ರಧಾನ ಕಾರ್ಯದರ್ಶಿ ಲಕ್ಕಪ್ಪ ಕಾರಗಿ, ಜಿಲ್ಲಾ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಂತೋಷ ಹಡಪದ, ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಸದಾಶಿವ ಪಾಟೀಲ, ಮಲ್ಲಪ್ಪ ಬೆಳಗಾವಿ ಹಾಗೂ ಪಕ್ಷದ ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

***

## ವಿಶ್ವ ತಂಬಾಕು ರಹಿತ ದಿನಾಚರಣೆ

# ಯುವಜನತೆ ತಂಬಾಕು ಸೇವನೆಯಿಂದ ದೂರವಿರಬೇಕು



ಕೊಪ್ಪಳ : ತಂಬಾಕು ಆರೋಗ್ಯಕ್ಕೆ ಹಾನಿಕಾರಕವಾಗಿದ್ದು, ಯುವಜನತೆ ತಂಬಾಕು ಸೇವನೆಯಿಂದ ದೂರವಿರಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಹೇಳಿದರು.

ಅವರು ಶನಿವಾರ ಕೊಪ್ಪಳದ ಚುಕ್ಕನಕಲ್ಲ ರಸ್ತೆಯ ಶ್ರೀ ಚೈತನ್ಯ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಸರ್ವೇಕ್ಷಣಾ ಘಟಕ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿ ವರ್ಷ ಮೇ 31ರಂದು “ವಿಶ್ವ ತಂಬಾಕು ರಹಿತ ದಿನಾಚರಣೆ” ಕಾರ್ಯಕ್ರಮವನ್ನು ಆಚರಿಸಿ, ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. ಜನಸಾಮಾನ್ಯರನ್ನು ತಂಬಾಕಿನ ದುಷ್ಪರಿಣಾಗಳಿಂದ ರಕ್ಷಿಸಲು ಭಾರತ ಸರ್ಕಾರವು ಒಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಬಗ್ಗೆ 2003ರಲ್ಲಿ ಕೊಟ್ಪಾ (ಅಔಖಿ-ಕಂ) ಕಾಯ್ದೆಯನ್ನು ಜಾರಿಗೊಳಿಸಿದೆ. ಸೆಕ್ಷನ್-4 ಪ್ರಕಾರ ಸಾರ್ವಜನಿಕ ಸ್ಥಗಳಲ್ಲಿ ಧೂಮಪಾನ ಮಾಡುವುದು ನಿಷೇಧ, ಸೆಕ್ಷನ್-5ರ ಪ್ರಕಾರ ತಂಬಾಕು ಉತ್ಪನ್ನಗಳ ನೇರ ಹಾಗೂ ಪರೋಕ್ಷ ಜಾಹೀರಾತು, ಉತ್ತೇಜನ ಪ್ರಯೋಜಕತೆ ನಿಷೇಧ, ಸೆಕ್ಷನ್-6(ಅ) ತಂಬಾಕು ಉತ್ಪನ್ನಗಳು ಅಪ್ರಾಪ್ತ ವಯಸ್ಕರಿಗೆ (18 ವರ್ಷದೊಳಗಿನ ಮಕ್ಕಳು) ಸಿಗದಂತೆ ನಿಯಂತ್ರಣ ಮಾಡುವುದು, ಸೆಕ್ಷನ್-6(ಆ) ಪ್ರಕಾರ ಅಪ್ರಾಪ್ತ ವಯಸ್ಕರಿಗೆ ತಂಬಾಕು ಉತ್ಪನ್ನಗಳ ಮಾರಾಟ ಮಾಡುವುದು ಹಾಗೂ ಅಪ್ರಾಪ್ತ ವಯಸ್ಕರಿಂದ ತಂಬಾಕು ಉತ್ಪನ್ನಗಳ ಮಾರಾಟ ಮಾಡಿಸುವುದು ಶಿಕ್ಷಾರ್ಹ ಅಪರಾಧ, ಸೆಕ್ಷನ್-6 ಪ್ರಕಾರ ಶಿಕ್ಷಣ ಸಂಸ್ಥೆಗಳ 100 ಅಂತರ ಗಜಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ, ಸೆಕ್ಷನ್-7, 8 ಮತ್ತು 9 ಪ್ರಕಾರ ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ ಮೇಲೆ ನಿರ್ಧಿಷ್ಠ ಆರೋಗ್ಯ ಎಚ್ಚ-ರಿಕೆಗಳ ಸಂದೇಶಗಳಿಲ್ಲದೆ ಮಾರುವುದನ್ನು ನಿಷೇಧಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಕೊಟ್ಪಾ ಕಾಯ್ದೆ-2003 ಕಲಂ 20ರ ಅಡಿಯಲ್ಲಿ ದಂಡ ಮತ್ತು ಜೈಲು ಶಿಕ್ಷೆಗೆ ಒಳಪಡಿಸಲಾಗುವುದು. ಯುವಜನತೆ ತಂಬಾಕು ಸೇವನೆಯಿಂದ ದೂರವಿರಬೇಕು. ತಂಬಾಕು ಸೇವೆನೆ ಬಿಟ್ಟು ಬದುಕನ್ನು ಆಯ್ದುಕೊಳ್ಳಿ ಈ ವಿಷಯವನ್ನು ವಿದ್ಯಾರ್ಥಿಗಳು ತಮ್ಮ ತಮ್ಮ ಗ್ರಾಮಗಳಲ್ಲಿ, ಸುತ್ತ-ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸಿ, ತಂಬಾಕು ಮುಕ್ತ ಪರಿಸರ ನಿರ್ಮಿಸಲು ಕರೆ ನೀಡಿದರು.

ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಲಿಂಗರಾಜು ಟಿ. ಅವರು ಕಾರ್ಯಕ್ರಮ ಕುರಿತು ಮಾತನಾಡಿ, ಪ್ರತಿ ವರ್ಷ ಮೇ 31ರಂದು “ವಿಶ್ವ ತಂಬಾಕು ರಹಿತ ದಿನಾಚರಣೆ” ಕಾರ್ಯಕ್ರಮವನ್ನು ಆಚ-ರಿಸಲಾಗುತ್ತದೆ. ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಸಿಗರೇಟ್, ಬೀಡಿ, ಸಿಗಾರ್, ಹುಕ್ಕಾ ತಂಬಾಕು ವಿಧಗಳಾಗಿವೆ. ತಂಬಾಕು ಸೇವನೆಯಿಂದಾಗುವ ಕ್ಯಾನ್ಸರ್ ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಕಾಯಿಲೆ, ಲಕ್ವಾ ಇತರೆ ಕಾಯಿಲೆಗಳು ಬರಬಹುದು. ಪ್ರತಿ ಸಿಗರೇಟ್, ಬೀಡಿ ಸೇವನೆಯಿಂದ 7 ನಿಮಿಷ ಆಯುಷ್ಯ ಕಡಿಮೆ ಮಾಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸುತ್ತದೆ. ತಂಬಾಕಿನಲ್ಲಿ ನಿಕೋಟಿನ್ ಎಂಬ ವಿಷಕಾರಕ ಪದಾರ್ಥ ಇರುತ್ತದೆ. ಇದರಲ್ಲಿ 3000 ದಿಂದ 4000 ಅಪಾಯಕಾರಿ ರಾಸಾಯಿನಿಕ ವಿಷಾನಿಲಗಳು ಇರುತ್ತವೆ. ಮಹಿಳೆಯರಲ್ಲೂ ತಂಬಾಕು ಸೇವನೆಯಿಂದ ಗರ್ಭಪಾತ, ಗರ್ಭಕಂಠದ ಕ್ಯಾನ್ಸರ್, ಕಡಿಮೆ ತೂಕವಿರುವ ಮಗುವಿನ ಜನನ ಹಾಗೂ ಶಿಶುಮರಣ ಸಂಭವಿಸುವ ಹೆಚ್ಚು ಸಾಧ್ಯತೆ ಇರುತ್ತದೆ. ಪ್ರತಿ ವರ್ಷ ವಿಶ್ವದಾದ್ಯಂತ 60 ಲಕ್ಷಕ್ಕಿಂತ ಹೆಚ್ಚು ಜನರು ತಂಬಾಕು ಸೇವನೆಯಿಂದ ಉಂಟಾಗುವ ಕಾಯಿಲೆಗಳಿಂದ ಸಾವನ್ನಪ್ಪುತ್ತಿದ್ದಾರೆ. ಇಂದಿನ ಯುವ ಪೀಳಿಗೆ ತಂಬಾಕು ಸೇವನೆಯಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ ಅವರು ಮಾತನಾಡಿ, ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮವನ್ನು ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳ ಆಕರ್ಷಣೆಯನ್ನು ಬಹಿರಂಗಪಡಿಸುವುದು” ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಈ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ತಂಬಾಕು ಸೇವನೆಯಿಂದಾಗುವ ಕ್ಯಾನ್ಸರ್ ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಕಾಯಿಲೆ, ಲಕ್ವಾ ಇತರೆ ಕಾಯಿಲೆಗಳು ಬರಬಹುದು. ಪ್ರತಿ ಸಿಗರೇಟ್/ಬೀಡಿ ಸೇವನೆಯಿಂದ 7 ನಿಮಿಷ ಆಯುಷ್ಯ ಕಡಿಮೆ ಮಾಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸುತ್ತದೆ. ಆದ್ದ-ರಿಂದ ತಂಬಾಕು ಸೇವನೆಯಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ತಿಳಿಸಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ್ ಎಂ.ಹೆಚ್. ಅವರು ಮಾತನಾಡಿ, ತಂಬಾಕು ತ್ಯಜಿಸುವುದರಿಂದ ಮತ್ತು ವ್ಯಸನಿಗಳು ನಿಲ್ಲಿಸಿದ ಕ್ಷಣದಿಂದ ಶ್ವಾಸಕೋಶ ಮತ್ತು ಹೃದಯ ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ ಎಂದು ವಿವರವಾಗಿ ಮಾತನಾಡಿದರು.

ಶ್ರೀ ಚೈತನ್ಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ ಸತೀಶ ಕುಮಾರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಶಶಿಧರ ಎ., ಜಿಲ್ಲಾ ಕುಷ್ಠರೋಗ ನಿರ್ಮೂಲಣಾ ಅಧಿಕಾರಿ ಡಾ.ಪ್ರಕಾಶ ಹೆಚ್., ತಾಲೂಕಾ ಆರೋಗ್ಯಾಧಿಕಾರಿ ಡಾ.ರಾಮಾಂಜನೇಯ, ಕೊಪ್ಪಳ ವೈದ್ಯಕೀಯ ಮಹಾವಿದ್ಯಾಲಯದ ಸೋಸಿಯಲ್ ಮೆಡಿಸಿನ್ ವಿಭಾಗದ ಡಾ.ಮನು, ಡಾ.ಅಂಜಲಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರರು, ಸಮಾಜ ಕಾರ್ಯಕರ್ತರು, ಆಪ್ತಸಮಾಲೋಚಕರು ಎನ್.ಸಿ.ಡಿ/ಯು.ಹೆಚ್.ಸಿ ಸಂಯೋಜಕರು ಹಾಗೂ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾ-ರಿಗಳು, ಕೊಪ್ಪಳ ತಾಲೂಕಾ ಆರೋಗ್ಯಾಧಿಕಾ-ರಿಗಳ ಕಛೇರಿಯ ಮೇಲ್ವಿಚಾರಕರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಅಪೂರ್ವ ಮತ್ತು ಪವಿತ್ರಾ ಪ್ರಾರ್ಥನೆ ಮಾಡಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಕೆ. ಅವರು ಸ್ವಾಗತಿಸಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ, ಕೊಪ್ಪಳ ಇವರು ಕಾರ್ಯಕ್ರಮ ನಿರೂಪಿಸಿದರು, ಶಾಂತ ಕೆ ಅವರು ಕೊನೆಯಲ್ಲಿ ವಂದಿಸಿದರು.

## ಮಹಿಳೆಯರು ಗಂಗೆ ಸ್ಥಳಕ್ಕೆ ಹೋಗಿ ಪೂಜೆ ಸಲ್ಲಿಕೆ



ಯರಗಟ್ಟಿ : ಸಮೀಪದ ಕಟಕೋಳ ಗ್ರಾಮದ ಆರಾಧ್ಯ ದೇವತೆ ಗ್ರಾಮದೇವಿಯರ ಜಾತ್ರೆ ಭಾನುವಾರ ಅದ್ದೂರಿಯಾಗಿ ಜರುಗಿತು. 15 ವರ್ಷಕ್ಕೊಮ್ಮೆ ಜರುಗುವ ಜಾತ್ರೆಗೆ ಗ್ರಾಮದ ಭಕ್ತರಿಂದ ಕಳೆದ 5 ದಿನಗಳಿಂದ ಕಾರ್ಯಕ್ರಮದ ಕುರಿತು ಪೂರ್ವ ತಯಾರಿ ನಡೆಸಲಾಗಿತ್ತು. 9ದಿನಗಳ ಕಾಲ ಜಾತ್ರೆ ಜರುಗುತ್ತಿದ್ದು, ಶನಿವಾರದಿಂದಲೇ ದೇವಿಗೆ ನಾನಾ ಪೂಜೆ ಕಾರ್ಯಕ್ರಮ ಜರುಗಿದವು. ಶನಿವಾರ ಬೆಳಗ್ಗೆಯಿಂದ ವಾದ್ಯ ವೈಭವದೊಂದಿಗೆ ಮಹಿಳೆಯರು ಗಂಗೆ ಸ್ಥಳಕ್ಕೆ ಹೋಗಿ ಪೂಜೆ ಸಲ್ಲಿಸಿದರು. ನಂತರ ನಾಲ್ಕು ಸಾವಿರಕ್ಕೂ ಹೆಚ್ಚು ಸುಮಂಗಲೆಯರಿ ಉಡಿತುಂಬುವ ಕಾರ್ಯಕ್ರಮ ಸಂಪ್ರದಾಯದಂತೆ ಜರುಗಿತು.

## ಘಟಪ್ರಭಾದಿಂದ 1200 ಕ್ಯೂಸೆಕ್ ನೀರು ರಾಯಬಾಗ ಮತಕ್ಷೇತ್ರದ ಎಲ್ಲ ಕಾಲುವೆಗಳಿಗೆ ನೀರು



ರಾಯಬಾಗ: ನೀರಿನ ಅಭಾವ ಆಗದಂತೆ ಮುನ್ನೆಚ್ಚ-ರಿಕೆ ಕ್ರಮವಾಗಿ ತಾಲೂಕಿನ ಎಲ್ಲ ಕಾಲುವೆಗಳಿಗೆ ಹಿರಣ್ಯಕೇಶಿ ನದಿ ನೀರು ಹರಿಬಿಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರ ಆಪ್ತ ಸಹಾಯಕ ಶಿವನಗೌಡ ಪಾಟೀಲ ಹೇಳಿದರು.

ಸೋಮವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಯಬಾಗ ಕ್ಷೇತ್ರಕ್ಕೆ ನೀರು ಕಡಿಮೆ ಬೀಳಬಾರದು ಎಂದು ಘಟಪ್ರಭಾದಿಂದ 1200 ಕ್ಯೂಸೆಕ್ ನೀರು ರಾಯಬಾಗ ಮತಕ್ಷೇತ್ರದ ಎಲ್ಲ ಕಾಲುವೆಗಳಿಗೆ ನೀರು ಹರಿಸಲಾಗಿದೆ. ಅಲ್ಲದೇ ರಾಯಬಾಗ ಪಟ್ಟಣದ ಕುಡಿಯುವ ನೀರಿನ ಮೂಲವಾದ ಹುಲ್ಯಾಳ ಕೆರೆಯನ್ನು ಸಹಿತ ಭರ್ತಿ ಮಾಡಲಾಗಿದೆ ಎಂದರು. ತಾಲೂಕಿನ ಅಳಗವಾಡಿ, ನಿಡಗುಂದಿ, ರಾಯಬಾಗ, ಮೊರಬ ಬೆಕ್ಕೇರಿ, ಕಂಚಕರವಾಡಿ, ದಿಗ್ಗೇವಾಡಿ, ಬಾವನಸೌಂದತ್ತಿ ಹಾಗೂ ಚಿಕ್ಕೋಡಿ ಸಿಬಿಸಿ ಕಾಲುವೆಗೆ ಅರ್ಧ ಟಿಎಂ ನೀರು ಬಿಡಲಾಗಿದೆ. ಈ ನೀರಿನಿಂದ ರೈತರ ಬೋರವೆಲ್ ಗಳ ಅಂತರ್ಜಲಮಟ್ಟ ಹೆಚ್ಚುವುದರ ಜೊತೆಗೆ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ರಾಯಬಾಗ ಕ್ಷೇತ್ರ ಸಂಪೂರ್ಣ ನೀರಾವರಿಗೊಳಿಸಲು ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಪಣ ತೊಟ್ಟಿದ್ದಾರೆ ಎಂದರು. ರಾಯಬಾಗ ಕ್ಷೇತ್ರಕ್ಕೆ ನೀರು ಹರಿಸುತ್ತಿರುವುದರಿಂದ ಕ್ಷೇತ್ರದ ಜನರೂ ಸಹಿತ ಸಚಿವರಿಗೆ ಅಭಿನಂದಿಸಿದ್ದಾರೆ.

> “ ಈ ಭಾಗದಲ್ಲಿನ ಜನರಿಗೆ ನೀರು ಕೊರತೆ ಆಗಬಾರದು ಎಂದು ಸಚಿವರ ಆಶಯದಂತೆ ರಾಯಬಾಗ ಕ್ಷೇತ್ರದಲ್ಲಿ ಕಾಲುವೆಗೆ ನೀರು ಹ-ರಿಸಲಾಗಿದೆ.
>
> **-ಎಚ್. ಎಲ್. ಪೂಜೇರಿ,**
> **ಎಇಇ ರಾಯಬಾಗ, ಜೆ.ಎಲ್.ಬಿ.ಸಿ**

## ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: : ಜಿಲ್ಲೆಯ ಪ್ರವಾಸಿ ತಾಣಗಳನ್ನು ಉತ್ತೇಜಿಸಿ, ಪ್ರಚಾರ ಮಾಡುವ ಹಿನ್ನಲೆಯಲ್ಲಿ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು ಹಾವೇರಿ ಜಿಲ್ಲೆಯ ವಾಸಿಯಾಗಿರಬೇಕು, ವಾಸಸ್ಥಳ ದೃಡೀಕರಣ ಪ್ರಮಾಣ ಪತ್ರ ಹೊಂದಿರಬೇಕು. ಪಿ.ಯು.ಸಿ/ಪದವಿ ತೇರ್ಗಡೆಯಾಗಿರಬೇಕು, ನಿರುದ್ಯೋಗಿ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ,ಜನ್ಮ ಪ್ರಮಾಣ ಪತ್ರ, ಆಧಾರ ಮತ್ತು ಪ್ಯಾನ್ ಕಾರ್ಡ ಸೇರಿದಂತೆ ಅಗತ್ಯ ದಾಖಲೆಯೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 09-06-2025 ರ ಸಂಜೆ 4 ಗಂಟೆಯೊಳಗಾಗಿ ಸಲ್ಲಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕ-ರಿಸಲಾಗುವುದು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರ ಕಚೇ-ರಿಯಲ್ಲಿ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ, ‘ಎ’ ಬ್ಲಾಕ್ ಎರಡನೇ ಮಹಡಿ ಜಿಲ್ಲಾಡಳಿತ ಭವನ. ದೇವಗಿರಿ-ಹಾವೇರಿ. ದೂರವಾಣಿ ಸಂಖ್ಯೆ 08375-296033 ಸಂಪರ್ಕಿಸಲು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಲಮಟ್ಟಿ ಮುದ್ದೇಬಿಹಾಳ-ಯಾದಗಿರಿ ರೈಲು ಮಾರ್ಗಕ್ಕೆ ಸಂಸದರ ಭೇಟಿ

### ಶೀಘ್ರವಾಗಿ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಮನವಿ

ಮುದ್ದೇಬಿಹಾಳ: ಆಲಮಟ್ಟಿ ಮುದ್ದೇಬಿಹಾಳ,ಯಾದಗಿರ ರೈಲು ಮಾರ್ಗ ಕುರಿತು ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಇತ್ತೀಚೆಗೆ ಸಮೀಕ್ಷೆ ಮಾಡಲು ಮುಂದಾಗಿರುವುದು ರೈಲು ಮಾರ್ಗಕ್ಕೆ ಹೋರಾಟ ಮಾಡುತ್ತಿರುವ ಹುಣಸಗಿ ತಾಳಿಕೋಟೆ ಸುರಪುರ ಭಾಗದ ಹೋರಾಟಗಾರರ ತಂಡವು ಲೋಕಸಭಾ ಸಂಸದ ರಮೇಶ್ ಜಿಗಜಿಣಗಿ ಅವರನ್ನು ತಯ ಸ್ವಗೃಹದಲ್ಲಿ ಭೇಟಿ ನೀಡಿ ಈ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಮನವಿ ಮಾಡಲಾಯಿತು.



ಸ್ವಾತಂತ್ರ್ಯ ಪೂರ್ವದಲ್ಲಿ 1929ರ ಸುಮಾರಿಗೆ ಬ್ರಿಟಿಷ್ ರೈಟ್ ಕಂಪನಿಯ ಉದ್ದೇಶಿತ ಈ ರೈಲು ಮಾರ್ಗ ಹಲವಾರು ಕಾರಣಗಳಿಂದ ನೆನೆಗುದ್ದಿಗೆ ಬಿದ್ದಿದೆ. ಈ ಭಾಗದ ಜನತೆ ಬಹು ದಿನಗಳಿಂದ ನಿರ್ಮಾಣಕ್ಕೆ ಒತ್ತಾಯಿಸುತ್ತಲೆ ಬಂದಿದ್ದಾರೆ.

ಈ ಕುರಿತು ರಾಯಚೂರು ಸಂಸದ ಕುಮಾರನಾಯಕ ಅವರು ಕಳೆದ ವರ್ಷ ವಿಶೇಷ ಪ್ರಯತ್ನವನ್ನು ಮಾಡಿ ರೈಲ್ವೆ ಇಲಾಖೆಯಿಂದ ಮತ್ತೊಮ್ಮೆ ಆರ್ಥಿಕ ಮತ್ತು ಸಾಮರ್ಥ್ಯದ ಸಮೀಕ್ಷೆಯನ್ನು ಮಾಡುವ ಒಪ್ಪಿಗೆಯನ್ನು ಪಡೆದಿದ್ದರು. ಈ ಕುರಿತು ಸಂಸದರೊಂದಿಗೆ ಪ್ರಸ್ತಾಪಿಸಿದ ಹೋರಾಟಗಾರರು ಯೋಜನೆಯ ನಿರ್ಮಾಣದಿಂದ ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತು ರಾಯಚೂರು ಭಾಗದ ಉತ್ತರ ಕರ್ನಾಟಕ ಮತ್ತು ಕಲ್ಯಾಣಕರ್ನಾಟಕದ ಜಿಲ್ಲೆಗಳಿಗೆ ಬಹಳಷ್ಟು ಸಂಪರ್ಕ ಉಪಯೋಗ ಆಗುತ್ತದೆ ಕಾರಣ. ತಾವು ಸಹ ಯೋಜನೆಯ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಆರ್.ಎಸ್. ಪಾಟೀಲ (ಕುಚಬಾಳ) ನಿಯೋಗಕ್ಕೆ ಮಾರ್ಗದರ್ಶನ ಮಾಡಿದರು. ಹೋರಾಟಗಾರರಾದ ಅರವಿಂದ ಲದ್ದಿಮಠ, ಚಂದ್ರಶೇಖರ ದಂಡಿನ, ಆರ್.ವಿ. ಜಾಲವಾದಿ,ಕಿರಣ ಪಾಟೀಲ, ಬಸನಗೌಡ ಪಾಟೀಲ, ಶಿವನಗೌಡ ಪಾಟೀಲ, ಜಯಪ್ರಕಾಶ ಉಪನಾಳ ಸೇ-ರಿದಂತೆ ಉಪಸ್ಥಿತರಿದ್ದರು.

# ಸೈಕಲ್ ಸವಾರರಲ್ಲಿ ಹೆಲ್ಮೆಟ್ ಜಾಗೃತಿ




ಯರಗಟ್ಟಿ: ಅಪರಾಧ ತಡೆಗಟ್ಟಲು ಹಾಗೂ ಹೆಲ್ಮೆಟ್ ಜಾಗೃತಿ ಮೂಡಿಸಲು ಮುರಗೋಡ ಪೊಲೀಸರು ಸೈಕಲ್ ಜಾಥಾ ನಡೆಸುವ ಮೂಲಕ ಸಾರ್ವ ಜನಿಕರಲ್ಲಿ ಜಾಗೃತಿ ಮೂಡಿಸಿದರು.

ಅಪರಾಧ ತಡೆ ಹಾಗೂ ಹೆಲ್ಮೇಟ್ ಜಾಗೃತಿ ಅಂಗವಾಗಿ ಮುರಗೋಡ ಪೊಲೀಸ್ ಠಾಣೆಯ ವ್ಯಾಪ್ತಿಯ ರಸ್ತೆಯಲ್ಲಿ ಆಯೋಜಿಸಿದ್ದ ಸೈಕಲ್ ಜಾಥಾಗೆ ಸಿಪಿಐ ಆಯ್ ಎಂ ಮಠಪತಿ ಅವರು ಹಸಿರು ನಿಶಾನೆ ತೋರುವ ಮೂಲಕ ಉದ್ಘಾಟಿಸಿದರಲ್ಲದೆ, ತಾವೂ ಸೈಕಲ್ ತುಳಿದು, ಸ್ವಲ್ಪ ದೂರ ಜಾಥಾದಲ್ಲಿ ಸಾಗಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೂಲಕ ಸಂಚ-ರಿಸಿದ ಜಾಥಾವು ಮರಳಿ ಪೊಲೀಸ್ ಠಾಣೆಯಲ್ಲಿ ಅಂತ್ಯಗೊಂಡಿತು.

ಗ್ರಾಮದ ಕಟ್ಟಡದ ಗೋಡೆ ಮೇಲೆ ಅಪರಾಧ ಕೃತ್ಯ ತಡೆಗಟ್ಟುವ ಹಾಗೂ ಹೆಲ್ಮೇಟ್ ಕುರಿತು ಅರಿವು ಮೂಡಿಸುವ ಚಿತ್ರಗಳನ್ನು ಕಲಾವಿದರು ಬಿಡಿಸಿದ್ದು, ಜಾಗೃತಿ ಘೋಷಣೆಗಳನ್ನು ಬರೆದಿದ್ದಾರೆ. ಇದೇ ವೇಳೆ ನಾಗರಿಕರಿಗೂ ಭಿತ್ತಿ ಪತ್ರಗಳನ್ನು ವಿತರಿಸಲಾಯಿತು.

ಪಿಎಸ್‌ಐ ಎಲ್ ಬಿ ಮಾಳಿ, ಎಎಸ್‌ಐ ವಾಯ್. ಎಂ. ಕಡಕೋಳ, ಎಸ್ ಎಂ ಜವಳಿ, ಎಸ್ ಎಂ ಜೈನರ, ಎಸ್ ಎಚ್ ಹಾದಿಮನಿ, ಎಸ್. ಐ. ಅಮರಾಪುರ, ಆರ್. ಎಫ್. ಕಟಗಿ, ಕೆ. ಆರ್. ಮುನವಳ್ಳಿ, ಎಸ್. ಎಸ್. ಹುಂಬಿ, ಐ. ಎಸ್. ವಕ್ಕುಂದ, ಎಮ್. ಎಸ್. ಅಗಶಿಮನಿ, ವಾಯ್. ಎಂ. ಮೇಟಿ, ವಾಯ್. ಎನ್. ಮೇಟ್ಯಾಳ, ಆಯ್. ಪಿ. ಸಂಗೊಳ್ಳಿ ಇತರರು ಈ ಸಂದರ್ಭ ಭಾಗವಹಿಸಿದ್ದರು.




**ಗೋಕಾಕ: ಪೌರ ಕಾರ್ಮಿಕ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರಕಾರಕ್ಕೆ ಒತ್ತಾಯಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದಿಂದ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಿದರು. ಜಿಲ್ಲಾಧ್ಯಕ್ಷ ಆರ್ ಕೆ ಭವಾನೆ, ಕಾರ್ಯದರ್ಶಿ ಸುಭಾಷ ಸಾಯನ್ನವರ, ಖಜಾಂಚಿ ರಮೇಶ ತಂಗೆವ್ವಗೋಳ, ಸಿದ್ದಪ್ಪ ಬಾಣಕಾರಿ, ರಾಮಕೃಷ್ಣ ಮನ್ನಿಕೇರಿ, ಆರ್ ಎಮ್ ಗಣಾಚಾರಿ, ನಿಂಗಪ್ಪ ಗದಾಡಿ ಇದ್ದರು.**

# ಸಚಿವ ಎಚ್.ಕೆ.ಪಾಟೀಲರಿಂದ ಪತ್ರಿಕಾ ಗೋಷ್ಠಿ

ಗದಗ : ಗದಗ ಜಿಲ್ಲೆಗೆ ಜೂನ 3 ರಂದು ಮುಖ್ಯಂತ್ರಿಗಳು ಆಗಮಿಸಿ ಲಕ್ಕುಂಡಿ ಐತಿಹಾಸಿಕ ಸ್ಥಳದಲ್ಲಿ ನಮ್ಮ ಪರಂಪರೆಯನ್ನು ಪೂರ್ಣ ಪ್ರಮಾಣದಲ್ಲಿ ತಿಳಿಸುವಂತಹ, ಯುನೆಸ್ಕೋ ಅವರ ಜಾಗತಿಕ ಪ್ರವಾಸಿ ತಾಣ ಆಗುವ ಎಲ್ಲ ಅರ್ಹತೆ, ಆಕರ್ಷಣೆ ಹೊಂದಿರುವ ಲಕ್ಕುಂಡಿ ಸ್ಥಳದಲ್ಲಿ ಉತ್ಖನನ ಕಾರ್ಯಕ್ಕೆ ಚಾಲನೆ ನೀಡುವರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಅವರು ಹೇಳಿದರು.

ನಗರದ ಉಪವಿಭಾಗಾಧಿಕಾರಿಗಳ ಕಟ್ಟದಲ್ಲಿರುವ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಕಚೇರಿಯಲ್ಲಿ ಜರುಗಿದ ಪತ್ರಿಕಾ ಗೋಷ್ಠಿಯಲ್ಲಿ ಸಚಿವರು ಮಾತನಾಡಿದರು.

ಸಿಎಂ ಸಿದ್ದರಾಮಯ್ಯ ಅವರು ನಂತರ ಲಕ್ಕುಂಡಿಯ ಬಯಲು ಪ್ರಾಚ್ಯಾವಶೇಷಗಳ ವಸ್ತು ಸಂಗ್ರಾಹಲಯದ ವೀಕ್ಷಣೆ ಮಾಡಿ ಕಾಶಿ ವಿಶ್ವನಾಥ ದೇಸವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿಂದ ಗದಗ ನಗರಕ್ಕೆ ಆಗಮಿಸುವರು. ಮಧ್ಯಾಹ್ನ 12.50 ಗಂಟೆಗೆ ಗದಗ ನಗರದ ಶ್ರೀ ಸ್ವಾಮಿ ವಿವೇಕಾನಂದ ಭವನದಲ್ಲಿ ಕರ್ನಾಟಕ ಕುರುಬರ ಸಂಘ ಮತ್ತು ಕರ್ನಾಟಕ ಕುರಬರ ಸಹಕಾರಿ ಪತ್ತಿನ ಸಂಘದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದರು.

ತದ ನಂತರ ಮಧ್ಯಾಹ್ನ 3.30 ಗಂಟೆಗೆ ಗದಗ ಕೋ- ಆಪರೇಟೀವ್ ಇಂ-ಡಸ್ಟ್ರೀಯಲ್ ಎಸ್ಟೇಟ್ ಆವರಣಕ್ಕೆ ಆಗಮಿಸಿ ಜಿ.ಎನ್.ಟಿ.ಟಿ.ಎಫ್ ಸಂಸ್ಥೆ ಉದ್ಘಾಟನೆ ಗೊಳಿಸುವರು. ಸಾಯಂಕಾಲ 4.30 ಗಂಟೆಗೆ ಜಿಲ್ಲಾ ರಂಗಮಂದಿರದಲ್ಲಿ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮಥತು ವಸ್ತುಪ್ರದರ್ಶನ ಪ್ರಾಧಿಕಾರದ ಉದ್ಘಾಟನೆ ಹಾಗು 34 ಎಕರೆ ಪ್ರದೇಶದ ಪ್ರಾಧಿಕಾರದ ಪರಿಕಲ್ಪನೆ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಸಚಿವ ಎಚ್ ಕೆ ಪಾಟೀಲ ತಿಳಿಸಿದರು.




ನಂತರ ಮಾತನಾಡಿದ ಅವರು ಲಕ್ಕುಂಡಿಂ-ಯಲ್ಲಿ ಉತ್ಖನನಕ್ಕೆ ಚಾಲನೆ ನೀಡುವುದು ಮುಖ್ಯವಾದ ಕಾರ್ಯಕ್ರಮವಾಗಿದೆ. ಇದ-ರಿಂದಾಗಿ ಲಕ್ಕುಂಡಿಯನ್ನು ಯುನೆಸ್ಕೋದ ಜಾಗತಿಕ ಪ್ರವಾಸಿ ತಾಣವನ್ನಾಗಿಸಲು ಅನುಕೂಲವಾಗಲಿದೆ. ಉತ್ಖನನಕ್ಕೆ ಬೇಕಾದಂತಹ ಅನುದಾನವನ್ನು ನೀಡುವದಕ್ಕೆ ಮುಖ್ಯಂಮತ್ರಿಯವರು ಭರವಸೆ ನೀಡಿದ್ದು ಉತ್ಖನನ ಕಾರ್ಯವನ್ನು ವೈಜ್ಞಾನಿಕವಾಗಿ ಆರ್ಥಿಕ ಅಡಚಣೆಯಾಗದಂತೆ ನಡೆಸಲಾಗುವದು. ಮೊದಲನೆ ಹಂತದಲ್ಲಿ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನಕ್ಕೆ ಚಾಲನೆ ನೀಡಲಾಗುವದು. ಈ ಕಾರ್ಯಕ್ಕೆ ಪ್ರದೇಶಗಳನ್ನು ಗುರುತಿಸಿ ಒಪ್ಪಿಗೆ ಪಡೆದ ನಂತರವೇ ಪ್ರಾರಂಭಿಸಲಾಗುವದು. ಪ್ರಾಚ್ಯವಸ್ತುಗಳ ಅನ್ವೇಷಣೆಗೆ ಲಕ್ಕುಂಡಿ ಗ್ರಾಮಸ್ಥರು ಸ್ವಯಂ ಪ್ರೇರಿತವಾಗಿ ಮುಂದೆ ಬಂದಿದ್ದು, ಮೊದಲನೆ ಅಭಿಯಾನದಲ್ಲಿಯೇ ಅಂದಾಜು 1200ಕ್ಕಿಂತ ಹೆಚ್ಚಲು ಅವಶೇಷಗಳು ದೊರಕಿವೆ. ಈಗಾಗಲೇ ಲಕ್ಕುಂಡಿ ಗ್ರಾಮದ ಐದು ಮನೆಯವರು ಮುಂದೆ ಬಂದು ಉತ್ಖನನಕ್ಕೆ ತಮ್ಮ ಮನೆ ಬಿಟ್ಟು ಕೊಡುವದಾಗಿ ತಿಳಿಸಿರುತ್ತಾರೆ. ಲಕ್ಕುಂಡಿಯಲ್ಲಿನ ಇಪ್ಪತ್ತೇಳು ಮನೆಗಳು ತೆರವಾದರೆ ಅಲ್ಲಿನ ಐದು ದೇವಸ್ಥಾನಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಮನೆಗಳ ಸ್ಥಳಾಂತರಕ್ಕೆ ಮನೆ ಮಾಲಿಕರೊಂದಿಗೆ ಚರ್ಚಿಸಲಾಗಿದೆ ಎಂದು ಅವರು ಹೇಳಿದರು.

ರಾಜ್ಯ ಸರ್ಕಾರವು ಸಿವಿಲ್ ಪ್ರೊಸಿಸರ್ ಕೋರ್ಟ ತಿದ್ದುಪಡಿ ಮಾಡಿ ಕೇಸ್ ಮ್ಯಾನೆಜಮೆಂಟ್ ಸಿಸ್ಟಮಗೆ ರಾಷ್ಟ್ರಪತಿಗಳು ಅಂಕಿತ ಹಾಕಿದ್ದು ವ್ಯಾಜ್ಯದಲ್ಲಿ ಸಿ.ಪಿ.ಸಿ ಅಮೆಂಡಮೆಂಟ್ 2 ಜಾರಿಗೆ ಬಂದಿದೆ ಇದರಲ್ಲಿ ಸಿವಿಲ್ ಕೇಸಗೆ ಕಡ್ಡಾಯವಾಗಿ ರಾಜಿಗೆ ಅವಕಾಶ ಮಾಡಿಕೊಡಲಾಗುವದು. ಈ ಸಮಯದಲ್ಲಿ ರಾಜಿ ಆಗದೆ ಇದ್ದಲ್ಲಿ ನ್ಯಾಯಾಲಯದಲ್ಲಿ ಕೇಸ್ ಪ್ರಾರಂಭವಾದ ದಿನದಿಂದ ಕೇಸ್ ತೀರ್ಪ ಕೊಡುವ ದಿನಾಂಕವನ್ನು ನಿಗದಿಪಡಿಸುವದರ ಮೂಲಕ ಕ್ರಾಂತಿಕಾರಕ ಬದಲಾವಣೆ ತರಲಾಗಿದೆ. ನ್ಯಾಯ ವಿಧಾನ ಪದ್ಧತಿಯಲ್ಲಿ ವಿಶೇಷ ಸುಧಾರಣೆಗಳನ್ನು ಕಾಣುತ್ತಿದ್ದೇವೆ. ಶ್ರೀ ಸಾಮಾನ್ಯರ ಪ್ರಕರಣಗಳು ಎರಡು ವರ್ಷಗಳೊಳಗಾಗಿ ಪೂರ್ಣಗೊಳಿಸುವದರ ಮೂಲಕ ಜನ ಸಾಮಾನ್ಯರಿಗೆ ಆರ್ಥಿಕ ಹೊರೆಯಾಗದಂತೆ ನ್ಯಾಯ ಒದಗಿಸಲು ಈ ಕಾನೂನು ತಿದ್ದುಪಡಿ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಮುಂಗಾರು ಪ್ರಾರಂಭವಾದ ಹಿನ್ನಲೆಯಲ್ಲಿ ರೈತರಿಗೆ ವಿತರಿಸುವ ಬಿತ್ತನೆ ಬೀಜ ಕಳಪೆಯಾಗಿದ್ದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವದು ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷರಾದ ಬಿ.ಬಿ.ಅಸೂಟಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರಸಾಬ್ ಬಬರ್ಚಿ,ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಗದಗ ತಾಲೂಕ ಅಧ್ಯಕ್ಷ ಅಶೋಕ ಮಂದಾಲಿ, ಬಸವರಾಜ ಕಡೇಮನಿ ಉಪಸ್ಥಿತರಿದ್ದರು.

# ಶಿಕ್ಷಣದಿಂದ ಮಾತ್ರ ಬಡತನ ನಿರ್ಮೂಲನೆ ಸಾಧ್ಯ



ಧಾರವಾಡ :ಮೇ 31 : ನಮ್ಮೆಲ್ಲರ ಬದುಕಿನಲ್ಲಿ ತುಂಬಾನೇ ಗುರುಗಳಿರುತ್ತಾರೆ, ಆದರೆ ಕೆಲವೊಂದು ಗುರುಗಳು ನಮ್ಮ ಬದುಕನ್ನು ರೂಪಿಸುವಲ್ಲಿ ತುಂಬಾ ಮಹತ್ವದ ಪಾತ್ರವನ್ನು ವಹಿಸಿರುತ್ತಾರೆ. ನಮ್ಮನ್ನು ಸರಿದಾರಿಗೆ ನಡೆಸುವ ಗುರು ಸಿಕ್ಕರೆ ಜೀವನದಲ್ಲಿ ಅದಕ್ಕಿಂತ ದೊಡ್ಡದಾದ ಅದೃಷ್ಟ ಬೇರೊಂದಿಲ್ಲ. ಗುರು ಎಂದರೆ ಬರೀ ಪಾಠವನ್ನು ಹೇಳಿಕೊಟ್ಟವರು ಮಾತ್ರವಲ್ಲ, ಜೀವನದ ಪಾಠವನ್ನು ಹೇಳಿಕೊಟ್ಟವರೂ ನಮ್ಮ ಪಾಲಿನ ಗುರುಗಳಾಗುತ್ತಾರೆ. ಶಿಕ್ಷಣದಿಂದ ಮಾತ್ರ ಬಡತನ ನಿರ್ಮೂಲನೆ ಸಾಧ್ಯ ಎಂಬುದನ್ನು ನಾವು ಅರಿತುಕೊಳ್ಳಬೇಕು ಎಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು. ಅವರು ನಗರದ ಆಲೂರು ವೆಂಕಟರಾವ್ ಭವನದಲ್ಲಿ ನಡೆದ ಕೆಲಗೇರಿ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಮಾಹಾದೇವಿ ದೊಡಮನಿ ಅವರ ವಯೋ ಸೇವಾ ನಿವೃತ್ತಿ ಕಾರ್ಯಕ್ರಮದಲ್ಲ ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿ, ಶಿಕ್ಷಕಿಯರನ್ನು ಗೌರವಿಸಿ ಮಾತನಾಡಿದರು. ಶಿಕ್ಷಕ ವೃತ್ತಿಯಂಥ ಶ್ರೇಷ್ಠ ವೃತ್ತಿ ಮತ್ತೊಂದಿಲ್ಲ, ಒಬ್ಬ ವಿದ್ಯಾರ್ಥಿಗೆ ಪಾಠದ ಜೊತೆಗೆ ಜೀವನದ ಮೌಲ್ಯವನ್ನು ಕಲಿಸುವ ಪ್ರಯತ್ನವನ್ನು ಶಿಕ್ಷಕರು ಮಾಡುತ್ತಾರೆ. ಒಬ್ಬ ಶಿಕ್ಷಕ ಸಾಧಾರಣವಾಗಿರಲು ಸಾಧ್ಯವೇ ಇಲ್ಲ ಮಕ್ಕಳ ಭವಿಷ್ಯ ಕಟ್ಟುವುದು ಮತ್ತು ನಾಶ ಮಾಡುವುದು ಎರಡೂ ಅವರ ಕೈಯಲ್ಲಿದೆ. ಈ ನಿಟ್ಟಿನಲ್ಲಿ ಮಹಾದೇವೆ ದೊಡಮನಿಯವರು ಆದರ್ಶ ಶಿಕ್ಷಕಿಯಾಗಿ ಕೆಲಸ ಮಾಡಿ ಇನ್ನೂಳಿದ ಶಿಕ್ಷಕರಿಗೆ ಮಾದರುಯಾಗಿದ್ದಾರೆ. ಎಂದರು. ಶಿಕ್ಷಕರ ರಾಷ್ಟ್ರೀಯ ಪೆಡ್ರೆಶನ್ ಸಂಘದ ರಾಷ್ಟ್ರಾ ಅಧ್ಯಕ್ಷರಾದ ಬಸವರಾಜ ಗುರಿಕಾರ ಅವರು ಮುಖ್ಯ ಅಥಿ-ತಿಯಾಗಿ, ಶಿಕ್ಷಣ ಎಂಬುವುದು ಅತ್ಯುತ್ತಮವಾದ ಸ್ನೇಹಿತ, ವಿದ್ಯಾವಂತನಿಗೆ ಎಲ್ಲಾ ಕಡೆಯೂ ಗೌರವ ಸಿಗಲಿದೆ, ಸೌಂದರ್ಯ, ಯೌವನ ಎರಡನ್ನೂ ಮೀರಿಸುವ ಶಕ್ತಿ ಶಿಕ್ಷಣಕ್ಕಿದೆ. ಶಿಕ್ಷಕಿ ಮಹಾದೇವಿ ದೊಡಮನಿಯವರು ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ತಮ್ಮ ಶಿಕ್ಷಕ ವೃತ್ತಿಯನ್ನು ಪೂರೈಸಿದ್ದಾರೆ. ಎಂದು ಅಭಿನಂದನಾ ನುಡಿಗಳನ್ನಾಡುತ್ತಾ, ಸರ್ಕಾರಿ ಶಾಲೆಗಳು ಉಳಿಯಬೇಕು, ಕನ್ನಡ ಶಾಲೆಗಳು ಉಳಿಯಬೇಕು, ಕನ್ನಡ ನೆಲ ಜಲ, ಧರ್ಮ ಸಂಸ್ಕೃತಿ ಯನ್ನು ಉಳಿಸಿ ಕನ್ನಡಕ್ಕಾಗಿ ನಾವೆಲ್ಲರೂ ಶ್ರಮಿಸೋಣ. ಕನ್ನಡ ಪ್ರಾಥಮಿಕ ಶಾಲೆಗಳನ್ನು, ಕನ್ನಡ ಮಾಧ್ಯಮ ಶಾಲೆಗಳನ್ನು, ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಬೇಕು ಎಂದರು.

.ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತು ಬೆಳೆಸುವ ಸಂಘದ ಅಧ್ಯಕ್ಷ ಶಂಕರಪ್ಪ ಗಟ್ಟಿ ಪ್ರಾಸ್ತಾವಿಕ ಮಾತನಾಡಿದರು. ನಿವೃತ್ತ ನೌಕರರ ಸಹಕಾರಿ ಸಂಘದ ಅಧ್ಯಕ್ಷ ಗುರು ತಿಗಡಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾರಾಯಣ ಭಜಂತ್ರಿ, ನಿವೃತ್ತ ನೌಕರರ ಸಹಕಾರಿ ಸಂಘದ ಉಪಾಧ್ಯಕ್ಷ ಗುರು ಪೋಳ, ವಿಜಯ ಮೆಳವಂಕಿ, ಎಸ್ ಎಫ್ ಪಾಟೀಲ, ಶ್ರೀಕಾಂತ ರೋಣದ, ಆರ್ ಎಸ್ ಹಿರೇಗೌಡರ, ಶಿಕ್ಷಕರ ಸಂಘದ ಅಧ್ಯಕ್ಷ ಶಾಂತಾ ಶೀಲವಂತರ, ಎಸ್ ಎಚ್ ಬಡಿಗೇರ, ಮಲ್ಲಣ್ಣ ಕಬ್ಬೇರ, ಪಿರೋಜ ಗುಡೇನಕಟ್ಟಿ, ಮುಂತಾದವರು ಮುಖ್ಯ ಅಥಿತಿಗಳಾಗಿದ್ದರು. ನೌಕರ ಸಂಘದ ನಿರ್ದೇಶಕ ಚಂದ್ರು ತಿಗಡಿ ನಿರೂಪಿಸಿದರು. ಎಲ್ ಲಕ್ಕಮ್ಮನ್ನವರ ಸ್ವಾಗತಿಸಿದರು. ಆಯ್ ಎಚ್ ನದಾಫ್ ವಂದಿಸಿದರು.

## ನಿವೃತ್ತ ಕೃಷಿ ಅಧಿಕಾರಿ ಬೀಳಗಿಗೆ ಸನ್ಮಾನ ಸಮಾರಂಭ

# ಸೇವಾ ನಿವೃತ್ತಿ ಸಹಜ ಪ್ರಕ್ರೀಯೇಯಾಗಿದೆ-ಹೂಗಾರ



ತಾಳಿಕೋಟೆ, ಸರ್ಕಾರಿ ನೌಕರರಿಗೆ ಸೇವಾ ನಿವೃತ್ತಿ ಎಂಬುದು ಸಹಜವಾದ ಪ್ರಕ್ರೀಯೇಯಾಗಿದೆ ಆದರೆ ಮಾಡುವ ಕೆಲಸದಲ್ಲಿ ನಿಷ್ಠೆ, ಪ್ರಾಮಾಣಿಕತೆ ಎಂಬುದು ಅಡಗಿದ್ದರೆ ಗೌರವವೆಂಬುದು ಹುಡುಕಿಕೊಂಡು ಬರಲಿದೆ ಎಂದು ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಅರವಿಂದ ಹೂಗಾರ ಅವರು ಹೇಳಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತರಾದ ಎಮ್. ಎಚ್. ಬೀಳಗಿ ಅವರಿಗೆ ಇಲಾಖೆ ವತಿಯಿಂದ ಶನಿವಾರ ಏರ್ಪಡಿಸಲಾದ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು ಸರ್ಕಾರಿ ನೌಕರರ ಬಧುಕು ಒಂದೆಡೆ ಇರುವದಿಲ್ಲಾ ಊರಿಂದೂರಿಗೆ ಅಲೆಯುವಂತಹದ್ದಾಗಿದೆ ಜನರೊಂದಿಗೆ ಬೆರೆತು ಕೆಲಸ ಮಾಡಬೇಕಾಗುತ್ತದೆ ಆ ಸಮಯದಲ್ಲಿ ಸಾಕಷ್ಟು ತೊಂದರೆಗಳು ಬಂದರೂ ಕೂಡಾ ಅವುಗಳನ್ನು ನಿಭಾಯಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ ಸರ್ಕಾರಿ ಸೇವೆಯಲ್ಲಿ ನಿವೃತ್ತಿ ಮತ್ತು ಪದೋನ್ನತಿ ಒಂದು ಸಹಜ ಪ್ರಕ್ರಿಯೆಯಾಗಿದೆ ಆದರೆ ನಾವು ನಮ್ಮ ಸೇವಾ ಅವಧಿಯಲ್ಲಿ ಎಷ್ಟು ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಈ ಇಲಾಖೆಯಲ್ಲಿ 38 ವರ್ಷಗಳ ಸುದಿರ್ಘ ಸೇವೆಯನ್ನು ಸಲ್ಲಿಸಿದ ಎಂ.ಎಚ್. ಬೀಳಗಿಯವರು ಇಲಾಖೆ ಅಭಿಮಾನ ಪಡುವ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ ಅವರ ವಿಶ್ರಾಂತ ಬದುಕು ಸುಖಕರವಾಗಿರಲೆಂದು ಹಾರೈಸುತ್ತೇನೆ ಎಂದರು.

ಇನ್ನೋರ್ವ ಅತಿಥಿ ಇಲಾಖೆಯ ನಿವೃತ್ತ ಕೃಷಿ ಅಧಿಕಾರಿ ಹೆಚ್. ವೈ.ಮಸರಕಲ್ಲ ಮಾತನಾಡಿ ಎಂ. ಎಚ್.ಬೀಳಗಿ ಅವರು ಕಡು ಬಡತನದ ಕುಟುಂಬದ ಹಿನ್ನಲೆಯಿಂದ ಬಂದವರು ಬಹಳ ಕಷ್ಟಪಟ್ಟು ಓದಿ ಸರ್ಕಾರಿ ನೌಕರಿಯನ್ನು ಪಡೆದು ಈ ಇಲಾಖೆಯಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಾರೆ ಅವರ ಆದರ್ಶ ಬದುಕು ಹಾಗೂ ಸೇವಾ ನಿಷ್ಠೆ ಇಂದಿನ ಯುವಕರಿಗೆ ಮಾದರಿಯಾಗಿದೆ ಅವರ ವಿಶ್ರಾಂತ ಬದುಕು ನೆಮ್ಮದಿದಾಯಕ ವಾಗಿರಲೆಂದು ಹಾರೈಸುತ್ತೇನೆ ಎಂದರು.

ಭಾಗವಾನ ಬ್ಯಾಂಕ್ ಅಧ್ಯಕ್ಷ ಎಸ್.ಎ.ನಾಲಬಂದ ಅವರು ಮಾತನಾಡಿ ವೃತ್ತಿ ಬಧಕಿನಲ್ಲಿ ಸಾಕಷ್ಟು ತೊಂದೆಗಳು ಬರುತ್ತವೆ ಅವೇಲ್ಲವುಗಳನ್ನು ಎದುರಿಸಿ ಸೇವೆಯಲ್ಲಿ ಮುಂದುವರೆಯುತ್ತಾ ಸಾಗಬೇಕಾಗುತ್ತದೆ ಸರ್ಕಾರಿ ನೌಕರರಿಗೆ ನಿವೃತ್ತಿ ಎಂಬುದು ಕಟ್ಟಿಟ್ಟ ಬುತ್ತಿಯಾಗಿದೆ ಸೇವೆಯಲ್ಲಿರುವಾಗಿ ಮಾಡಿದ ಕೆಲಸಗಳು ಜನರು ಮಾತನಾಡುವಂತಿರಬೇಕು ಅಂದಾಗ ಸರ್ಕಾರಿ ನೌಕರನ ಬಧುಕು ಸುಂದರದ ಜೊತೆಗೆ ನೆಮ್ಮದಿಯ ಜೀವನವಾಗಲಿದೆ ಎಂದು ನಿವೃತ್ತ ಕೃಷಿ ಅಧಿಕಾರಿ ಎಂ.ಎಚ್.ಬಿಳಗಿ ಅವರ ಸೇವಾ ಕಾರ್ಯ ಕುರಿತು ಕೊಂಡಾಡಿದರು.

ಸನ್ಮಾನ ಸ್ವೀಕರಿಸಿದ ನಿವೃತ್ತ ಕೃಷಿ ಅಧಿಕಾರಿ ಬೀಳಗಿ ಮಾತನಾಡಿ ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾನು ಚಿರಋಣಿಯಾಗಿರುವೆ ನನ್ನ ಸೇವೆಯ ಉದ್ದಕ್ಕೂ ಸಂಘದ ಅಧ್ಯಕ್ಷರಾದ ಅರವಿಂದ ಹೂಗಾರ ನನ್ನ ಸಹೋದ್ಯೋಗಿಗಳು ಹಾಗೂ ಒಳ್ಳೆಯ ಮಿತ್ರರ ಸಹಕಾರ ಮಾರ್ಗದರ್ಶನ ದಿಂದಾಗಿ ನಾನು ನನ್ನ ಸೇವೆಯನ್ನು ಪ್ರಮಾಣಿಕತೆಯಿಂದ ಮಾಡಲು ಸಾಧ್ಯವಾಗಿದೆ ಅವರಿಗೆ ನಾನು ಚಿರಋಣಿಯಾಗಿರುವೆ ಎಂದರು.

ನಿವೃತ್ತ ಶಿಕ್ಷಕಿ ಲಾಲಬಿ ಎಂ.ಬೀಳಗಿ, ರಾಜು ರುದ್ರವಾಡಿ,ಸಂಗಮೇಶ ಪಾಟೀಲ,ಲತೀಫ್ ಬೀಳಗಿ, ಎಂ. ಎಸ್.ಖಾಜಿ,ಎಂ.ಎಸ್.ಕೋರವಾರ, ಎನ್.ಎ.ಖಾಜಿ,ಆಸೀಫ ಬೀಳಗಿ ಮಾತನಾಡಿದರು.

ಇದೇ ಸಮಯದಲ್ಲಿ ನಿವೃತ್ತ ಕೃಷಿ ಅಧಿಕಾರಿ ಬೀಳಗಿ ಅವರಿಗೆ ಇಲಾಖೆ ವತಿಯಿಂದ ಹಾಗೂ ವಿವಿಧ ಸಂಘ-ಸಂಸ್ಥೆಗಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಾಗವಾನ ಜಮಾತ್ ಅಧ್ಯಕ್ಷ ಸದ್ದಾಂ ಬೀಳಗಿ, ಕೊಹಿನೂರ ಸಂಘದ ಅಧ್ಯಕ್ಷ ಕಾಸೀಮಸಾಬ ಜಕಾತಿ,ಅಬ್ಬಾಸಲಿ ನಿಡಗುಂದಿ, ಮೈನು ಕೊರ್ತಿ, ಆದ-'ಮಸಾಬ ಢಾಲಾಯತ್, ಮೋದಿನ ಹೊನ್ನುಟಗಿ, ರಾಜಅಹ್ಮದ್ ಬೆಣ್ಣೂರ,ಮಶಾಕ್ ಮುರಾಳ ಹಾಗೂ ಇಲಾಖೆಯ ಸಿಬ್ಬಂದಿಗಳು ಇದ್ದರು.

ಕೃಷಿ ಅಧಿಕಾರಿ ಮಹೇಶ ಜೋಶಿ ಕಾರ್ಯಕ್ರಮ ನಿರೂಪಿಸಿದರು.

## ಯೋಗ ಸ್ಪರ್ಧೆ; ವಿಜಯ ಅರಳಿಕಟ್ಟಿ ರಾಜ್ಯಮಟ್ಟಕ್ಕೆ ಆಯ್ಕೆ



ಧಾರವಾಡ: ಸಾರ್ವಜನಿಕ ಶಿಕ್ಷಣ ಇಲಾಖೆಯು ಧಾರವಾಡ ಜಿಲ್ಲಾ ಮಟ್ಟದ ಓಲಂಪಿಯಾಡ್ ಯೋಗ ಸ್ಪರ್ಧೆಯನ್ನು ಧಾರವಾಡದ ಸರಕಾರಿ ಶಿಕ್ಷಕಿಯರ ತರಬೇತಿ ಶಾಲೆಯಲ್ಲಿ ಮೇ 31, 2025 ರಂದು ಏರ್ಪಡಿಸಲಾಗಿತ್ತು.

ಬಾಲಕರ ಯೋಗ ಸ್ಪರ್ಧೆ ವಿಭಾಗದಲ್ಲಿ ಶ್ರೀ. ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಕು. ವಿಜಯ ಸಂಗಪ್ಪ ಅರಳಿಕಟ್ಟಿ ಉತ್ತಮ ಪ್ರದರ್ಶನ ನೀಡಿ, ಪ್ರಥಮ ಸ್ಥಾನ ಗಳಿಸಿ, ರಾಜ್ಯಮಟ್ಟದ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.

ಶಾಲೆಯ ಉಸ್ತುವಾರಿ ಸದಸ್ಯರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಗೋಪಾಲ್ ಎಮ್. ಬ್ಯಾಕೋಡ ಅವರು ವಿದ್ಯಾರ್ಥಿಯನ್ನು ಅಭಿನಂದಿಸಿದ್ದಾರೆ.

# ಕಣ್ಣಿನ ಚಿಕಿತ್ಸೆಗೆ ವಿಮಾ ಪರಿಹಾರ ಕೊಡದ ವಿಮಾ ಕಂಪನಿಗೆ

## ರೂ.90 ಸಾವಿರಗಳ ದಂಡ ವಿಧಿಸಿ ಮತ್ತು ಪರಿಹಾರ ಕೊಡಲು ಗ್ರಾಹಕರ ಆಯೋಗ ಆದೇಶ

ಧಾರವಾಡ : ಧಾರವಾಡ ಶಿವಗಿರಿಯ ನಿವಾಸಿ ಗಣೇಶ ಶೆಟ್ಟಿ ಎಂಬುವವರು ಎದುರುದಾರ, ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿಯಲ್ಲಿ ವಿಮೆಯನ್ನು ಮಾಡಿಸಿದ್ದರು. ಅವರು ತಮ್ಮ ಕಣ್ಣಿನ ಸಮಸ್ಯೆ ಇದ್ದ ಕಾರಣ ಧಾರವಾಡದ ಎಮ್.ಎಮ್. ಜೋಶಿ ಆಸ್ಪತ್ರೆಯಲ್ಲಿ ಕ್ಯಾಟರಾಕ್ಟ್ ಚಿಕಿತ್ಸೆಯನ್ನು ಪಡೆದಿದ್ದರು. ಚಿಕಿತ್ಸೆಗಾಗಿ ಅವರು ಒಟ್ಟು ರೂ.32,561 ಪಾವತಿಸಿದ್ದರು. ವಿಮೆ ಚಾಲ್ತಿಯಲ್ಲಿರುವುದರಿಂದ ಅದರ ಹಣವನ್ನು ಭರಿಸುವಂತೆ ಎದುರುದಾರ ವಿಮಾ ಕಂಪನಿಗೆ ವಿನಂತಿಸಿದ್ದರು. ಆದರೆ ಎದುರುದಾರ, ವಿಮಾಕಂಪನಿಯವರು ದೂರುದಾರರ ಕೋ-ರಿಕೆಯನ್ನು ಪರಿಗಣಿಸಿರಲಿಲ್ಲ. ಅಂತಹ ಎದುರುದಾರರ ನಡಾವಳಿಕೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಆಗುತ್ತದೆ ಅಂತಾ ಹೇಳಿ ಅವರ ಮೇಲೆ ಕ್ರಮಕೈಗೊಂಡು ಪರಿಹಾರಕೊಡಿಸುವಂತೆ ದೂರುದಾರರು ದಿ.23/08/2023 ರಂದು ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಧಾರವಾಡ ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರನ್ನು ಸಲ್ಲಿಸಿದ್ದರು.

ಸದರಿ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗ ಅಧ್ಯಕ್ಷರಾದ ಈಶಪ್ಪ. ಭೂತೆ ಹಾಗೂ ವಿಶಾಲಾಕ್ಷಿ. ಅ. ಬೋಳಶೆಟ್ಟಿ ಸದಸ್ಯರು, ದೂರುದಾರರು ಎದುರುದಾರರಲ್ಲಿ 2010 ರಿಂದ ಆರೋಗ್ಯ ವಿಮೆ ಪಾಲಸಿ ಮಾಡಿಸುತ್ತಾ ಬಂದಿದ್ದಾರೆ. ಅದಕ್ಕೆ ದೂರುದಾರರು ಪೂರಕವಾದ ಪ್ರೀಮಿಯಮ್ ಹಣ ಕಟ್ಟಿದ್ದಾರೆ. ಕಾರಣ ದೂರುದಾರರು ಎದುರುದಾರ ವಿಮಾ ಕಂಪನಿಯ ಗ್ರಾಹಕನಾಗಿರುತ್ತಾರೆ. ಈ ಸಂಗತಿ ದಾಖಲೆಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಕಣ್ಣಿನ ಚಿಕಿತ್ಸೆಯ ಸಮಯದಲ್ಲಿ ಪಾಲಸಿಯು ಚಾಲ್ತಿಯಲ್ಲಿರುತ್ತದೆ. ದೂರುದಾರರು ಚಿಕಿತ್ಸೆಯ ಒಟ್ಟು ಮೊತ್ತ ರೂ.32,561 ಪಾವತಿಸಿರುವುದಕ್ಕೆ ರಸೀದಿಗಳನ್ನು ವಿಮಾ ಕಂಪನಿಗೆ ಸಲ್ಲಿಸಿದ್ದರು. ಆದರೆ ಎದುರುದಾರ ವಿಮಾ ಕಂಪನಿಯವರು ದೂರುದಾರರ ಕ್ಲೇಮನ್ನು ನಿರಾಕರಿಸಿರುವುದು ಗ್ರಾಹಕ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನ್ಯತೆ ಆಗಿದೆ ಅಂತಾ ಆಯೋಗ ಅಭಿಪ್ರಾಯಪಟ್ಟು ತೀರ್ಪು ನೀಡಿದೆ. ದೂರುದಾರರು ಆಸ್ಪತ್ರೆಗೆ ಖರ್ಚು ಮಾಡಿದ ರೂ.32,561 ಮತ್ತು ಅದರ ಮೇಲೆ ಶೆ.10 ರಂತೆ ಬಡ್ಡಿ ಸಮೇತಕೊಡುವಂತೆ ಆಯೋಗ ಆದೇಶಿಸಿದೆ. ಅಲ್ಲದೇ ದೂರುದಾರರಿಗೆ ಆಗಿರುವ ಅನಾನುಕೂಲತೆ ಮತ್ತು ಮಾನಸಿಕ ಹಿಂಸೆಗೆ ರೂ.50,000 ಪರಿಹಾರ ಹಾಗೂ ಪ್ರಕರಣದ ಖರ್ಚು ವೆಚ್ಚ ಅಂತಾ ರೂ.10,000 ಕೊಡುವಂತೆ ಎದುರುದಾರರಾದ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿಗೆ ಆಯೋಗ ನಿರ್ದೇಶಿಸಿದೆ.

# ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೂಡಲಗಿ : 2025ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ. 90 ಮತ್ತು 90 ಕ್ಕಿಂತ ಹೆಚ್ಚು ಅಂಕಗಳಿಸಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ನೌಕರರ ಸಂಘದ ತಾಲೂಕ ಅಧ್ಯಕ್ಷ ಆನಂದ ಹಂಜ್ಯಾಗೋಳ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಸುಮಾರು 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

2025ನೇ ಸಾಲಿನ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇ.90 ಮತ್ತು 90 ಕ್ಕಿಂತ ಹೆಚ್ಚು ಅಂಕಗಳಿಸಿರುವ ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿ ಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 2025 ಜೂನ 5 ರೊಳಗೆ ಅರ್ಜಿ ಸಲ್ಲಿಸಲು ಕೊರಲಾಗಿದೆ. **https://ksgeanews.blogspot.com** ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-22354783/84, 9902135813 ಸಂಪರ್ಕಿಸುವುದು ಪ್ರಕಟಣೆಯಲ್ಲಿ ತಿಳಿಸಲಾಗಿದೆ

# ಜನರು ಸ್ಮರಿಸುವಂತೆ ಕೆಲಸ ಮಾಡಬೇಕು-ಮಸಳಿ



ತಾಳಿಕೋಟೆ, ಸರ್ಕಾರಿ ಯಾವುದೇ ಇಲಾಖೆಯಲ್ಲಿಯೂ ಸೇವೆ ಸಲ್ಲಿಸಿದರೂ ಕೂಡಾ ಜನರು ಸ್ಮರಿಸುವಂತೆ ದಕ್ಷ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕೆಂದು ತಾಲೂಕಾ ಪಂಚಾಯತ್ ಇಓ ನಿಂಗಪ್ಪ ಮಸಳಿ ಅವರು ಹೇಳಿದರು.

ತಾಲೂಕಿನ ಹಿರೂರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಚನಬಸಯ್ಯ ಮಠ ಹಾಗೂ ತುಂಬಗಿ ಗ್ರಾಪಂ ನಲ್ಲಿ ಗ್ರೇಡ್-1 ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ನಿಂಗಪ್ಪ ಕಲಹಾರಿ ಅವರ ಸೇವಾ ನಿವೃತ್ತಿ ನಿಮಿತ್ಯ ಪಿಡಿಒ ಕ್ಷೇಮಾಭಿವೃದ್ಧಿ ಸಂಘದ ತಾಳಿಕೋಟೆ ತಾಲೂಕ ಘಟಕದ ಸಹಯೋಗದಲ್ಲಿ ತಾಪಂ ಸಭಾಭವನದಲ್ಲಿ ಏರ್ಪಡಿಸಲಾದ ಸನ್ಮಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು ಈ ಇರ್ವ ಅಧಿಕಾರಿಗಳು ಅತ್ಯಂತ ಪ್ರಾಮಾಣಿಕ ಹಾಗೂ ನಿಷ್ಠೆಯಿಂದ ತಮ್ಮ ಸೇವೆಯನ್ನು ಪೂರ್ತಿಗೊಳಿಸಿ ಇಂದು ನಿವೃತ್ತ ರಾಗುತ್ತಿದ್ದಾರೆ ಆರ್.ಡಿ.ಪಿ.ಆರ್. ಇಲಾಖೆಯಲ್ಲಿ ಸೇವೆಯನ್ನು ಮಾಡುವುದು ಸುಲಭ ಕಾರ್ಯವಲ್ಲಾ ಇಲ್ಲಿ ಸಾರ್ವಜನಿಕರ ಹಲವಾರು ಸಮಸ್ಯೆಗಳನ್ನು ಪರಿಹರಿಸಬೇಕಾಗುತ್ತದೆ ಇದರ ಮಧ್ಯೆಯು ಈ ಇಬ್ಬರು ತಮ್ಮ ಪ್ರಾಮಾಣಿಕ ಸೇವೆಯಿಂದ ಇಲಾಖೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಅವರಿಬ್ಬರ ವಿಶ್ರಾಂತ ಬದುಕು ನೆಮ್ಮದಿದಾಯಕವಾಗಿರಲೆಂದು ಹಾರೈಸುತ್ತೇನೆಂದರು.

ತಾಪಂ ಸಹಾಯಕ ನಿರ್ದೇಶಕಿ ಸುಜಾತಾ ಯಡ್ರಾಮಿ ಮಾತನಾಡಿ ಇಂದು ನಿವೃತ್ತರಾದ ಇಲಾಖೆಯ ಈ ಇಬ್ಬರು ಹಿರಿಯರು ಸರಳ ಸಜ್ಜನಿಕೆಯ ವ್ಯಕ್ತಿತ್ವದ ಸೌಮ್ಯ ಸ್ವಭಾವದವರಾಗಿದ್ದು ಇಲಾಖೆ ಅಪಾರ ಅನುಭವ ಹೊಂದಿದವರಾಗಿದ್ದರು ಅವರ ಕರ್ತವ್ಯ ನಿಷ್ಠೆ ಸಮಯ ಪಾಲನೆ ಹಾಗೂ ಶಿಸ್ತು ನಮಗೆಲ್ಲರಿಗೂ ಮಾದರಿಯಾಗಿದೆ ಅವರ ವಿಶ್ರಾಂತ ಜೀವನ ಸುಖಕರವಾಗಿರಲೆಂದು ಹಾರೈಸುತ್ತೇನೆ ಎಂದರು.

ಪಿಡಿಒಗಳಾದ ಬಿ.ಎಂ.ಸಾಗರ, ಅನೀಲಕುಮಾರ ಕಿರಣಗಿ, ಬಸನಗೌಡ ಚೌಧರಿ, ಪ್ರಭು ಚೆನ್ನೂರ, ಸಿಒ ಸಂಘದ ಅಧ್ಯಕ್ಷ ಮಹಾಂತೇಶ ಬಿರಾದಾರ ಮಾತನಾಡಿದರು.

ನಿವೃತ್ತ ಪಿಡಿಒ ಮಠ ಹಾಗೂ ಕಾರ್ಯದರ್ಶಿ ಕಲಹಾರಿ ಇವರನ್ನು ಕುಟುಂಬ ಸಮೇತವಾಗಿ ತಾಪಂ ಕಾರ್ಯಾಲಯ, ಪಿಡಿಒ ಕ್ಷೇಮಾಭಿವೃದ್ಧಿ ಸಂಘ, ಗಣ-ಕಯಂತ್ರ ಆಪರೇಟರ್ ಸಂಘ ಹಾಗೂ ಬಂಟನೂರ ಗ್ರಾಮಸ್ಥರಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕಿನ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಪಿಡಿಒಗಳು, ಕಾರ್ಯದರ್ಶಿಗಳು, ತಾಪಂ ಹಾಗೂ ಗ್ರಾಪಂ ಸಿಬ್ಬಂದಿಗಳು ಮೊದಲಾದವರು ಉಪಸ್ಥಿತರಿದ್ದರು.

## ವಿಶ್ವ ಪರಿಸರ ದಿನಾಚರಣೆ

# ಶಾಲಾ ವಿದ್ಯಾರ್ಥಿಗಳಿಗೆ ನಿಬಂಧ-ಚಿತ್ರಕಲಾ ಸ್ಪರ್ಧೆ ಆಯೋಜನೆ

ಧಾರವಾಡ : ವಿಶ್ವಪರಿಸರ ದಿನಾಚರಣೆ-2025 ರ ಅಂಗವಾಗಿ ಇಂದು (ಜೂ.2) ರಂದು ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ-ಧಾರವಾಡ ನಾಗರೀಕ ಪರಿಸರ ಸಮಿತಿ, ಎಸ್.ಡಿ.ಎಮ್ ಇಂಜಿನೀಯರಿಂಗ್ ಕಾಲೇಜ್, ಮತ್ತು ಜೆ.ಎಸ್.ಎಸ್ ವಿದ್ಯಾಗಿರಿ ಸಂಸ್ಥೆಯ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಪ್ರಾಥಮಿಕ ಶಾಲೆ, ಪ್ರೌಢ ಶಾಲಾ ವಿಧ್ಯಾರ್ಥಿಗಳಿಗೆ ನಿಬಂಧ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವುದು ಎಂಬ ವಿಷಯದ ಬಗ್ಗೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಜಗದೀಶ ಐ.ಹೆಚ್. ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವ ಪರಿಸರ ದಿನಾಚರಣೆಯ ಮಹತ್ವ ಹಾಗೂ ವಿಶ್ವ ಪರಿಸರ ದಿನಾಚರಣೆಯ ಘೋಷಣೆ ಇವುಗಳ ಮುಖ್ಯ ಉದ್ದೇಶಗಳನ್ನು ತಿಳಿಸಿದರು. ಈ ವರ್ಷದ ವಿಶ್ವ ಪರಿಸರ ದಿನಾಚರಣೆ ಘೋಷಣೆ ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವುದು



ಕುರಿತು ಮಾತನಾಡಿ, ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ಬಳಸದೆ ಇರುವುದೇ ಇದಕ್ಕೆ ಇರುವ ಪರಿಹಾರ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಪರಶುರಾಮ ಎಫ್ ದೊಡ್ಡಮನಿ ಅವರು ಮಾತನಾಡಿ, ಪರಿಸರವನ್ನು ರಕ್ಷಿಸುವುದರ ಮೂಲಕ ನಾವು ಸುರಕ್ಷಿತವಾಗಿ ಇರಬಹುದು. ಪರಿಸರದಲ್ಲಿ ಪ್ರತಿಯೊಂದು ಜೀವಿಗಳಿಗೂ ತನ್ನದೇ ಆದ ಬದುಕು ಕಟ್ಟಿಕೊಳ್ಳುವ ಉದ್ದೇಶ ಇರುತ್ತದೆ. ಇವುಗಳು ಪರಿಸರದ ಒಂದು ಕೊಂಡಿ. ಪರಿಸರದಲ್ಲಿರುವ ಪ್ರತಿಯೊಂದು ಪ್ರಾಣಿ, ಪಕ್ಷಿಗಳು ಪರಿಸರಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು.

ಕ.ರಾ.ಮಾ.ನಿ.ಮಂ ಹಿರಿಯ ಪರಿಸರ ಅಧಿಕಾರಿ ಗೋಪಾಲಕೃಷ್ಣ ಸಣತಂಗಿ, ಅವರು ಮಾತನಾಡಿ, ಪರಿಸರ ಸಂರಕ್ಷಣೆ ತುಂಬಾ ಅಗತ್ಯವಾಗಿದ್ದು, ಅದರಿಂದ ಮಾತ್ರ ಪರಿಸರ ಸಮತೋಲನ ಕಾಯ್ದುಕೊಳ್ಳಲು ಸಾಧ್ಯ. ಸೂಕ್ತ ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯ ಪಾಲ್ಗೋಳ್ಳುವಿಕೆ ಅವಶ್ಯಕತೆ ಇದೆ. ಆದ್ದರಿಂದ ಮಕ್ಕಳಲ್ಲಿ ಪ್ಲಾಸ್ಟಿಕ್ ಮಾಲಿನ್ಯದ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಮುಂಬರುವ ಸೆಪ್ಟಂಬರ್ ತಿಂಗಳಿನಲ್ಲಿ ಮಣ್ಣಿನಿಂದ ಮಾಡಿದ ಮತ್ತು ಬಣ್ಣ ರಹಿತ ಗಣೇಶನ ವಿಗ್ರಹಗಳ ಪೂಜಿಸುವುದಕ್ಕೆ ವಿದ್ಯಾರ್ಥಿಗಳಿಗೆ ತಿಳಿಸಿದರು ಮತ್ತು ಇದರ ಬಗ್ಗೆ ನಿಬಂಧವನ್ನು ಬರೆದು ವಿದ್ಯಾರ್ಥಿಗಳು ವಲಯ ಕಛೇ-ರಿಗೆ ಸಲ್ಲಿಸಿದಲ್ಲಿ, ಸೂಕ್ತ ಬಹುಮಾನವನ್ನು ನೀಡಲಾಗುವುದು ಎಂದು ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ನಾಗರಿಕ ಪರಿಸರ ಸಮಿತಿಯ ಅಧ್ಯಕ್ಷ ಶಂಕರ ಕುಂಬಿ ಅವರು ಮಾತನಾಡಿ, ಜಿಲ್ಲೆಯಾದ್ಯಂತ ಇರುವ ಕಲ್ಯಾಣ ಮಂಟಪಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟಬೇಕು ಮತ್ತು ಶಾಲೆಗಳಲ್ಲಿ ಪ್ಲಾಸ್ಟಿಕ್ ನಿಷೇಧಿತ ಪ್ರದೇಶವೆಂದು ಫಲಕವನ್ನು ಪ್ರದರ್ಶಿಸಬೇಕೆಂದು ಹೇಳಿದರು. ಪ್ರತಿಯೊಬ್ಬರು ಒಂದು ಗಿಡವನ್ನು ನೆಟ್ಟು ಅದನ್ನು ಪೋಷಿಸುವ, ಬೆಳೆಸುವ ಜವಾಬ್ದಾರಿ ತಗೆದುಕೊಂಡು ಪರಿಸರ ಸಂರಕ್ಷಣೆಯಲ್ಲಿ ಭಾಗಿಯಾಗಲು ತಿಳಿಸಿದರು. ಕಾರ್ಯದರ್ಶಿಡಾ. ವಿಲಾಸ ಕುಲಕರ್ಣಿ ಅವರು ಸ್ವಾಗತಿಸಿದರು. ಕೆ.ಹೆಚ್. ನಾಯಕ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಣ ಇಲಾಖೆಯ ಅಧಿಕಾರಿ ಡಾ. ರೇಣುಕಾ ಅಮಲಜೇರಿ ಅವರು ವಂದಿಸಿದರು.

ಈ ಸಂದರ್ಭದಲ್ಲಿ ಲಲಿತಾ ದೊಡವಾಡ, ಮಹಾವೀರ ಉಪಾಧ್ಯಾಯ, ಬಿ.ಐ. ಈಳಿಗೇರ ಹಾಗೂ ಜೆ.ಎಸ್.ಎಸ್ ಕಾಲೇಜಿನ ಸಿಬ್ಬಂದಿವರ್ಗದವರು ಮತ್ತು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

### ಗದಗ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

## ಸ್ವಾತಂತ್ರ್ಯ ನಂತರ ದೇಶದಲ್ಲಿ ಅತ್ಯಂತ ಯಶಸ್ಸು ಕಂಡ ಪಂಚ ಗ್ಯಾರಂಟಿ ಯೋಜನೆಗಳು ಅರ್ಹವಿರುವ ಕಟ್ಟ ಕಡೆಯ ವ್ಯಕ್ತಿಗೂ ತಲುಪಬೇಕು:ಸಚಿವ ಎಚ್ ಕೆ ಪಾಟೀಲ



ಗದಗ : ಸ್ವಾತಂತ್ರ್ಯ ನಂತರ ದೇಶದಲ್ಲಿ ಅತ್ಯಂತ ಯಶಸ್ಸು ಕಂಡ ಸರ್ಕಾರದಿಂದ ಅನುಷ್ಠಾನಿತ ಪಂಚ ಗ್ಯಾರಂಟಿ ಯೋಜನೆಗಳು ಅರ್ಹವಿರುವ ಕಟ್ಟ ಕಡೆಯ ಫಲಾನುಭವಿಗಳಿಗೆ ಒದಗಬೇಕು ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರು ಹೇಳಿದರು

ನಗರದ ಎಸಿ ಆವರಣದಲ್ಲಿರುವ ತಾಲೂಕ ಗ್ಯಾರಂಟಿ ಯೋಜನೆಗಳ ಕಾರ್ಯಲಯದಲ್ಲಿ ಸೋಮವಾರ ಜರುಗಿದ ಗದಗ ತಾಲೂಕ ಮಟ್ಟದ ಗ್ಯಾರಂಟಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮಿ ಯೋಜನೆಯಿಂದ ರಾಜ್ಯದ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಣೆ ಗೊಂಡಿದೆ ಜಿಲ್ಲೆಯಲ್ಲಿ ಜಿ ಎಸ್ ಟಿ ಯಲ್ಲಿ ನೊಂದಾಣೆಗೊಂಡು ನಂತರ ರದ್ದು ಮಾಡಿದ ಮೇಲೂ ಗೃಹಲಕ್ಷ್ಮಿ ಯೋಜನೆಯಿಂದ ವಂಚಿತರಾದವರಿಗೆ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯೆಸಿದ ಅಧಿಕಾರಿಗಳು ಜಿ ಎಸ್ ಟಿ ಯಿಂದ ವಂಚಿತರಾದವರ ಪಟ್ಟಿಯನ್ನು ಈಗಾಗಲೇ ರಾಜ್ಯ ಕಛೇ-ರಿಗೆ ಕಳುಹಿಸಲಾಗಿದೆ ಅಗಷ್ಟರ ಒಳಗಾಗಿ ಅವರನ್ನು ಜಿ ಎಸ್ ಟಿ ಪೋರ್ಟಲ್ ನಿಂದ ಅವರ ಹೆಸರುಗಳನ್ನು ತೆಗೆದು ಹಾಕಿ ಗೃಹಲಕ್ಷ್ಮಿ ದೊರಕುವ ಹಾಗೇ ಮಾಡುಲಾಗುವುದು ಎಂದು ತಿಳಿಸಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಅನ್ನಭಾಗ್ಯ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಆಹಾರ ಇಲಾಖೆಯ ಅಧಿಕಾರಿಗಳು ಪಡಿತರ ಅಂಗಡಿದಾರರ ಜೊತೆಗೆ ಸಭೆ ನಡೆಸಬೇಕು. ಅನ್ನಭಾಗ್ಯದ ಅಕ್ಕಿಯು ಅರ್ಹ ಫಲಾನುಭವಿಗಳಿಗೆ ತಲುಪಬೇಕು 1 ವರ್ಷದಿಂದ ಪಡಿತರ ಅಕ್ಕಿಯನ್ನು ಪಡೆಯದೇಯಿರುವ ಪಡಿತರ ಕಾರ್ಡಗಳ ಮಾಹಿತಿ ನೀಡಬೇಕೆಂದು ಮಾಹಿತಿ ಕೇಳಿದರು.

ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಜೀವನದಲ್ಲಿ ನಿಜವಾದ ಶಕ್ತಿ ಬಂದತಾಗಿದೆ ಮಹಿಳೆಯರು ಸ್ವಾವಲಂಬನೆಯ ಬದುಕು ನಡೆಸಲು ಸಹಕಾರಿಯಾಗಿದೆ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರು ಹೇಳಿದರು.

ಗದಗ ತಾಲೂಕ ಮಟ್ಟದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಅಶೋಕ ಮಂದಾಲಿ ಮಾತನಾಡಿ ಯೋಜನೆಯ ಪ್ರಗತಿಯ ಕುರಿತು ನಿಖರ ಮಾಹಿತಿ ಒದಗಿಸಬೇಕು. ಗೃಹ ಲಕ್ಷ್ಮಿ ಹಾಗೂ ಯುವ ನಿಧಿ ಯೋಜನೆಯ ಕುರಿತು ಇನ್ನೂ ಹೆಚ್ಚಿನ ಅರಿವು ಮೂಡಿಸಬೇಕು. ಗದಗ ತಾಲೂಕಿನಲ್ಲಿ ಗೃಹಲಕ್ಷ್ಮಿ ಪಡೆಯುತ್ತಿದ್ದ ಕೆಲವು ಮಹಿಳೆಯರು ಮರಣ ಹೊಂದಿದ ಹಿನ್ನಲೆಯಲ್ಲಿ ಅವರ ಹೆಸರನ್ನು ಫಲಾನುಭವಿಯ ಪಟ್ಟಿಯಿಂದ ಕೈ ಬಿಡಬೇಕು,ಹಾಗು ಜಿ ಎಸ್ ಟಿ ಯಲ್ಲಿ ನೊಂದಣಿ ಯಾಗಿ ತದನಂತರ ಜಿ ಎಸ್ ಟಿ ಯನ್ನು ರದ್ದು ಗೊಳಿಸಿದರು ಜಿ ಎಸ್ ಟಿ ನೊಂದಯಿಸಿದವರ ಪ್ಯಾನ್ ಕಾರ್ಡ ಲಿಂಕ್ ಆಗಿಯೇ ಇರುತ್ತದೆ ಹಾಗಾಗಿ ಅಂತವರಿಗೆ ಜಿ ಎಸ್ ಟಿ ಪೋರ್ಟಲ್ ನಲ್ಲಿ ತಮ್ಮ ಹೆಸರನ್ನು ಕಡಿಮೆ ಗೊಳಿಸಬೇಕೆಂದು ಮಾಹಿತಿ ನೀಡಬೇಕು ಎಂದರು

ಗೃಹಲಕ್ಷ್ಮಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಅಂಗನವಾಡಿ ಮೇಲ್ವಿಚಾರಕಿಯರು ( ಸುಪರ್ ವೈಸರ್ ) ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಭೆ ಕರೆದು ಸರ್ವೆ ಕಾರ್ಯ ಚುರುಕುಗೊಳಿಸಬೇಕೆಂದು ಎಂದು ಅಶೋಕ ಮಂದಾಲಿ ತಿಳಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ ಬಿ ಅಸೂಟಿ ಮಾತನಾಡಿ ತಮ್ಮ ಗಮನಕ್ಕೆ ಬಂದ ಸಮಸ್ಯೆ ಯೊಂದರಲ್ಲಿ ಒಂದು ಮನೆಯ ಯಜಮಾನ ಗೃಹಜ್ಯೋತಿ ಫಲಾನುಭವಿಯಾಗಿದ್ದು ಎಷ್ಟು ಕಡಿಮೆ ವಿದ್ಯುತ್ ಉಪಯೋಗಿಸಿದರು ವಿದ್ಯುತ್ ಬಿಲ್ ಬರುತ್ತಿದೆ ಎಂದು ಸಮಸ್ಯೆ ಯನ್ನು ಸಭೆಗೆ ತಿಳಿಸಿದರು.

ಇದಕ್ಕೆ ಉತ್ತರಿಸಿದ ಹೆಸ್ಕಾಂ ಅಧಿಕಾರಿಗಳು ಗೃಹಜ್ಯೋತಿ ಫಲಾನುಭವಿಗಳಿಗೆ 2022-23 ಸಾಲಿನಲ್ಲಿ ಉಪಯೋಗಿಸಿದ ವಿದ್ಯುತ್ ವನ್ನು ಮಾಪನವಾಗಿ ತೆಗೆದುಕೊಳ್ಳುತ್ತೆವೆ ಹಾಗಾಗಿ ಹಿಂದಿನ ಒಂದು ವರ್ಷ ಮನೆಯಲ್ಲಿ ಯಾರು ಇಲ್ಲದ ಕಾರಣ ಅತ್ಯಂತ ಕಡಿಮೆ ವಿದ್ಯುತ್ ಬಳಕೆಯಾಗಿದ್ದು ಸರ್ಕಾರದ ಆದೇಶದ ಅನುಸಾರ ಹಿಂದಿನ ವರ್ಷದ ವಿದ್ಯುತ್ ಬಳಕೆಯನ್ನು ಮಾಪನವಾಗಿ ತೆಗೆದುಕೊಂಡಿದರಿಂದ ಹೀಗಾಗಿದೆ ಎಂದು ಮಾಹಿತಿ ನೀಡಿದರು.

ಪಂಚಗ್ಯಾರಂಟಿ ಯೋಜನೆಯ ಸಂಬಂಧಿತ ಅಧಿಕಾರಿಗಳು ಈ ಕೆಳಗಿನಂತೆ ಸಭೆಗೆ ಮಾಹಿತಿ ಒದಗಿಸಿದರು. ಗೃಹಲಕ್ಷ್ಮಿ ಯೋಜನೆಯಡಿ ಜನೇವರಿ ರವರೆಗೆ ಗದಗ ತಾಲೂಕಿನಲ್ಲಿ 80363 ನೋಂದಣಿಯಾದ ಅರ್ಜಿಗಳ ಪೈಕಿ 79531 ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ ಮಂಜೂರಾತಿ ಗೊಂಡ ಫಲಾನುಭವಿಗಳಿಗೆ ಡಿಬಿಡಿ ಮೂಲಕ ಹಣ ಪಾವತಿಸಲಾಗಿದೆ.

ಶೇಕಡ 99.28 ಪ್ರಗತಿ ಸಾಧಿಸಿದೆ. ಜಿಲ್ಲೆಯಲ್ಲಿ ವಾಕರಸಾಸಂಸ್ಥೆಯಿಂದ ಗದಗ ಘಟಕದಲ್ಲಿ 11-6-2023 ರಿಂದ 05-05-2025 ರವರೆಗೆ 9521760 ಪುರುಷ ಪ್ರಯಾಣಿಕರು ಹಾಗೂ 15627215 ಮಹಿಳಾ ಪ್ರಯಾಣಿಕರು ಸೇರಿದಂತೆ ಒಟ್ಟಾರೆ 25148975 ಪ್ರಯಾಣಿಕರು ಪ್ರಯಾಣಿಸಿದ್ದಾರೆ. ಶಕ್ತಿ ಯೋಜನೆಯಡಿ ಗದಗ ಘಟಕದಲ್ಲಿ 488213616 ರೂ. ಮಹಿಳಾ ಪ್ರಯಾಣಿಕರ ಆದಾಯವಾಗಿದೆ. ಅನ್ನಭಾಗ್ಯ ಯೋಜನೆಯಡಿ ಗದಗ ತಾಲೂಕಿನಲ್ಲಿ ಡಿಸೆಂಬರ್ 2024 ರ ಮಾಹೆಯಲ್ಲಿ ಗದಗ ಪಡಿತರ ಪ್ರದೇಶದಲ್ಲಿ 74596 ಬಿಪಿಎಲ್ ಕಾರ್ಡುದಾರರ ಫಲಾನುಭವಿಗಳಿಗೆ 4,0431100 ರೂ. ಗಳನ್ನು ಡಿಬಿಟಿ ಮೂಲಕ ಹಣ ಸಂದಾಯ ಮಾಡಲಾಗಿದೆ.

ಗೃಹಜ್ಯೋತಿ ಯೋಜನೆಯಡಿ 28-2-2025 ರವರೆಗೆ ಗದಗ ಗ್ರಾಮೀಣ ಉಪವಿಭಾಗದಲ್ಲಿ 53268 ಸ್ಥಾವರಗಳು ಅರ್ಹವಿದ್ದು 53060 ಸ್ಥಾವರಗಳ ನೋಂದಣಿಯಾಗಿದ್ದು ಶೇ 99.33 ರಷ್ಟು ಪ್ರಗತಿಯಾಗಿದೆ. ಯುವನಿಧಿ ಯೋಜನೆಯಡಿ ಗದಗ ತಾಲೂಕಿನಲ್ಲಿ ಜನವರಿ 2025 ರವರೆಗೆ 1704 ಫಲಾನುಭವಿಗಳ ನೋಂದಣಿಯಾಗಿದ್ದು 826 ಅರ್ಹ ಫಲಾನುಭವಿಗಳಿಗೆ ಡಿಬಿಟಿ ಮೂಲಕ 24,57,000 ರೂ. ವರ್ಗಾವಣೆಯಾಗಿರುತ್ತದೆ ಎಂದು ಸಂಬಂಧಿತ ಅಧಿಕಾರಿಗಳು ಮಾಹಿತಿ ಒದಗಿಸಿದರು.

ಸಭೆಯಲ್ಲಿ ತಾಲೂಕು ಗ್ಯಾರಂಟಿ ಸಮಿತಿಯ ಸದಸ್ಯರಾದ ಶಂಭು ಕಾಳೆ, ಶ್ರೀಮತಿ ಮೀನಾಕ್ಷಿ ಬೆನಕಣ್ಣವರ, ಸಂಗು ಕರಕಲಮಟ್ಟಿ, ನಿಂಗಪ್ಪ ದೇಸಾಯಿ, ಸಂಗಮೇಶ ಹಾದಿಮನಿ, ರಮೇಶ ಹೊನ್ನಿನಾಯ್ಕರ್ , ದೇವರೆಡ್ಡಿ ತಿರ್ಲಾಪುರ, ಮಲ್ಲಪ್ಪ ದಂಡಿನ, ಗಣೇಶ ಸಿಂಗ್ ಮಿಟಾಡ, ಮಲ್ಲಪ್ಪ ಬಾರಕೇರ, ಭಾಷಾ ಮಲ್ಲಸಮುದ್ರ, ಸಾವಿತ್ರಿ ಹೂಗಾರ, ಶರೀಫ್, ತಾಲೂಕು ಪಂಚಾಯತ್ ಮ್ಯಾನೇಜರ್ ರುದ್ರಪ್ಪ ಬಾವಿ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನಿತ ಅಧಿಕಾರಿಗಳು ಹಾಜರಿದ್ದರು.

## ಕಾರ್ಮಿಕ ಕಚೇರಿ ಸಂಕೀರ್ಣ ಕಾಮಗಾರಿಗೆ ಭೂಮಿಪೂಜೆ

ಹಾವೇರಿ: ಹಾವೇರಿ ನಗರದಲ್ಲಿ ನೂತನ ಕಾರ್ಮಿಕ ಕಚೇರಿ ಸಂಕೀರ್ಣ (ಕಾರ್ಮಿಕ ಭವನ) ದ ಕಾಮಗಾರಿಯ ಭೂಮಿಪೂಜೆ ಮತ್ತು ಶೀಲಾನ್ಯಾಸ ಕಾರ್ಯಕ್ರಮ ಜೂನ್ 3ರಂದು ಬೆಳಿಗ್ಗೆ 10-30 ಕ್ಕೆ ಹಾವೇರಿ ನಗರದ ಎಪಿಎಂಸಿ ಹಿಂಭಾಗದಲ್ಲಿ ಜರುಗಲಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ, ಕಾರ್ಮಿಕ ಸಚಿವ ಸಂತೋಷ ಲಾಡ್,
ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಘನ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಶಂಕುಸ್ಥಾಪನೆ ನೆರವೇರಿಸಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್. ಮುಖ್ಯ ಅತಿಥಿಗಳಾಗಿ ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಧ್ಯಕ್ಷ ಅಜೀಮ್‌ಪೀರ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ವಿಧಾನ ಪರಿಷತ್ ಶಾಸಕರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ. ಯು.ಬಿ.ಬಣಕಾರ. ಪ್ರಕಾಶ ಕೋಳಿವಾಡ. ಯಾಸಿರ್ ಅಹ್ಮದ್‌ಖಾನ್ ಪಠಾಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ, ನಗರಸಭೆ ಅಧ್ಯಕ್ಷೆ ಶ್ರೀಮತಿ ಶಶಿಕಲಾ ರಾಮು ಮಾಳಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಹಿರೇಮಠ, ನಗರಸಭೆ ಉಪಾಧ್ಯಕ್ಷ ಮಲ್ಲಿಕಾರ್ಜುನ ಸಾತೇನಹಳ್ಳಿ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಮೈದೂರ ಪಾಲ್ಗೊಳ್ಳಲಿದ್ದಾರೆ.

****



**ಗೋಕಾಕ: ಇಲ್ಲಿಯ ನಗರ ಸಭೆ ಅನುದಾನದಡಿ ಶಿವ ನಗರದಲ್ಲಿ ಚರಂಡಿ ರಸ್ತೆ ಡಾಂಬ-ರೀಕರಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಯುವನಾಯಕ ಅಮರನಾಥ ಜಾರಕಿಹೊಳಿ ಪೂಜೆ ನೆರವೇರಿಸಿದರು.**

**ಈ ಸಂದರ್ಭದಲ್ಲಿ ನಗರಸಭೆಯ ಅಧ್ಯಕ್ಷ ಪ್ರಕಾಶ ಮುರಾರಿ, ಪೌರಾಯುಕ್ತ ರಮೇಶ ಜಾಧವ, ಎಇಇ ವಿನೋದ ಪಾಟೀಲ, ಸುರೇಶ ಸನದಿ, ಅರವಿಂದ ಕಾರಚಿ, ರಿಯಾಜ್ ದೇಸಾಯಿ, ಜಯಾನಂದ ಹುಣಚ್ಯಾಳಿ, ಬಸವರಾಜ ಮಾಳಗಿ, ಬಸವರಾಜ ಆರೇನ್ನವರ, ದುರ್ಗಪ್ಪ ಶಾಸ್ತ್ರಿಗೊಲ್ಲರ, ಬಸವರಾಜ ಗಂಗರೆಡ್ಡಿ, ಸೇರಿದಂತೆ ನಗರಸಭೆ ಸದಸ್ಯರು, ಮುಖಂಡರು, ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.**

## ನಾಳೆ ಹಾವೇರಿ ತಾ.ಪಂ.ಸಾಮಾನ್ಯ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

ಹಾವೇರಿ: : ಶಾಸಕರು ಹಾಗೂ ವಿಧಾನಸಭೆ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ ಅವರ ಅಧ್ಯಕ್ಷತೆಯಲ್ಲಿ ಕೆ,ಡಿ.ಪಿ.ಪ್ರಗತಿ ಪರಿಶೀಲನಾ ಸಭೆ ಜೂನ್ 4 ರಂದು ಮಧ್ಯಾಹ್ನ 2 ಗಂಟೆಗೆ ಹಾಗೂ ತಾಲೂಕು ಪಂಚಾಯತ್ ಸಾಮಾನ್ಯ ಸಭೆ ಮಧ್ಯಾಹ್ನ 4 ಗಂಟೆಗೆ ಹಾವೇರಿ ತಾಲೂಕು ಪಂಚಾಯತ್ ಸಭಾಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ತಾಲೂಕು ಪಂಚಾಯತ್ ಆಡಳಿತಾಧಿಕಾರಿ ಸುರೇಶ ಹುಗ್ಗಿ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

## ಕಾನೂನು ಸುವ್ಯವಸ್ಥೆ ಕಾಪಾಡಲು ಪೋಲಿಸ್ ಇಲಾಖೆ ಸದಾ ಸಿದ್ಧ

ಗೋಕಾಕ: ಕಾನೂನು ಸುವ್ಯವಸ್ಥೆ ಕಾಪಾಡಲು ಪೋಲಿಸ್ ಇಲಾಖೆ ಸದಾ ಸಿದ್ಧವಾಗಿದ್ದು, ಯಾವುದೇ ಅಹಿತಕರ ಘಟನೆ ಆಗದಂತೆ ಶಾಂತತೆಯಿಂದ ಹಬ್ಬ ಆಚರಿಸಬೇಕು ಎಂದು ಸಿಪಿಐ ಸುರೇಶಬಾಬು ಹೇಳಿದರು.

ಅವರು, ರವಿವಾರದಂದು ಬಕ್ರೀದ್ ಹಬ್ಬದ ನಿಮಿತ್ತ ನಗರದಲ್ಲಿ ಶಹರ ಪೊಲೀಸ್ ಠಾಣೆಯಲ್ಲಿ ಕರೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಗರದಲ್ಲಿ ಹಿಂದೂ ಮುಸ್ಲಿಂ ಬಾಂಧವರು ಒಗ್ಗಟ್ಟಾಗಿ ಶಾಂತಿಯಿಂದ ಹಬ್ಬ ಆಚರಿಸಬೇಕು. ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಪಿಎಸ್‌ಐ ಕೆ.ವಾಲಿಕರ ಮಾತನಾಡಿ ಕಾನೂನು ಸುವ್ಯವಸ್ಥೆ ಭಂಗ ತರುವ ಕಾರ್ಯ ಯಾರು ಮಾಡಬಾರದು. ಯುವಕರು ಸೋಶಿಯಲ್ ಮೀಡಿಯಾದಲ್ಲಿ ಧರ್ಮದ ಬಗ್ಗೆ, ವ್ಯಕ್ತಿಯ ಬಗ್ಗೆ ಅವಹೇಳನಕಾರಿ ಪೋಸ್ಟ್ ಮಾಡದಂತೆ ಸಮಾಜದ ಮುಖಂಡರು ಜವಾಬ್ದಾ-




ರಿಯುತ್ತವಾಗಿ ಕಾರ್ಯಮಾಡಿ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಾತ್ರಾ ಕಮಿಟಿಯ ಪ್ರಭು ಚವ್ಹಾಣ, ಅಡಿವೆಪ್ಪ ಕಿತ್ತೂರ, ಅಂಜುಮನ್ ಕಮಿಟಿ ಅಧ್ಯಕ್ಷ ಜಾವೇದ್ ಗೋಕಾಕ, ನರಗಸಭೆ ಸದಸ್ಯರಾದ ಅಬ್ದುಲ್ ರಹೆಮಾನ ದೇಸಾಯಿ, ಕುತುಬುದ್ದೀನ ಗೋಕಾಕ, ಬಸವರಾಜ ಆರೆನ್ನವರ, ಇಲಾಹಿ ಖೈರದಿ, ಮುಸ್ತಾಕ ಖಂಡಾಯತ್, ಜುಬೇರ ತರಾಸಗರ, ಸಗೀರ ಕೋತವಾಲ, ಇಸ್ಮಾಯಿಲ್ ಜಮಾದಾರ ಸೇರಿದಂತೆ ಅನೇಕರು ಉಪಸ್ಥಿತ-ರಿದ್ದರು.

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಧರಣಿ



ಮೂಡಲಗಿ : ಸಮೀಪದ ಕೌಜಲಗಿಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಬೇಡಿಕೆಗಲಿಗಾಗಿ ನಡೆಯುತ್ತಿರುವ ಧರಣಿಗೆ ಬೆಂಬಲವಾಗಿ ಮೊರಾರ್ಜಿ ವಸತಿ ಶಾಲೆಯಲ್ಲಿ ಸಂವಿಧಾನಾತ್ಮಕ ಸತ್ಯಾಗ್ರಹ ಸರ್ವಸಿಬ್ಬಂದಿ ಬಳಗ ಕಪ್ಪು ಪಟ್ಟಿ ಕಟ್ಟಿಕೊಂಡು ಸಾಂಕೇತಿಕ ಧರಣಿ ಸತ್ಯಾಗ್ರಹ ಕೈಗೊಂಡರು,

ನಮ್ಮ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಾವಿರಾರು ನೌಕರರು ಸಣ್ಣ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಂವಿಧಾನತ್ಮಕ ಹೋರಾಟಕ್ಕೆ ಕರೆ ಕೊಟ್ಟು ಗಾಳಿ, ಮಳೆ, ಚಳಿಯನ್ನು ಲೆಕ್ಕಿಸಸದೆ ಸರ್ವರ ಒಳತಿಗಾಗಿ ಹೋರಾಟವನ್ನು ಮಾಡಿದ್ದಾರೆ.

ತಮ್ಮ ಸಂಪೂರ್ಣ ಜೀವನವನ್ನೇ ಮೂಡುಪಾಗಿಟ್ಟ ನಮಗೆ ಕೆಲವು ಕನಿಷ್ಠ ಸರಕಾರಿ ಸೌಲಭ್ಯಗಳು ದೊರೆಯದೆ ಇರೋದು ನಮ್ಮ ದೌರಭಾಗ್ಯವೇ ಸರಿ. ಇಲ್ಲಿ ನಮಗೆ ಕೆ.ಜಿ.ಆಯ್.ಡಿ, ಡಿ.ಸಿ.ಆರ್.ಜಿ ಹಾಗೂ ಇ.ಜಿ.ಆಯ್.ಎಸ್ ಜ್ಯೋತಿ ಸಂಜೀವಿನಿ, ಕುಮಾರ ನಾಯಕ್ ವಿಶೇಷ ಭತ್ಯೆ, ಹೆಚ್ಚುವರಿ ಕೆಲಸಕ್ಕೆ 10% ಹೆಚ್ಚುವರಿ ವೇತನ, ನಿವೃತ್ತಿ ಉಪಧಾನ ಮೊದಲಾದ ಸೌಲಭ್ಯಗಳು ಇಲ್ಲದೇ ನಾವು ಒಂದು ರೀತಿಯಲ್ಲಿ ದಿನಗೂಲಿ ನೌಕರರಂತೆ ಬದುಕಬೇಕಾದ ಅನಿವಾರ್ಯತೆ ಬಂದೋದಗಿದೆ. ನಾವು ಸರಕಾರಿ ನೌಕರರು ಅಲ್ಲವೇ ಎಂಬ ಚಿಂತೆ ದಿನನಿತ್ಯ ನಮ್ಮ ಸ್ವಾಭಿಮಾನವನ್ನು ಕೇರಳಿಸುತ್ತಿದೆ.

ನಾವು ಕೇಳಿರುವ ಕೆಲವೇ ಕೆಲವು ಬೇಡಿಕೆಗಳಾದ ನಿರ್ದೇಶನಾಲಯ, ಉಚಿತ ವಸತಿ ಗೃಹ ಸೌಲಭ್ಯ, 10% ವಿಶೇಷ ಭತ್ಯೆ,ಡಿ.ಸಿ.ಆರ್.ಜಿ. ಆರೋಗ್ಯ ಸೌಲಭ್ಯ, ಮರಣ ಮತ್ತು ನಿವೃತ್ತಿ ಉಪಾದಾನ ಈ ಸೌಲಭ್ಯಗಳನ್ನು ನೀಡಿ ನಮ್ಮನ್ನು ಗೌರವದಿಂದ ಬದುಕುವಂತೆ ಮಾಡಿ.ಎಂದು ಬೇಡಿಕೆಗಳ ಮನವಿಯನ್ನು ಸರ್ಕಾರದ ಮುಂದೆ ಪ್ರಸ್ತುತ ಪಡಿಸಿದ್ದಾರೆ,ಈ ಸಮಯದಲ್ಲಿ ಕೌಜಲಗಿಯ ವಸತಿ ಶಾಲೆಯ ಸರ್ವ ಸಿಬ್ಬಂದಿ ಇದ್ದರು.

## ವೃತ್ತಿ - ನಿವೃತ್ತಿ ಒಂದೇ ನಾಣ್ಯದ ಎರಡು ಮುಖ



ತಾಳಿಕೋಟೆ, ಸರ್ಕಾರದ ಸೇವೆಯಲ್ಲಿ ತೊಡಗಿದವರಿಗೆ ಹಾಗೂ ಸರ್ಕಾರ ನಿಗಧಿ ಪಡಿಸಿದ ವಯೋಮಿತಿಗನುಗುಣವಾಗಿ ವೃತ್ತಿಯಲ್ಲಿದ್ದ ವ-ರಿಗೆ ನಿವೃತ್ತಿ ಎಂಬುದು ಬರುವದು ಸಹಜ ವೃತ್ತಿ ಹಾಗೂ ನಿವೃತ್ತಿ ಇವೇರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ವೃತ್ತಿನಿರತರಿಗೆ ಎದ್ದು ಕಾಣುತ್ತಲಿದೆ ಎಂದು ಸ್ಥಳೀಯ ಡಿಸಿಸಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಆರ್.ಜಿ.ಹಿರೂರ ಅವರು ನುಡಿದರು.

ರವಿವಾರರಂದು ಸ್ಥಳೀಯ ವಿವಿಧೋದೇಶ ಪ್ರಾಥಮಿಕ ಗ್ರಾಮಿಣ ಕೃಷಿ ಪತ್ತಿನ ಸಹಕಾರ ಸಂಘ ಕಿರಿಯ ಸಹಾಯಕನಾಗಿ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಉಮರಸಿಂಗ್ ಗೌಡಗೇರಿ ಅವರ ಕುರಿತು ಬ್ಯಾಂಕಿನ ಸಭಾಭವನದಲ್ಲಿ ಏರ್ಪಡಿಸಲಾದ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿ ಸ್ಥಾನ ಅಲಂಕರಿಸಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ಬ್ಯಾಂಕಿನ ಸಂಬಂದಿತ ಬೆಳೆ ಸಾಲವಾಗಲಿ ಸಂಬಂದಿತ ಕಾರ್ಯಗಳನ್ನು ಎಲ್ಲವನ್ನೂ ಸರಿಯಾಗಿ ಸಮಜಾಯಿಸುವದರೊಂದಿಗೆ ರೈತರೊಂದಿಗೆ ಪ್ರೀತಿ ಪ್ರೇಮ ಬೆಳೆಸುತ್ತಾ ಸಾಗಿಬಂದಂತಹ ಉಮರಸಿಂಗ್ ಗೌಡಗೇರಿ ಅವರ ಸೇವೆ ಮಹತ್ವದ್ದಾಗಿತ್ತೆಂದರು. ಉಮರಸಿಂಗ್ ಅವರಿಗೆ ಕೋ-ಆಪ್ ಬ್ಯಾಂಕಿನ ತಿಳುವಳಿಕೆ ಎಂಬುದು ಅವರಿಗೆ ಹೆಚ್ಚಿಗೆ ಇದುದ್ದರಿಂದ ರೈತರೊಂದಿಗೆ ಸಾಲ ವಸೂಲಾತಿಯಲ್ಲಿಯೂ ತಿಳುವಳಿಕೆ ನೀಡಿ ಅವರಿಗೆ ಒತ್ತಾಯಿಸದೇ ಭರಣಾ ಮಾಡಿಕೊಳ್ಳುವ ಕಾರ್ಯ ಅವರು ಮಾಡುತ್ತಾ ಸಾಗಿಬಂದಿದ್ದಲ್ಲದೇ ಗ್ರಾಹಕರ ಹಾಗೂ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯವರೊಂದಿಗೂ ಸಹ ಮೆಚ್ಚುಗೆ ಪಡೆಯುತ್ತಾ ತಮ್ಮ 30 ವರ್ಷದ ಸೇವೆಯನ್ನು ಪೂರ್ಣಗೊಳಿಸಿ ಇಂದು ನಿವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದ್ದಾರೆ ಅವರ ಹಾಗೂ ಅವರ ಕುಟುಂಬದ ಜೀವನ ಆದರ್ಶಮಯವಾಗಿ ಸಾಗಲೆಂದರು. ಇನ್ನೋವರ್ ಸಹಾಯಕ ವ್ಯವಸ್ಥಾಪಕರಾದ ಪ್ರವೀಣ್ ಪಾಟೀಲ ಅವರು ಮಾತನಾಡಿ ನಿವೃತ್ತಿ ಎಂದರೆ ಒಬ್ಬರ ಸ್ಥಾನ ಅಥವಾ ವೃತ್ತಿ ಅಥವಾ ಸಕ್ರೀಯ ಕಾರ್ಯ ಜೀವನದಿಂದ ಹಿಂದೆ ಸರಿಯುವದ್ದಾಗಿದೆ ಸರ್ಕಾರದ ನಿಗಧಿತ ಅವಧಿಗನುಗುಣವಾಗಿ ನಿವೃತ್ತಿ ಎನ್ನುವದನ್ನು ವೃತ್ತಿ ನಿರತರು ಸ್ವೀಕರಿಸಲೇ ಬೇಕಾಗುತ್ತದೆ ಅಂತಹ ವೃತ್ತಿ ನಿರತರಾಗಿದ್ದ ಹಿರಿಯ ಸಹಾಯಕ ಉಮರಸಿಂಗ್ ಅವರು ಸುದಿರ್ಗ 30 ವರ್ಷ ಸೇವೆ ಸಲ್ಲಿಸಿ ತಮ್ಮ ವೃತ್ತಿ ಜೀವನದಿಂದ ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದಿದ್ದಾರೆ ಅವರು ನಮ್ಮ ಸಿಬ್ಬಂದಿಯೊಂದಿಗೆ ನೀಡಿದಂತಹ ಸಹಕಾರ ಎಂದೂ ಮರೆಯದ್ದಂತಾಗಿದೆ ನಮ್ಮ ಬ್ಯಾಂಕಿನ ಮೇಲಿಟ್ಟ ಪ್ರೀತಿ ಅಭಿಮಾನ ಹಾಗೂ ತಮ್ಮದೇ ಆದ ಬ್ಯಾಂಕ್ ಎಂಬ ವಿಚಾರದಿಂದ ಕಾರ್ಯದಲ್ಲಿ ಕಾಯಕದಲ್ಲಿ ಸಮಯದ ಚಿಂತನೆ ಮಾಡದೇ ತಮ್ಮ ಸೇವೆ ಮುಂದುವರೆಸುತ್ತಾ ಸಾಗುತ್ತಿದ್ದರೂ ಅವರ ನೆನಪು ಸದಾ ನಮ್ಮಲ್ಲಿ ಇರಲಿದೆ ಏನೇ ಇರಲಿ ಅವರ ನಿವೃತ್ತಿ ಜೀವನ ಕುಟುಂಬದೊಂದಿಗೆ ಸುಃಖಮಯವಾಗಿ ಸಾಗಲೆಂದು ಆಶಿಸಿದರು.

ಇನ್ನೋವರ್ ಬ್ಯಾಂಕ್ ನಿರ್ದೇಶಕರಾದ ಗೋವಿಂದಸಿಂಗ್ ಮೂಲಿಮನಿ ಅವರು ಮಾತನಾಡಿ 30 ವರ್ಷಗಳ ಕಾಲ ಕೃಷಿ ಪತ್ತಿನ ಬ್ಯಾಂಕಿನಲ್ಲಿ ಸೇವೆಗೆ ಮುಂದಾಗಿದ್ದ ಉಮರಸಿಂಗ್ ಅವರು ಮೊದಲಿಗೆ ಚಿಕ್ಕ ಸ್ಥಾನದಿಂದ ಸೇವೆಗೈಯುತ್ತಾ ಉನ್ನತ ಸ್ಥಾನಮಾನ ಪಡೆದರು ಅವರ ಸೇವೆಯನ್ನು ಅರೀತ ಆಡಳಿತ ಮಂಡಳಿಯವರು ಹಾಗೂ ವ್ಯವಸ್ಥಾಪಕರು ಅವ-ರಿಗೆ ಹೆಚ್ಚಿನ ಸ್ಥಾನಮಾನವನ್ನು ನೀಡಿ ಇನ್ನಷ್ಟು ಅವರಿಗೆ ಸೇವೆ ಮಾಡಲು ಅವಕಾಶ ಕೊಟ್ಟಂತೆ ಉಮರಸಿಂಗ್ ಅವರು ತಮ್ಮಸೇವೆಯಲ್ಲಿ ಸೇವಾ ಮನೋಭಾವನೆಯೊಂದಿಗೆ ಮುನ್ನಡೆದು ಎಲ್ಲರೊಂದಿಗೆ ಪ್ರೀತಿ ಪ್ರೇಮ ಗಳಿಸಿ ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದಿದ ಅವರು ತಮ್ಮ ನಿವೃತ್ತಿ ಜೀವನ ಸುಃಖಮಯವಾಗಿ ಸಾಗಲಿ ಬ್ಯಾಂಕಿಗೆ ಸಂಬಂದಿತ ಕೆಲವು ಸಲಹೆಗಳನ್ನಾದರೂ ಇನ್ನೂ ನೀಡುತ್ತಾ ಸಾಗಲಿ ಎಂದು ಆಶಿಸಿದರು.

ಇದೇ ಸಮಯದಲ್ಲಿ ನಿವೃತ್ತಿ ಹೊಂದಿದ ಕಿರಿಯ ಸಹಾಯಕ ಉಮರಸಿಂಗ್ ದಂಪತಿಗಳಿಗೆ ಆಡಳಿತ ಮಂಡಳಿಯವರ ವತಿಯಿಂದ 5 ಗ್ರಾಂ. ಚಿನ್ನದ ಉಂಗುರ, ಸಿಬ್ಬಂದಿಯವರ ವತಿಯಿಂದ 5 ಗ್ರಾಂ ಚಿನ್ನದ ಉಂಗೂರ, ಹಾಕಿ ಸನ್ಮಾನಿಸಿ ಗೌರವಿಸಲಾಯಿತು. ಇದು ಅಲ್ಲದೇ ವಿವಿಧ ಬ್ಯಾಂಕುಗಳ ಹಾಗೂ ಸಂಘ ಸಂಸ್ಥೆಯ ವತಿಯಿಂದ ಗಣ್ಯ ಮಾನ್ಯರ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಬ್ಯಾಂಕ್ ಅಧ್ಯಕ್ಷರಾದ ಗುರುಸಂಗಪ್ಪ ಕಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪ್ರಧಾನ ವ್ಯವಸ್ಥಾಪಕ ಶಂಕರಗೌಡ ಪಾಟೀಲ, ಉಪಾಧ್ಯಕ್ಷ ಯಮನಪ್ಪ ಬರದೇನಾಳ, ನಿರ್ದೇಶಕರುಗಳಾದ ಡಿ.ವ್ಹಿ.ಪಾಟೀಲ, ಬಸನಗೌಡ ಮಾಲಿಪಾಟೀಲ, ಶರಣಪ್ಪ ಇಲಕಲ್ಲ, ನಾಗಪ್ಪ ಗೊಟಗುಣಕಿ, ಶ್ರೀಮತಿ ಸರೋಜಾ ದೇಸಾಯಿ, ಶ್ರೀಮತಿ ಜ್ಯೋತಿ ಹಜೇರಿ, ದಸ್ತಗಿರಸಾಬ ಕೇಂಭಾವಿ, ಮಡಿವಾಳಪ್ಪ ಕಟ್ಟಿಮನಿ, ಬಸವರಾಜ ಕುಂಭಾರ, ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಬಸವರಾಜ ಕುಂಭಾರ ನಿರೂಪಿಸಿ ವಂದಿಸಿದರು.

## ಶಾಸಕರಿಂದ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಜಮಖಂಡಿ: ತಾಲೂಕಿನ ರಾಜ್ಯ ಹೆದ್ದಾರಿ ಕಕಮರಿ ಖಾನಾಪೂರ ರಸ್ತೆಯಲ್ಲಿನ ಕಿಮಿ 26.60 ರಿಂದ 27.70 ಮತ್ತು 39.50 ರಿಂದ 45.80ರ ವರೆಗಿನ ರಸ್ತೆ ಸುಧಾರಣೆ ಕಾಮಗಾರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿ ಪೂಜೆ ನೆರವೇರಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಆರ್.ಐ.ಎಫ್.ಅನುದಾನದಲ್ಲಿ 5054 ಯೋಜನೆ ಅಡಿಯಲ್ಲಿ ಅಂದಾಜು 5.08 ಕೋಟಿ ವೆಚ್ಚದಲ್ಲಿ ರಸ್ತೆ ದುರಸ್ತಿ ಅಭಿವೃದ್ಧಿ ಕಾಮಗಾರಿ ನಡೆಯಲಿದೆ. ರಸ್ತೆಗಳು ಸುಧಾರಣೆಗೊಂಡರೇ ಅಪಘಾತಗಳ ಸಂಖ್ಯೆ ಕೂಡ ಕಡಿಮೆಯಾಗಲಿದೆ. ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದರು.

ಮುಖಂಡರಾದ ನಾಗಪ್ಪ ಸನದಿ, ಅಜಯ ಕಡಪಟ್ಟಿ, ಮಲ್ಲು ದಾನಗೌಡ, ವಿಶ್ವಾಸ ಪಾಟೀಲ, ಗಣೇಶ ಸಿರಗಣ್ಣವರ, ಶಂಕರ ಕಾಳೆ, ಶ್ರೀಧರ ಕಂಬಿ, ಯಮನೂರ ಮೂಲಂಗಿ, ರಮೇಶ ಆಲಬಾಳ, ರಾಜೇಸಾಬ ಕಡಕೋಳ, ವಿನಾಯಕ ಗವಳಿ, ಶ್ರೀಶೈಲ ಗಡಾದ, ರೂಪಾ ಗೇವಾರಿ, ಸುಚಿತಾ ಬುತಡಾ, ಶಿವಪ್ಪ ಕಡಪಟ್ಟಿ, ಸುರೇಶಗೌಡ ಪಾಟೀಲ, ರಾಜುಗೌಡ, ಶಿವಾನಂದ ಪಾಟೀಲ, ಸಂತೋಷ ಬಡಗೇರ, ಕುಶಾಲ ವಾಗ್ಮೊರೆ, ಶಿವು ಸುತಾರ, ವಿನಾಯಕ ಪವಾರ, ಗೋವಿಂದ ಮೂಡಲಗಿ, ಸುನೀಲ ಭೋವಿ, ಸಿದ್ಧಲಿಂಗಯ್ಯ ಹಿರೇಮಠ, ಸಂತೋಷ ಮಾನೆ, ಪ್ರಥಮದರ್ಜೆ ಗುತ್ತಿಗೆದಾರ ಸಿ.ಕೆ.ಒಂಟಗೋಡಿ ಸಹಿತ ಹಲವರು ಇದ್ದರು.

## ಜೂ.೦೯ರಂದು ಹೋಬಳಿ ಮಟ್ಟದ ಪಿಂಚಣಿ ಅದಾಲತ್

ವಿಜಯಪುರ, : ಪಿಂಚಣಿದಾರರ ಅಹವಾಲು ಆಲಿಸಲು ಹಾಗೂ ಅರ್ಹರಿಗೆ ಪಿಂಚಣಿ ಮಂಜೂರು ಮಾಡುವ ಕುರಿತ ಸಾಮಾಜಿಕ ಭದ್ರತಾ ಯೋಜನೆಂಬಡಿಯ ಜಿಲ್ಲೆಯ 13 ಗ್ರಾಮಗಳಲ್ಲಿ ಜೂನ್ 09ರ ಬೆಳಿಗ್ಗೆ 11 ಗಂಟೆಗೆ ಹೋಬಳಿ ಮಟ್ಟದ ಪಿಂಚಣಿ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದ್ದಾರೆ.

ಅಂದು ವಿಜಯಪುರದ ಉಪ ವಿಭಾಗಾಧಿಕಾರಿಗಳು ಬಸವನ ಬಾಗೇವಾಡಿ ತಾಲೂಕಿನ ಮಸಬಿನಾಳ ಗ್ರಾಮದ ಶ್ರೀ ಗೌರಿಶಂಕರ ದೇವಸ್ಥಾನದಲ್ಲಿ, ಇಂಡಿ ಉಪವಿಭಾಗಾಧಿಕಾ-ರಿಗಳು ಇಂಡಿ ತಾಲೂಕಿನ ಸಂಗೋಗಿ ಗ್ರಾಮದ ಶ್ರೀ ಹನುಮಾನ ದೇವಸ್ಥಾನದಲ್ಲಿ, ವಿಜಯಪುರದ ಗ್ರೇಡ್-2 ತಹಶೀಲ್ದಾರ ಅವರು ವಿಜಯಪುರ ನಗರದ ಲಕ್ಷ್ಮೀ ನಗರದ ಗಚ್ಚಿನಕಟ್ಟಿ ಕಾಲೋನಿಯ ಲಕ್ಷ್ಮೀ ದೇವಸ್ಥಾನ ಆವರಣದಲ್ಲಿ, ತಿಕೋಟಾ ಗ್ರೇಡ್-2 ತಹಶೀಲ್ದಾರ ಅವರು, ಕನಮಡಿ ಗ್ರಾಮದ ಗ್ರಾಮ ಪಂಚಾಯತಿಯ ಕಾರ್ಯಾಲಯದಲ್ಲಿ ಹಾಗೂ ಬಬಲೇಶ್ವರ ಗ್ರೇಡ್-2 ತಹಶೀಲ್ದಾರ ಅವರು ಕಾತ್ರಾಳ ಗ್ರಾಮದ ಶ್ರೀ ಹನುಮಾನ ದೇವಸ್ಥಾನದಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ನಿಡಗುಂದಿ ಗ್ರೇಡ್-2 ತಹಶೀಲ್ದಾರ ಅಬ್ಬಿಹಾಳ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ, ಕೊಲ್ಹಾರ ತಹಶೀಲ್ದಾರ ಚೀರಲದಿನ್ನಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ, ಮುದ್ದೇಬಿಹಾಳ ಗ್ರೇಡ್-2 ತಹಶೀಲ್ದಾರ ಹೊಕ್ರಾಣಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ, ತಾಳಿಕೋಟಿಯ ತಹಶೀಲ್ದಾರ ಬಿಂಜಲಬಾವಿ ಗ್ರಾಮದ ಶ್ರೀ ಮಾರುತಿ ದೇವಸ್ಥಾನದಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ಚಡಚಣ ಗ್ರೇಡ್-2 ತಹಶೀಲ್ದಾರ ನಂದ್ರಾಳ ಗ್ರಾಮದ ಗ್ರಾಮ ಚಾವಡಿಯಲ್ಲಿ, ಸಿಂದಗಿ ಗ್ರೇಡ್-2 ತಹಶೀಲ್ದಾರ ಬಿಸನಾಳ ಗ್ರಾಮದ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ, ದೇವರ ಹಿಪ್ಪರಗಿ ಗ್ರೇಡ್-2 ತಹಶೀಲ್ದಾರ ದೇವರ ಹಿಪ್ಪರಗಿಯ ವಾರ್ಡ ಸಂಖ್ಯೆ 8ರ ನಾಡ ಕಚೇರಿಯಲ್ಲಿ ಹಾಗೂ ಆಲಮೇಲ ತಹಶೀಲ್ದಾರ ಅವರು ತೋಂಟಾಪುರ ಗ್ರಾಮದ ಬ್ರಹ್ಮದೇವರ ಗುಡಿಯಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ಸಾಮಾಜಿಕ ಭದ್ರತೆ ಯೋಜನೆಯಡಿ ವಿವಿಧ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ನೇರ ಹಣ ವರ್ಗಾವಣೆ ಮೂಲಕ ಸರ್ಕಾರದ ಆದೇಶದನ್ವಯ ಪಿಂಚಣಿ ಪಾವತಿಸಲಾಗುತ್ತಿದ್ದು, ಈ ಕಾರ್ಯವನ್ನು ಸಂಬಂಧಿಸಿದ ಬ್ಯಾಂಕ್, ಅಂಚೆ ಕಚೇರಿ ಅಧಿಕಾರಿಗಳ ಸಹಯೋಗದೊಂದಿಗೆ ತಪ್ಪದೇ ಮಾಡಿಸುವಂತೆಯೂ ಹಾಗೂ ಪಿಂಚಣಿ ಅದಾಲತನಲ್ಲಿ ಪಿಂಚಣಿದಾರರ ಮಾಹಿತಿಯೊಂದಿಗೆ ಎಲ್ಲಾ ಗ್ರಾಮಗಳ ಗ್ರಾಮ ಲೆಕ್ಕಿಗರು, ಪಂಚಾಯತ್ ಕಾರ್ಯದರ್ಶಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಂಚೆ ಕಚೇರಿ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

# ಅಂಕ ಪಡೆಯುವದು ಮುಖ್ಯವಲ್ಲ ಕೌಶಲ್ಯ ಬೆಳಸಿಕೊಳ್ಳಿ

ಜಮಖಂಡಿ: ಕಳೆದ 16 ವಸಂತಗಳಿಂದ ಗಾಣಿಗ ಸಮಾಜ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ನಡೆಸುತ್ತಿರುವದು ಅಭಿಮಾನ ಸಂಗತಿಯಾಗಿದೆ. ಬರತಕ್ಕ ದಿನಗಳಲ್ಲಿ ಬೇರೆ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕೆಲಸವನ್ನು ಗಾಣಿಗ ಸಮಾಜ ಮಾಡಲಿ ಎಂದು ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ಸಲಹೆ ನೀಡಿದರು,.

ನಗರದ ಶ್ರೀ ನಂದಿಕೇಶ್ವರ ದೇವಸ್ಥಾನದಲ್ಲಿ ರವಿವಾರ ತಾಲೂಕ ಗಾಣಿಗ ಸಮಾಜ ಮತ್ತು ತಾಲೂಕ ಗಾಣಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ, ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.



ಪ್ರತಿಯೊಬ್ಬರು ಜೀವನದಲ್ಲಿ ಶಿಸ್ತು, ಸಂಯಮ ಅಳವಡಿಸಿಕೊಂಡರೇ ಅವರೆಲ್ಲರ ಬದುಕು ಉತ್ತಮ ಆಗಲಿದೆ. ಯಶಸ್ವಿಗಾಗಿ ನಿರಂತರವಾಗಿ ಶ್ರಮಿಸಬೇಕು. ವಿದ್ಯಾರ್ಥಿಗಳು ಅಂಕಗಳನ್ನು ಪಡೆಯುವದು ಸಾಧನೆಯಲ್ಲ, ತಮ್ಮಲ್ಲಿ ಕೌಶಲ್ಯ ಕೂಡ ಅಗತ್ಯವಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆಯಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಕೌಶಲ್ಯ ಪ್ರಮುಖ ಪಾತ್ರ ವಹಿಸುತ್ತಿದೆ. ಗಾಣಿಗ ಸಮಾಜ ಬಡವಿದ್ಯಾರ್ಥಿಗಳಿಗೆ ಆರ್ಥಿಕ ಶಕ್ತಿ ನೀಡುವ ಮೂಲಕ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಜಿ. ಎಸ್.ನ್ಯಾಮಗೌಡ ಮಾತನಾಡಿ, ನಗರದಲ್ಲಿ ದೇಶಗತ್ತಿ ಹಿರಿತನ ನಮ್ಮಲ್ಲಿದೆ. ಗಾಣಿಗ ಸಮಾಜ 1994 ರಿಂದ ಸಂಸ್ಥೆಯಾಗಿ ಸೇವೆ ಸಲ್ಲಿಸುತ್ತಿದೆ. ಇಂದಿನ ದಿನಮಾನದಲ್ಲಿ ಸಂಘಟನೆ ಅಗತ್ಯ ಆಗಿದೆ. ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಲಿದೆ. ಗಾಣಿಗ ಸಮಾಜ ನೆರೆಹೊರೆಯವರನ್ನು ಪ್ರೀತಿಸುವ ಸಮಾಜವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್. ಎಲ್.ಸಿ. ಮತ್ತು ಪಿಯುಸಿ. ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಪಡೆದ 120 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. 17 ವಿಶೇಷ ಸಾಧಕರಿಗೆ ಪ್ರಶಸ್ತಿ ನೀಡ ಸನ್ಮಾನಿಸಲಾಯಿತು. ಹಿರಿಯ ನ್ಯಾಯವಾದಿ ಎನ್.ಎಸ್.ದೇವರವರ ಮಾತನಾಡಿದರು.

ಸಿದ್ಧಕ್ಷೇತ್ರದ ಸಿದ್ಧಮುತ್ಯಾ ಸಾನಿಧ್ಯ ವಹಿಸಿದ್ದರು. ಗಾಣಿಗ ಸಮಾಜದ ಅಧ್ಯಕ್ಷ ಕೆ.ಕೆ.ತುಪ್ಪದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ನಗರಸಭೆಅಧ್ಯಕ್ಷ ಪರಮಾನಂದ ಗವರೋಜಿ, ಸಿಪಿಐ ಮಲ್ಲಪ್ಪ ಮಡ್ಡಿ, ಸಂಗಪ್ಪ ದಡ್ಡಿಮನಿ, ಸಿದ್ರಾಮ ಜಂಬಗಿ, ಚಂದ್ರಶೇಖರ ಮಂಡೇಗಾರ, ಪಶು ವೈದ್ಯಾಧಿಕಾರಿ ರಾಜಕುಮಾರ ನಾಗರಹಳ್ಳಿ, ಪೌರಾಯುಕ್ತ ಜ್ಯೋತಿ ಗಿರೀಶ, ಗಾಣಿಗ ನೌಕರರ ಸಂಘದ ಅಧ್ಯಕ್ಷ ಜಗದೀಶ ಪಾಸೋಡಿ, ಗಾಣಿಗ ಸಮಾಜದ ಯುವ ಘಟಕ ಅಧ್ಯಕ್ಷ ವಿರೇಂದ್ರ ಕಲೂತಿ, ಗಾಣಿಗ ಸಮಾಜದ ಮಹಿಳಾ ಘಟಕ ಅಧ್ಯಕ್ಷೆ ಶಾಂತಾ ನ್ಯಾಮಗೌಡ, ಗಾಣಿಗ ಸಮಾಜದ ಮಹಿಳಾ ಯುವಘಟಕ ಅಧ್ಯಕ್ಷೆ ರಾಜಶ್ರೀ ನ್ಯಾಮಗೌಡ, ಮಲ್ಲಿಕಾರ್ಜುನ ನಿಂಗನೂರ, ನಾಗಪ್ಪ ಮುತ್ತಕ್ಕನವರ ಸಹಿತ ಹಲವರು ಇದ್ದರು.

ಶಿಕ್ಷಕಿ ಭಾರತಿ ಮದಿನವರ ಪ್ರಾರ್ಥಿಸಿದರು.

ಶಿಕ್ಷಕ ಸಿ.ಕೆ.ಹೊಸೂರ ಸ್ವಾಗತಿಸಿದರು. ಅಕ್ಷರ ದಾಸೋಹ ನಿರ್ದೇಶಕ ಹಣಮಂತ ಅರಕೇರಿ ನಿರೂಪಿಸಿದರು. ಶಿಕ್ಷಣ ಸಂಯೋಜಕ ಡಿ.ಬಿ.ತೇಲಿ ವಂದಿಸಿದರು.

## ಬಾಲಕಿಯರ ಕ್ರೀಡಾ ವಸತಿ ನಿಲಯ ನೂತನ ಕಡ್ಡದ ಉದ್ಘಾಟನೆ

ಹಾವೇರಿ: ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ನಿರ್ಮಿತಿ ಕೇಂದ್ರ ಸಹಯೋಗದಲ್ಲಿ ಬಾಲಕಿಯರ ಕ್ರೀಡಾ ವಸತಿ ನಿಲಯ ಹೊಸ ಕಟ್ಟಡ ದ ಉದ್ಘಾಟನಾ ಸಮಾರಂಭ ಜೂನ್ 3ರಂದು ಬೆಳಿಗ್ಗೆ 11 ಕ್ಕೆ ಹಾವೇರಿ ನಗರದ ಜಿಲ್ಲಾ ಕ್ರೀಡಾಂಗಣ ದಲ್ಲಿ ಜರುಗಲಿದೆ.

ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ, ಕೇಂದ್ರ ಗ್ರಾಹಕರ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಹಾಗೂ ಕಾರ್ಮಿಕ ಸಚಿವ ಸಂತೋಷ ಲಾಡ್ , ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ, ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಘನ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಉದ್ಘಾಟನೆ ನೆರವೇರಿಸಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್. ಮುಖ್ಯ ಅತಿಥಿಗಳಾಗಿ ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಧ್ಯಕ್ಷ ಅಜೀಮ್‌ಪೀರ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ವಿಧಾನ ಪರಿಷತ್ ಶಾಸಕರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ. ಯು.ಬಿ.ಬಣಕಾರ. ಪ್ರಕಾಶ ಕೋಳಿವಾಡ. ಯಾಸಿರ್ ಅಹ್ಮದ್‌ಖಾನ್ ಪಠಾಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ, ನಗರಸಭೆ ಅಧ್ಯಕ್ಷೆ ಶ್ರೀಮತಿ ಶಶಿಕಲಾ ರಾಮು ಮಾಳಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಹಿರೇಮಠ, ನಗರಸಭೆ ಉಪಾಧ್ಯಕ್ಷ ಮಲ್ಲಿಕಾರ್ಜುನ ಸಾತೇನಹಳ್ಳಿ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಮೈದೂರ ಪಾಲ್ಗೊಳ್ಳಲಿದ್ದಾರೆ.

## ನಗರದ ಶಶಿಧರ ಮೀಸಿಗೆ ಡಾ.ಬಿ.ಆರ್.ಅಂಬೇಡ್ಕರ ಪ್ರಶಸ್ತಿ



ಜಮಖಂಡಿ: ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರರ 134ನೇ ಜನ್ಮ ದಿನಾಚರಣೆ ದಿನದಂದು ಬೆಂಗಳೂರಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನೌಕರರ ಸಂಘ ರಾಜ್ಯ ಸಮಿತಿ ಮತ್ತು ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಗರದ ಯುವ ಧುರೀಣ ಶಶಿಧರ ಮೀಸಿ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಯುವ ಧುರೀಣ ಶಶಿಧರ ಮೀಸಿ ಅವರು ಸ್ವಾಭಿಮಾನಿಯಾಗಿ ಬಸವ, ಡಾ.ಬಿ.ಆರ್. ಅಂಬೇಡ್ಕರರ ನೀತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಕೊಂಡಿದ್ದು, ಈಗಾಗಲೇ ಗೌರವ ಡಾಕ್ಟರೇಟ್, ತಾಲೂಕ ಮತ್ತು ಜಿಲ್ಲಾಮಟ್ಟದ ಪ್ರಶಸ್ತಿ ಬಂದಿವೆ. ಅವರ ಸೇವೆಗಳು ನಿರಂತರವಾಗಿ ಸಾಗಲೆಂದು ಸಾಹಿತಿಗಳು, ವಿವಿಧ ಸಂಘಟನೆಗಳು, ಸಂಘ ಸಂಸ್ಥೆಗಳು, ತಾಲೂಕ ಪತ್ರಕರ್ತರ ಸಾಂಸ್ಕೃತಿಕ ಬಳಗ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

## ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ

ಮುಧೋಳ: ತಾಲ್ಲೂಕಿನ ಕೃಷಿ ಇಲಾಖೆಯಿಂದ2025-26 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಕಾರ್ಯ ರೈತ ಸಂಪರ್ಕ ಕೇಂದ್ರ ಮುಧೋಳ ಮತ್ತು ಲೋಕಾಪೂರದಲ್ಲಿ ಪ್ರಾರಂಭವಾದಿದ್ದು ರೈತರು ತೆರಳುವಾಗ ತಮ್ಮ ಆಧಾರಕಾರ್ಡ ಪ್ರತಿಯನ್ನು ತೆಗೆದುಕೊಂಡು ಹೋಗಬೇಕು. ಪ್ರಸಕ್ತ ಹಂಗಾಮಿನಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಇರುವುದರಿಂದ ರೈತರು ಇಳಿಜಾರು ಜಮೀನುಗಳಲ್ಲಿ ಕೋರಿಗೆ ಬಿತ್ತನೆ ಕೈಗೊಳ್ಳಬಹುದು, ಸಮತಟ್ಟಾದ / ತಂಪು ಹಿಡಿಯುವ ಜಮೀನುಗಳಲ್ಲಿ ರೈತರು ಸಾಲುಗಳನ್ನು ಕೊರೆದು ಬೋದಿನ ಮೇಲೆ ಕಾಳುಗಳನ್ನು ಊರುದು ಉತ್ತಮ.ಇದರಿಂದ ಹೆಚ್ಚಾದ ನೀರು ಬಸಿದು ಹೋಗಿ ಬೆಳೆಗಳಿಗೆ ತೊಂದರೆಯಾಗುವುದಿಲ್ಲ. ಕೇವಲ ಒಂದೆ ಬೆಳೆಯನ್ನು ಬೆಳೆಯದೆ ಬಹು ಬೆಳೆ ಪದ್ದತಿ, ಅಂತರ ಬೆಳೆ ಪದ್ದತಿಯನ್ನು ಅನುಸರಿಸಿ, ದ್ವಿದಳ ದಾನ್ಯಗಳಿಗೆ ಮತ್ತು ಸೋಯಾಬಿನ ಬೀಜಕ್ಕೆ ರೈಬಯಂ ಮತ್ತು ಟೆಕೊಡರ್ಮಾ ಜೈವಿಕ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದು, ಸಮತೋಲನ ಪೋಷಕಾಂಶ ಬಳಸಿ ಹೆಚ್ಚಿನ ಲಾಭ ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು.

ಮೆಕ್ಕೆಜೋಳ ಮತ್ತು ಕಬ್ಬು ಬೆಳೆಗಳ ಬಿತ್ತನೆಗೆ ಸಾರಜನಕ, ರಂಜಕ, ಪೋಟ್ಯಾಷ್ (ಓ:ಕ:ಏ) ಒದಗಿಸುವ ಸಂಯುಕ್ತ ರಸಗೊಬ್ಬರದ ಜೋತೆಗೆ, ಕಪ್ಪು ಮಣ್ಣಿನಲ್ಲಿ ಸತುವಿನ ಸಲ್ಫೇಟ್, ಕೆಂಪು ಮಣ್ಣಿನಲ್ಲಿಇದರೊಂದಿಗೆಕಬ್ಬಿನ ಸಲ್ಫೇಟ್ ಲಘುಪೋಷಕಾಂಶಗೊಬ್ಬರವನ್ನುಬಳಸುವುದು.ಕೇವಲ ಡಿ.ಎ.ಪಿ ಗೊಬ್ಬರ ಬಳಸದೆ ಅದಕ್ಕೆ ಪರ್ಯಾಯವಾಗಿ ಲಭ್ಯವಿರುವಗಂಧಕಒದಗಿಸುವ 20:20:0:13 + ಪೋಟ್ಯಾಶ, ಅಥವಾ ಪೋಟ್ಯಾಶಒದಗಿಸುವಇತರೆ ಸಂಯುಕ್ತ ಗೊಬ್ಬರಗಳಾದ 15:15:15, 10:26:26, 12:32:16, 14:35:14, 17:17:17, 14:28:14, 19,19,19, 9:24:24, 8:21:21 ಮತ್ತು 24:24:0:08 ಇತ್ಯಾದಿ ಕಾಂಪ್ಲೆಕ್ಸ ರಸಗೊಬ್ಬರಗಳನ್ನು ಸಹ ಬಳಸಬಹುದಾಗಿದೆ. ಕಾರಣ-ರೈತ ಬಾಂಧವರಲ್ಲಿಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಸಲು ಸೂಚಿಸುತ್ತಾ, ಮೇಲು ಗೊಬ್ಬರ ನೀಡುವಾಗಅಥವಾತಂಪು ವಾತಾವರನ ವಿದ್ದಾಗ ಬೆಳೆಗಳ ಚೇತರಿಕೆಗಾಗಿಕಡಿಮೇಧರದಲ್ಲಿ ಸಿಗುವ ನ್ಯಾನೋಯುರಿಯಾ, 24:24:0, 19:19:19 ಹಾಗೂ ನ್ಯಾನೋಡಿ.ಎ.ಪಿ + 0:0:50 / 0:0:52:34 / ಮ್ಯಾಂಗನೀಸ್ ಸಲ್ಫೇಟ್‌ದ್ರವರೂಪದ ಸಿಂಪರಣೆಯನ್ನು ಕೈಗೊಳ್ಳಲು ತಿಳಿಸಿದೆ. ಎಲ್ಲ ಕೃಷಿ ಪರಿಕರಗಳನ್ನು ಅಧೀಕೃತ ಮಾರಾಟಗಾರರಿಂದ ಮಾತ್ರಖರೀದಿಸಲು ಕೋರಲಾಗಿದೆ-ಎಂದು ಶ್ರೀ. ಎಸ್. ಬಿ. ದೊಡಮನಿ, ಸಹಾಯಕ ಕೃಷಿ ನಿರ್ದೇಶಕರು, ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದರು.

## ಜೂ. 5 ರಂದು ವಿದ್ಯುತ್ ವ್ಯತ್ಯಯ

ಹಾವೇರಿ: : ಗುತ್ತಲ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೂನ್ 5ರಂದು ಗುರುವಾರ ತುರ್ತು ನಿರ್ವಹಣಾ ಕಾಮಗಾರಿ ಇರುವದರಿಂದ ಗುತ್ತಲ,ಹೊಸರಿತ್ತಿ ಮತ್ತು ನೀರಲಗಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಿಗ್ಗೆ 10 ರಿಂದ ಸಾಯಂಕಾಲ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆದ್ದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

# ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಇಳಿಮುಖವಾಗುತ್ತಿದೆ

ಜಮಖಂಡಿ: ಪ್ರಸ್ತುತ ದಿನಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ ಆಗುತ್ತಿದ್ದು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಹಾಗೂ ಬೆಂಗಳೂರು ಸಂವಹನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್ ನರಸಿಂಹಮೂರ್ತಿ ಹೇಳದರು.

ನಗರದ ಬಾಗಲಕೋಟೆ ವಿಶ್ವವಿದ್ಯಾಲಯ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಸಮಾಜ ಮತ್ತು ಮಾಧ್ಯಮಗಳು ಕುರಿತು ನಡೆದ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.




ಪ್ರಸ್ತುತ ದಿನಗಳಲ್ಲಿ ಪತ್ರಿಕೋದ್ಯಮ ಯುಗ, ಎಲೆಕ್ಟ್ರಾನಿಕ್ಸ್ ಮಾಧ್ಯಮ ಯುಗ, ಸಾಮಾಜಿಕ ಜಾಲತಾಣಗಳ ಯುಗ ಮರೆಯಾಗುತ್ತಿದ್ದು ಇನ್ನು ಮುಂದೆ ಆನಲೈನ್ ಯುಗ ಎನ್ನುವಂಥದ್ದು ಬರುತ್ತಿದೆ. ಇಂದಿನ ಸಂದರ್ಭದಲ್ಲಿ ಯುವ ಜನಾಂಗದವರು ಮಾಧ್ಯಮ ಕ್ಷೇತ್ರಕ್ಕೆ ಆಗಮಿಸುತ್ತಿದ್ದು ಅವರು ಸಮಾಜಮುಖಿಯಾಗಿ ಯೋಚಿಸುವ ಕೆಲಸವನ್ನು ಮಾಡಬೇಕು. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವವರು ಪ್ರಾಮಾಣಿಕರಾಗಿ ಮತ್ತು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ ದಯಾನಂದ ಸಾವುಕಾರ ಮಾತನಾಡಿ, ನಮ್ಮ ಬಾಗಲಕೋಟೆ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ ಮೊಟ್ಟಮೊದಲು ಸಲ ಪತ್ರಕರ್ತಗೆ ಪತ್ರಿಕೋದ್ಯಮ ಒಂದು ದಿನದ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ. ಕಾರ್ಯಗಾರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ಪತ್ರಿಕೋದ್ಯಮ ಕುರಿತು ಪ್ರಸ್ತುತ ಸಂದರ್ಭದ ವಿಚಾರಗಳನ್ನು ಚರ್ಚಿಸಿದ್ದಾರೆ ಎಂದರು.

ಕಾರ್ಯಗಾರದಲ್ಲಿ ತುಮಕೂರಿನ ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಬಿ.ಟಿ.ಮುದ್ದೇಶ್ ನವ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳ ಕುರಿತು, ಮೈಸೂರಿನ ಮಾಧ್ಯಮ ವಿಶ್ಲೇಷಕ ಡಾ.ಅಮ್ಮಸಂದ್ರ ಸುರೇಶ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಕೃಷಿ ಪತ್ರಿಕೋದ್ಯಮ ಕುರಿತು, ಬಳ್ಳಾರಿಯ ಹಿರಿಯ ಪತ್ರಕರ್ತ ಪ್ರೊ.ಸಿ. ಮಂಜುನಾಥ ಸಾಹಿತ್ಯ ಮತ್ತು ಮಾಧ್ಯಮ ಕುರಿತು ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಡಾ ಚಿದಾನಂದ ಢವಳೇಶ್ವರ, ಪ್ರಸಾರಂಗದ ನಿರ್ದೇಶಕ ಡಾ.ಮಲ್ಲಿಕಾರ್ಜುನ ಮರಡಿ, ಕಾರ್ಯಾಗಾರದ ಸಹಸಂಚಾಲಕ ಡಾ.ಆರ್.ನಾಗರಾಜ್ ಇದ್ದರು.

# ಆಧುನಿಕ ಜಗತ್ತು ಅವನತಿ ದಾರಿಯಲ್ಲಿ ಸಾಗುತ್ತಿದೆ:ನ್ಯಾಯವಾದಿ ಕಾಳೆ




ಜಮಖಂಡಿ: ಅಪರಾಧಗಳ ಸಂಖ್ಯೆಗಳು ಹೆಚ್ಚಾದರೆ ಕಾನೂನಿನ ಹಿಡಿತ ಹೆಚ್ಚಾಗಲಿದೆ. ಅನೈತಿಕ ಚಟುವಟಿಕೆಗಳಿಂದ ಅಪರಾಧಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಒತ್ತಡದ ಜೀವನ ದುಶ್ಚಟಗಳನ್ನು ಆಹ್ವಾನಿಸುವ ಸಾಧ್ಯತೆಯಿದೆ ಎಂದು ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ, ನ್ಯಾಯವಾದಿ ಶ್ರೀಶೈಲ ಕಾಳೆ ಹೇಳಿದರು.

ನಗರದ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಭಾಭವನದಲ್ಲಿ ಶನಿವಾರ ತಾಲೂಕ ಕಾನೂನು ಸೇವಾ ಸಮೀತಿ, ನ್ಯಾಯವಾದಿಗಳ ಸಂಘ, ತಾಲೂಕ ಆರೋಗ್ಯ ಇಲಾಖೆ ಸಹಯೋಗದಲ್ಲಿ ಕಾನೂನು ನೆರವು ಅರಿವು ಮತ್ತು ವಿಶ್ವ ತಂಬಾಕು ನಿಷೇಧ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಭಕ್ತ ಕುಟುಂಬ ವ್ಯವಸ್ಥೆಯಿಂದ ಜೀವನ ಶೈಲಿಯಲ್ಲಿ ಬದಲಾವಣೆ ತರುತ್ತಿದೆ. ಹಿಂದಿನ-ಇಂದಿನ ಜೀವನ ಶೈಲಿ ವ್ಯವಸ್ಥೆ ಬದಲಾವಣೆಗೊಂಡಿದೆ. ಸಂಸ್ಕಾರ ಸಂಸ್ಕೃತಿ ಅರಿತು ರೂಢಿಸಿಕೊಂಡಲ್ಲಿ ನಾವು ಸುರಕ್ಷಿತರಾಗಿ ಜೀವನವನ್ನು ಸಾಗಿಸಬಹುದು. ಪ್ರತಿಯೊಬ್ಬರು ಕಾನೂನನ್ನು ಅರಿತುಕೊಂಡು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಅಪರಾಧಗಳ ಸಂಖ್ಯೆ ಕಡಿಮೆಯಾಗಲಿದೆ ಎಂದರು.

ಆಧುನಿಕ ಜಗತ್ತು ಅವನತಿಯ ದಾರಿಯಲ್ಲಿ ಸಾಗುತ್ತಿದೆ. ಶಿಕ್ಷಣವಂತ ಸಮಾಜ ನಿರ್ಮಾಣವಾದರೇ ಅಪರಾಧಗಳ ಸಂಖ್ಯೆ ಕಡಿಮೆಯಾಗಲಿದೆ. ಓರ್ವ ವಸನಿ ಕುಟುಂಬದವರು ಆರ್ಥಿಕವಾಗಿ ತೊಂದರೆ ಅನುಭವಿಸುವ ಮೂಲಕ ಸಮಾಜ ಆ ಕುಟುಂಬವನ್ನು ಗೌರವಿಸುವದಿಲ್ಲ. ಇಂದಿನ ದಿನಮಾನದಲ್ಲಿ ದುಶ್ಚಟಗಳ ಜಾಗೃತಿ ಮೂಡಿಸುವದು, ಅಭಿಯಾನ ಕೈಕೊಳ್ಳುವದು ಅಗತ್ಯವಾಗಿದೆ. ಪ್ರಕೃತಿ ನೀಡಿರುವ ಶರೀರವನ್ನು ನಾವೆಲ್ಲರೂ ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಬೇಕಾಗಿದೆ ಎಂದರು.

ಜೆ.ಎಂ.ಎಫ್.ಸಿ. ನ್ಯಾಯಾಲಯ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀದೇವಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವೇದಿಕೆಯಲ್ಲಿ ತಾಲೂಕ ಸಾರ್ವಜನಿಕ ಸರಕಾರಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ವಿ.ಸಿ. ಮುದಿಗೌಡರ, ಸಂಪನ್ಮೂಲವ್ಯಕ್ತಿ ಎನ್.ಸಿ.ಡಿ. ವೈದ್ಯಾಧಿಕಾರಿ ಡಾ.ಸ್ಮಿತಾ ಗಿರೆಗೋಳ ಇದ್ದರು. ಲಕ್ಷ್ಮೀ ಮುಧೋಳ ಪ್ರಾರ್ಥಿಸಿದರು. ರವಿ ಕಾಂಬಳೆ ಸ್ವಾಗತಿಸಿದರು. ಡಾ.ಉಮೇಶ ಜೋಶಿ ನಿರೂಪಿಸಿದರು. ಮಲ್ಲು ಅಸ್ಕಿ ವಂದಿಸಿದರು. ಸ್ಥಳೀಯ ಬಿ.ಎಲ್.ಡಿ.ಇ. ಸಂಸ್ಥೆಯ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

### ಆಲಮಟ್ಟಿ-ಯಾದಗಿರಿ ಹೋರಾಟ ಸಮಿತಿ ನೇತೃತ್ವದಲ್ಲಿ ಸಂಸದ ಜಿಗಜಿನ್ನಿಗೆ ಸನ್ಮಾನ

# ಆಲಮಟ್ಟಿ-ಯಾದಗಿರಿ ರೈಲ್ವೇ ಮಾರ್ಗ ಅನುಷ್ಠಾನಕ್ಕಾ ಜಿಗಜಿನ್ನಿ ಸ್ಪಂದನೆ

ತಾಳಿಕೋಟೆ, ಬಹುದಿನಗಳ ಕನಸ್ಸಾಗಿ ಉಳಿದುಕೊಂಡಿದ್ದ ಆಲಮಟ್ಟಿ-ಯಾದಗಿರಿ ರೈಲ್ವೇ ಮಾರ್ಗ ಅನುಷ್ಠಾನಕ್ಕೆ ಸಂಬಂದಪಟ್ಟಂತೆ ಕೊನೆಯ ಹಂತದ ಸರ್ವೆ ಕಾರ್ಯ ನಡೆಸಲು ಕೇಂದ್ರ ರೈಲ್ವೆ ಸಚಿವ ವೈಷ್ಣವ ಅವರಿಗೆ ಮನವರಿಕೆ ಮಾಡಿ ಯಶಸ್ವಿಗೆ ಕಾರಣರಾದ ಸಂಸದ ರಮೇಶ ಜಿಗಜಿನ್ನಿ ಅವರಿಗೆ ಆಲಮಟ್ಟಿ-ಯಾದಗಿರಿ ಹೋರಾಟ ಸಮಿತಿಯ ಪದಾಧಿಕಾರಿಗಳು ಶನಿವಾರರಂದು ಸನ್ಮಾನಿಸಿ ಗೌರವಿಸಿದರು.

ಈ ಸಮಯದಲ್ಲಿ ಮಾತನಾಡಿದ ರೈಲ್ವೆ ಹೋರಾಟ ಸಮಿತಿಯ ಮುಖಂಡ ಆರ್. ಎಸ್.ಪಾಟೀಲ(ಕೂಚಬಾಳ) ಅವರು ಮಾತನಾಡಿ ಬ್ರಿಟಿಷರ ಕಾಲದಲ್ಲಿಯೇ ಆಗಬೇಕಿದ್ದ ಆಲಮಟ್ಟಿ-ಯಾದಗಿರಿ ರೈಲ್ವೆ ಮಾರ್ಗವು ಆಗೆಯೇ ಉಳಿದುಕೊಂಡು ಬಂದಿತ್ತು ಸಾಕಷ್ಟು ಭಾರಿ ಹೋರಾಟ ಸಮಿತಿಯವರು ಸರ್ಕಾರದ ಮೇಲೆ ಒತ್ತಡ ಹಾಕುತ್ತಾ ಬಂದಿದ್ದರೂ ಸ್ಪಂದನೆ ಸಿಕ್ಕಿದ್ದಿಲ್ಲಾ ಸದ್ಯ ಕೇಂದ್ರ ರೈಲ್ವೆ ಸಚಿವರಾದ ವೈಷ್ಣವ ಅವರಿಗೆ ಆಲಮಟ್ಟಿ-ಯಾದಗಿರಿ ರೈಲ್ವೆ ಮಾರ್ಗ ಅನುಷ್ಠಾನಕ್ಕೆ ಸಂಸದರಾದ ರಮೇಶ ಜಿಗಜಿನ್ನಿ ಅವರು ಮನವರಿಕೆ ಮಾಡಿದ್ದರ ಪರಿಣಾಮ ಕೊನೆಯ ಹಂತದ ಸರ್ವೆ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿಜಿ ಅವರ ನೇತೃತ್ವದ ಸರ್ಕಾರ ಹಣ ಮಿಸಲಿಡುವದರೊಂದಿಗೆ ಮುಂದಾಗಿದೆ ಈ ಕಾರ್ಯ ಸರ್ವೆ ಹಂತದಲ್ಲಿ ನಿಲ್ಲದೇ ಸಂಸದರು ಕಾಳಜಿ ವಹಿಸಬೇಕಾಗಿರುವದು ಅವಶ್ಯವಾಗಿದೆ ಈ ಆಲಮಟ್ಟಿ-ಯಾದಗಿರಿ ರೈಲ್ವೆ ಮಾರ್ಗ ಸಂಪೂರ್ಣ ಅನುಷ್ಠಾನಗೊಳ್ಳುವವರೆಗೂ ಸಂಸದರು ಪ್ರಯತ್ನಿಸಲಿದ್ದಾರೆಂಬ ಬರವಸೆ ನಮಗಿದಿ ಎಂದ ಅವರು ಈ ಮಾರ್ಗ ಪ್ರಾರಂಭಗೊಳ್ಳುವದರಿಂದ ಈ ಭಾಗದಲ್ಲಿ ಅತಿ ಹೆಚ್ಚು ಬೆಳೆಯುವ ಪ್ರಮುಖ ಬೆಳೆಗಳಾದ ಬತ್ತ, ತೊಗರಿ, ಇಳೆಗಳ ನ್ನಿತರ ಬಸಾಗಾಣಿಕೆಗೆ ಅನುಕೂಲವಾಗಲಿದೆ ಅದರ ಜೊತೆಗೆ ಕೂಡಗಿ ಎನ್‌ಟಿಪಿಸಿ ಇರುವದರಿಂದ ಇನ್ನಷ್ಟು ಆದಾಯ ದಾಯಕವಾದ ಮಾರ್ಗ ಇದಾಗಲಿದೆ ಎಂದರು.



ಸಂಸದ ರಮೇಶ ಜಿಗಜಿನ್ನಿ ಅವರು ಮಾತನಾಡಿ ಆಲಮಟ್ಟಿ-ಯಾದಗಿರಿ ರೈಲ್ವೆ ಮಾರ್ಗ ಆಗಬೇಕೆಂಬ ಕನಸ್ಸು ನಿನ್ನೆ ಮೊನ್ನೆಯದಲ್ಲಾ ಬಹಳಷ್ಟು ಹಳೆಯದ್ದಾಗಿದೆ

ಈ ಕಾರ್ಯದ ಯಶಸ್ವಿಗೆ ಕೇಂದ್ರ ರೈಲ್ವೆ ಸಚಿವರಾದ ವೈಷ್ಣವ ಅವರೊಂದಿಗೆ ಮಾತನಾಡಿದ್ದೇನೆ ಈ ಕಾರ್ಯ ಯಶಸ್ವಿಗೆ ಒತ್ತಡವನ್ನು ಹಾಕಿದ್ದೇನೆ ಸರ್ವೆ ಕಾರ್ಯ ಯಶಸ್ವಿಯಾಗುವದರ ಜೊತೆಗೆ ಆಲಮಟ್ಟಿ-ಯಾದಗಿರಿ ರೈಲ್ವೆ ಮಾರ್ಗ ಪ್ರಾರಂಬಿಸುವ ಹಂತಕ್ಕೆ ತಂದೆ ತರುತ್ತೇನೆ ಹೋರಾಟ ಸಮಿತಿಯ ಸದಸ್ಯರು ಯಾವುದೂ ಆತಂಕ ಪಡಬೇಡಿ ಈ ಕಾರ್ಯ ಯಶಸ್ವಿಗೊಳ್ಳಲಿದೆ ಎಂದು ಸಕಾರಾತ್ಮಕವಾಗಿ ರೈಲ್ವೆ ಹೋರಾಟ ಸಮಿತಿಯವರ ಮನವಿಗೆ ಸ್ಪಂದಿಸಿದರು.

ಈ ಸಮಯದಲ್ಲಿ ಆಲಮಟ್ಟಿ-ಯಾದಗಿರಿ ರೈಲ್ವೆ ಹೋರಾಟ ಸಮಿತಿಯ ಹುಣಸಗಿ, ತಾಳಿಕೋಟೆ, ಮುದ್ದೇಬಿಹಾಳ ತಾಲೂಕಿನ ಸದಸ್ಯರು ಉಪಸ್ಥಿತರಿದ್ದರು.

## ಕಪ್ಪುಚುಕ್ಕೆ ಇಲ್ಲದೆ ಸಂಭ್ರಮದಿಂದ ಆಚರಿಸಿ:ಸಿಪಿಐ ಮಡ್ಡಿ




ಜಮಖಂಡಿ: ಭಾವ್ಯಕ್ಯತೆಯಿಂದ ಕೂಡಿರುವ ಜಮಖಂಡಿ ತಾಲೂಕಿನ ಎಲ್ಲ ಧರ್ಮದ ಜಾತ್ರೆ, ಹಬ್ಬ, ಉರುಸುಗಳು ಯಾವುದೇ ಕಪ್ಪುಚುಕ್ಕೆ ಇಲ್ಲದೇ ಸಂಭ್ರಮ ಸಡಗರದಿಂದ ಆಚರಿಸುತ್ತಿರುವ ಹಿನ್ನಲೆಯಲ್ಲಿ ಪ್ರತಿಯೊಬ್ಬರ ಅಗತ್ಯ ಆಗಿದೆ ಎಂದು ಸಿಪಿಐ ಮಲ್ಲಪ್ಪ ಮಡ್ಡಿ ಹೇಳಿದರು.

ನಗರದ ಶಹರ ಪೊಲೀಸ್ ಠಾಣೆಯಲ್ಲಿ ಬಕ್ರೀದ ಮತ್ತು ಅಬುಬಕರ ಉರುಸ ಪ್ರಯುಕ್ತ ಹಮ್ಮಿಕೊಂಡಿದ್ದ ಶಾಂತಿ ಪಾಲನಾ ಸಭೆಯಲ್ಲಿ ಮಾತನಾಡಿದರು.

ಬಕ್ರೀದ ಮತ್ತು ಅಬುಬಕರ ಉರುಸ ನಡೆಯುತ್ತಿರುವ ಹಿನ್ನಲೆಯಲ್ಲಿ ಹಿಂದು-ಮುಸ್ಲಿಂ ಬಾಂಧವರು ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು. ಪ್ರತಿಯೊಬ್ಬರು ಕಾನೂನು ಪಾಲಿಸುವ ಮೂಲಕ ಕಾನೂನಿಗೆ ಗೌರವ ನೀಡಬೇಕು. ಯಾವುದೇ ವದಂತಿಗಳಿಗೆ ಕಿವಿಕೊಡಬಾರದು ಎಂದರು.

ವೇದಿಕೆಯಲ್ಲಿ ಡಿ.ವೈ.ಎಸ್.ಪಿ. ರೋಶನ ಜಮೀರ, ಶಹರ ಪೊಲೀಸ್ ಠಾಣೆ ಪಿಎಸ್.ಐ. ಅನೀಲ ಕುಂಬಾರ, ಗ್ರಾಮೀಣ ಪೊಲೀಸ್ ಠಾಣೆ ಪಿ.ಎಸ್.ಐ. ಗಂಗಪ್ಪ ಪೂಜಾರಿ ಸಹಿತ ಹಲವರು ಇದ್ದರು.


**ಕರ್ನಾಟಕ-ಸರ್ಕಾರ**
**ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ ಚಿಕ್ಕೋಡಿ, ಜಿಲ್ಲೆ: ಬೆಳಗಾವಿ**
E-mail: ghchikodi@gmail.com Phone no: 08338-272138
ಸಂಖ್ಯೆ:ಸಾಆಚಿ/ಟೆಂಡರು/ಪಥ್ಯಾಹಾರ/01/2025-26 ದಿನಾಂಕ:02/06/2025

:: ಟೆಂಡರ್ ಪ್ರಕಟಣೆ ::

ಸಾರ್ವಜನಿಕ ಆಸ್ಪತ್ರೆ ಚಿಕ್ಕೋಡಿ ಯ 2025-26 ನೇ ಸಾಲಿನ ಒಳ ರೋಗಿಗಳಿಗೆ ಉಪಹಾರ, ಸಿದ್ದಪಡಿಸಿದ ಪಥ್ಯಾಹಾರ ಹಾಗೂ ಬಾಳೆಹಣ್ಣು, ಕೋಳಿ ಮೊಟ್ಟೆ ಹಾಗೂ ಕಾಫಿ/ಟೀ ಸರಬರಾಜು ಮಾಡಲು ಹಾಗೂ ಉತ್ತಮ ದರ್ಜೆಯ ಬ್ರೆಡ್ ಪೂರೈಸಲು ಈ-ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31-03-2026 ರ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ. 30,00,000/- ಗಳ ಟೆಂಡರು ವಿವರಗಳ ಈ ಕೆಳಗಿನಂತಿರುತ್ತದೆ.

**ಟೆಂಡರ್ ವಿವರಗಳು**

Tender No:GHK/DIET/01/2025-26,Group A : TIFFIN , READY FOOD, Group B:BREAD FIRST CLASS,E.M.D amount: Rs.75,000/- (2.5%),Commencement of downloading of e-tender forms from website:http://kppp.karnataka.gov.in Date:02/6/2025, Last Date for seeking clarification and purchasing Tender Form:Date:16/06/2025 up to 16:00:00, Last date for uploading of Tender in e-procurement platform:Date:16/06/2025 up to 16:00:00,Date & Time for Opening of Tenders:Date: 18/06/2025 at 11:00:00 at Office of the Chief Medical Officer General Hospital, Chikodi.

ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇಎಂಡಿ ಮೊತ್ತ, ಟೆಂಡರು ಪ್ರಕ್ರೀಯೆ ದಿನಾಂಕಗಳು ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.inಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ ಚಿಕ್ಕೋಡಿ

DIPR/BGM/RO-NO-383/KSMCA/2025-26


# ವಿಶ್ವ ತಂಬಾಕು ರಹಿತ ದಿನಾಚರಣೆ-ಜಾಗೃತಿ ಜಾಥಾಕ್ಕೆ ಚಾಲನೆ

ಹಾವೇರಿ: ತಂಬಾಕು ಮತ್ತು ಅದರ ಉತ್ಪನ್ನಗಳ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ ಎಂದು ಪ್ರಧಾನ ಕೌಟುಂಬಿಕ ನ್ಯಾಯಾಧೀಶರು, ಪ್ರಭಾರ ಜಿಲ್ಲಾ ವ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರ ಅಧ್ಯಕ್ಷರಾದ ಎಂ.ಜಿ.ಶಿವಳ್ಳಿ ಅವರು ಹೇಳಿದರು.

ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಶನಿವಾರ ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ನ್ಯಾಯವಾದಿಗಳ ಸಂಘ, ಪೊಲೀಸ್ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ಆಯೋಜಿಸಲಾದ ಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.



ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ಅಪಾಯ ಹಾಗೂ ಕುಟುಂಬ, ಸಮಾಜ ಮತ್ತು ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ತಂಬಾಕು ರಹಿತ ದಿನ ಆಚರಣೆ ಮಾಡಲಾಗುತ್ತಿದೆ. ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗದೇ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ನ್ಯಾಯವಾದಿಗಳ ಸಂಘದ ಕಾರ್ಯದರ್ಶಿ ಪಿ.ಎಸ್. ಹೆಬ್ಬಾಳ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜೇಶ ಸುರಗಿಹಳ್ಳಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಪಿ.ಆರ್.ಹಾವನೂರ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ತಂಬಾಕು ನಿಯಂತ್ರಣಾಧಿಕಾರಿ ಡಾ.ಜಗದೀಶ ಪಾಟೀಲ, ಜಿಲ್ಲಾ ಎನ್.ಓ.ಎಚ್.ಪಿ.ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಕಲ್ಪನಾ, ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ ಹಾಗೂ ಜಿಲ್ಲಾ ಶೂಶ್ರುಷಕ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಶ್ರೀಮತಿ ಸರಸ್ವತಿ ವೈ.ಎಚ್. ಇತರರು ಭಾಗವಹಿಸಿದ್ದರು.

# ಸದೃಢ ಸಮಾಜ ನಿರ್ಮಾಣದ ಅಗತ್ಯ




ರಬಕವಿ-ಬನಹಟ್ಟಿ,ಮೇ1: ಸದೃಢವಾದ ಸಮಾಜ ನಿರ್ಮಾಣದಿಂದ ಸದೃಢವಾದ ದೇಶವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಇಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ದೈಹಿಕ ಶ್ರಮ ಮುಖ್ಯವಾಗಿದೆ. ದಿನ ನಿತ್ಯ ನಮ್ಮ ಜೀವನದಲ್ಲಿ ನಾವು ಯೋಗ, ಧ್ಯಾನ ಮತ್ತು ನಿಯಮಿತವಾದ ವಾಕಿಂಗ್ ಅಳವಡಿಸಿಕೊಳ್ಳಬೇಕು ಎಂದು ಇಲ್ಲಿಯ ಮಾಹೇಶ್ವರಿ ಸಮಾಜದ ಹಿರಿಯರಾದ ಸುರೇಶ ಚಿಂಡಕ ತಿಳಿಸಿದರು. ಅವರು ಭಾನುವಾರ ಇಲ್ಲಿನ ಬಾಲಾಜಿ ಮಂದಿರದ ಮುಂಭಾಗದಲ್ಲಿ ಮಹೇಶ ನವಮಿ ಅಂಗವಾಗಿ ಹಮ್ಮಿಕೊಂಡ ಮ್ಯಾರಾಥಾನ್‌ಗೆ ಚಾಲನೆ ನೀಡಿ ಮಾತನಾಡಿದರು. ಆದರ್ಶ ಲಡ್ಡಾ, ಶ್ಲೋಕ್ ಲಡ್ಡಾ, ರಿತುಲ್ ಚಿಂಡಕ, ಅರನವ ಲಡ್ಡಾ, ಕೃಷ್ಣಾ ಪುಂಗಲಿಯಾ, ವಿಷ್ಣುಕಾಂತ ಪುಂಗಲಿಯಾ, ದಾಮೋದರ ಲಡ್ಡಾ, ಸಂತೋಷ ಲಡ್ಡಾ, ಜಗದೀಶ ಚಿಂಡಕ, ಲಲಿತಕುಮಾರ ಕಾಬರಾ, ಗೋಟುಜಿ ಡಾಗಾ, ಶ್ರೀಪ್ರಿಯಾ ಕಾಬರಾ, ವೇದಿಕ ಲಡ್ಡಾ, ಶ್ವೇತಾ ರಾಠಿ, ಶ್ರುತಿಕಾ ಚಿಂಡಕ, ಸ್ನೇಹಾ ಲಡ್ಡಾ, ಮತ್ತು ಆರತಿ ಲಡ್ಡಾ ವಿವಿಧ ಮ್ಯಾರಾಥಾನ್ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಪಡೆದುಕೊಂಡರು.

ಸ್ಥಳೀಯ ಮಾಹೇಶ್ವರಿ ಸಭಾ ಅಧ್ಯಕ್ಷ ಪವನ ಲಡ್ಡಾ, ಓಂಪ್ರಕಾಶ ಕಾಬರಾ, ಮುರಳಿ ಕಾಬರಾ, ಸತ್ಯನಾರಾಯಣ ಸಾರಡಾ, ಗೀತಾ ಭಟ್ಟಡ, ನೀತಾ ರಾಠಿ ಸೇರಿದಂತೆ ಅನೇಕರಿದ್ದರು.

# ಗ್ರಾಮಗಳ ಅಭಿವೃದ್ಧಿಗೆ ಬದ್ಧ-ಶಾಸಕ ಸವದಿ



ರಬಕವಿ-ಬನಹಟ್ಟಿ,ಮೇ1: ಮತಕ್ಷೇತ್ರದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದು, ಶೋಷಿತ ಮತ್ತು ಹಿಂದುಳಿದ ಸಮುದಾಯಗಳ ಬಗ್ಗೆ ಕಾಳಜಿ ವಹಿಸಿರುವ ನೆಮ್ಮದಿ ನನಗಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಸಮೀಪದ ನಾವಲಗಿ ಗ್ರಾಮದಲ್ಲಿ ಕೆಪಿಎಸ್ ಶಾಲೆಯ ಕಟ್ಟಡ ಕಾಮಗಾರಿಗೆ ರೂ. 62 ಲಕ್ಷ ಹಾಗೂ ಅಂಬೇಡ್ಕರ್ ಭವನ ನಿರ್ಮಾಣದ ರೂ. 10 ಲಕ್ಷ ವೆಚ್ಚದ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಸರ್ಕಾರದ ಕಾಮಗಾರಿಗಳನ್ನು ಪ್ರಾಮಾಣಿಕವಾಗಿ ನಡೆಸುವುದರ ಮೂಲಕ ಗುಣಮಟ್ಟದ ಕಾಮಗಾರಿಗೆ ಗುತ್ತಿಗೆದಾರರು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಹೆಚ್ಚು ಒತ್ತು ನೀಡಲಾಗುತ್ತಿದೆ. ಸಮುದಾಯ ಭವನಗಳು ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡಲಿ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಖಾ ಕಾಂತಿ, ಹಣಮಂತ ಮಗದುಮ್, ಮಲ್ಲಪ್ ಗಣಿ, ಗುರು ಮರಡಿಮಠ, ಭಾಗೀರಥಿ ಮಗದುಮ್, ಮುತ್ತಪ್ಪಅಂಗಡಿ, ಸದಾಶಿವ ಸವದಿ, ಬಸವರಾಜ ಗಣಿ, ಈರಪ್ಪ ಕಡಕಬಾವಿ, ಗಂಗಪ್ಪಅಮ್ಮಲಜೇರಿ, ಸಿದ್ದು ಕಂಚು, ಹಣಮಂತ ನಾವಿ ಗದಿಗೆಪ್ಪ ಹಳ್ಳಿ ಸೇ-ರಿದಂತೆ ಅನೇಕರು ಇದ್ದರು.

# ಸರ್ಕಾರಿ ಪಾಲಿಟೆಕ್ನಿಕ್ ಗದಗ ಸಂಸ್ಥೆಯ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶದ ಅವಧಿ ವಿಸ್ತರಣೆ

ಗದಗ : 2025-26ನೇ ಸಾಲಿನ 02 ವರ್ಷಗಳ ಐ.ಟಿ.ಐ., ದ್ವಿತೀಯ ಪಿ.ಯು.ಸಿ.(ವಿಜ್ಞಾನ) ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ 3ನೇ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

2025-26ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪಾಲಿಟೆಕ್ನಿಕ್, ನರಸಾಪೂರ, ಬೆಟಗೇರಿ, ಗದಗ ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಖಾಲಿ ಉಳಿದಿರುವ ಡಿಪ್ಲೋಮಾ ಕೋರ್ಸು ಸೀಟುಗಳಿಗೆ ಪ್ರಾಂಶುಪಾಲರ ಹಂತದಲ್ಲಿ, ಆಫ್-ಲೈನ್, ಮೂಲಕ ಡಿಪ್ಲೋಮಾ ಪ್ರವೇಶ ಪಡೆಯಲು ದಿನಾಂಕ: 30-06-2025 ರವರೆಗೆ ದಿನಾಂಕವನ್ನು ವಿಸ್ತರಿಸಲಾಗಿದೆ.

ಮುಂದುವರೆದು, 2025-26ನೇ ಸಾಲಿನ 02 ವರ್ಷಗಳ ಐ.ಟಿ.ಐ.ದ್ವಿತೀಯ ಪಿ.ಯು.ಸಿ.(ವಿಜ್ಞಾನ) ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ/3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಆಫ್‌ಲೈನ್ ಮೂಲಕ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ಅರ್ಹ ಅಭ್ಯರ್ಥಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ ಜಣಜಣಜಛಿ.ಇಚಿಡಿಟಿಚಿ-ಣಚಿಞಚಿ.ರಡಿತ.ಟಿ/ಇಚಿಡಿಣಜಛಿಟುಛಿಚಿಟ ಅಥ-ವಾ ಜಣಜಇ.ಇಚಿಡಿಟಿಚಿಣಚಿಞಚಿ.ರಡಿತ.ಟಿ ಗಳಲ್ಲಿ ಅರ್ಜಿ ನಮೂನೆ ಮತ್ತು ಇ-ಮಾಹಿತಿ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಂಡು, ಅರ್ಜಿಯನ್ನು ಇ-ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ವಯ ಸಂಪೂರ್ಣ ಭರ್ತಿ ಮಾಡಿಕೊಂಡು ಅವಶ್ಯವಿರುವ ಎಲ್ಲ ಮೂಲ ದಾಖಲಾತಿಗಳೊಂದಿಗೆ ಖುದ್ದಾಗಿ ಸಂಸ್ಥೆಗೆ ದಿನಾಂಕ: 14-06-2025 ಸಂಜೆ 05.30ರ ಒಳಗಾಗಿ ಬಂದು ಅರ್ಜಿಯನ್ನು ಸಲ್ಲಿಸಿ,

ದಿನಾಂಕ: 17-06-2025 ರಂದು ಮೆರಿಟ್/ರೋಸ್ಟರ್ ಪ್ರಕಾರ ಸೀಟು ಆಯ್ಕೆಯಾದ ಅಭ್ಯರ್ಥಿಗಳು ಅಂದೇ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಛೇರಿ ಅವಧಿಯಲ್ಲಿ ಪಡೆಯಬಹುದಾಗಿದೆ.

### ರಸ್ತೆ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗೆ ಚಾಲನೆ

# ಕ್ಷೇತ್ರದಲ್ಲಿ ಒಟ್ಟು 74 ಸಮುದಾಯ ಭನವಗಳ ನಿರ್ಮಾಣಕ್ಕೆ ಮಂಜೂರಿ: ರಾಜು ಕಾಗೆ..!



ಮೋಳೆ ;-ಕ್ಷೇತ್ರದ ಪ್ರತಿ ಗ್ರಾಮಗಳಲ್ಲಿಯೂ ಎಲ್ಲ ಸಮುದಾಯಗಳ ಬೇಡಿಕೆಗೆ ಅನುಗುಣವಾಗಿ ಸರ್ಕಾರದ ವಿಶೇಶ ಅನುದಾನದಲ್ಲಿ ಒಟ್ಟು 74 ಸಮುದಾಯ ಭವನಗಳು ಮಂಜೂರಾಗಿದ್ದು, ಮೊದಲನೇ ಹಂತದಲ್ಲಿ 8 ಸಮುದಾಯ ಭವನಗಳ ನಿರ್ಮಾಣ ಮತ್ತು ನಾಗನೂರ ಪಿಎ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ರಾಜು ಕಾಗೆ ತಿಳಿಸಿದ್ದಾರೆ.

ಅವರು, ಶನಿವಾರ ದಿ. 31 ರಂದು ಕಾಗವಾಡ ಮತಕ್ಷೇತ್ರದ ನಾಗನೂರ ಪಿಎ ಗ್ರಾಮದಲ್ಲಿ 50 ಲಕ್ಷ ಅನುದಾನದ ರಸ್ತೆ ಅಭಿವೃದ್ಧಿ ಮತ್ತು ತಲಾ 20 ಲಕ್ಷ ಅನುದಾನದಲ್ಲಿ ನಾಗನೂರ ಪಿಎ, ಆಜೂರ, ಖಿಳೇಗಾಂವ, ಶಿರೂರ, ಅರಳಿಹಟ್ಟಿ, ಜಕ್ಕಾರಟ್ಟಿ, ವಿಷ್ಣುವಾಡಿ, ನವಲಿಹಾಳ ಗ್ರಾಮಗಳಲ್ಲಿ ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ನವಲಿಹಾಳ ಗ್ರಾಮದಲ್ಲಿ ಮಾತನಾಡುತ್ತಿದ್ದರು. ಈ ವರ್ಷ ಮುಂಗಾರು ಬೇಗನೇ ಪ್ರಾರಂಭಗೊಂಡ ಹಿನ್ನಲೆಯಲ್ಲಿ ಬಸವೇಶ್ವರ ಯಾತ ನೀರಾವರಿ ಯೋಜನೆಯ ಉಳಿದಿರುವ ಕಾಮಗಾರಿಗೆ ಹಿನ್ನೆಡೆ ಉಂಟಾಗಿದ್ದು, ಕಾಮಗಾರಿ ಪ್ರಾರಂಭಗೊಳ್ಳಲು ಸ್ವಲ್ಪ ವಿಳಂಬವಾಗಲಿದೆ. ಆದರೂ ಸಹ ಜೂನ್ ಕೊನೆಗೆ ಅಥಾವಾ ಜುಲೈ ಮೊದಲನೇ ವಾರದಲ್ಲಿ ಕಾಲುವೆಗೆ ನೀರು ಹ-ರಿಸಲು ಪ್ರಯತ್ನಿಸಲಾಗುತ್ತಿದೆ. ಇನ್ನೂ ಕ್ಷೇತ್ರದಲ್ಲಿ ಕೆರೆ ತುಂಬುವ ಯೋಜನೆ ಸಧ್ಯದಲ್ಲಿಯೇ ಪೂರ್ಣಗೊಳ್ಳಲಿದೆ ಎಂದರು.

ಈ ವೇಳೆ ಅಥಣಿ ತಹಶೀಲ್ದಾರ ಸಿದರಾಯ ಭೋಸಗಿ, ಎಇಇ ವೀರಣ್ಣ ವಾಲಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ವಿನಾಯಕ ಬಾಗಡಿ, ಘೂಳಪ್ಪ ಜತ್ತಿ, ರಮೇಶ ಚೌಗುಲೆ, ವಿಶಾಲ ನಿಂಬಾಳ,ಬಸನಗೌಡ ಪಾಟೀಲ(ಬಮ್ನಾಳ) ಕೆ.ಆರ್.ಪಾಟೀಲ,ತಾನಾಜಿ ಶಿಂಧೆ, ಶಿವಗೌಡ ಪಾಟೀಲ, ಹೊನ್ನಪ್ಪ ಬಗಲಿ, ಸಾವಂತ ಖಾಂಡೇಕರ, ಮಹಾದೇವ ತೇಲಿ, ಅಶೋಕ ಸೂರ್ಯವಂಶಿ,ರಮೇಶ ಪಾಟೀಲ, ಸಂತೋಷ ದಿವಾನಗೋಳ, ರಾಮ ಶಿರಗುಪ್ಪಿ, ರಘುನಾಥ ಹಜಾರೆ, ಎಸ್.ಎಲ್ ಪಾಟೀಲ, ಸಾವಂತ ಖಾಂಡೇಕರ, ಗುತ್ತಿಗೆದಾರರಾದ ಸುನೀಲ ಅವಟಿ, ಮಲ್ಲಿಕಾರ್ಜುನ ಠಕ್ಕಣವರ, ಅನೀಲ ಶಿಂಧೆ, ಬಾಲಜಿ ಪಾಟೀಲ, ಶಿವಾನಂದ ಗೊಲಭಾಂವಿ, ಮಹಾಂತೇಶ ಪಾಟೀಲ, ಸಂತೋಷ ಸಂಗರೋಷಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರೈತರಿಗೆ ಗುಣಮಟ್ಟದ ಬೀಜ ವಿತರಿಸಿ



ಬಸವನಬಾಗೇವಾಡಿ, : ಕೃಷಿ ಇಲಾಖೆಯ ಅಧಿಕಾರಿಗಳು ರೈತ ಬಾಂಧವ-ರಿಗೆ ಸೂಕ್ತವಾದ ಬೀಜಗಳನ್ನು ವಿತರಣೆ ಮಾಡಿದರೆ ಮಾತ್ರ ಕೃಷಿ ಉತ್ಪನ್ನ ನಿರೀಕ್ಷೆ ಮಟ್ಟದಲ್ಲಿ ಬರಲು ಸಾಧ್ಯ. ಈ ನಿಟ್ಟಿನಲ್ಲಿ ರೈತ ಬಾಂಧವರು ಬೀಜ ಖರೀದಿಸಲು ಬಂದಾಗ ಅವರಿಂದ ನೀರಾವರಿ, ಖುಷ್ಕಿ ಜಮೀನು ಮಾಹಿತಿ ಪಡೆದುಕೊಂಡು ಅವರ ಜಮೀನಿಗೆ ಸಂಬಂಧಿಸಿದಂತೆ ಬೀಜಗಳನ್ನು ವಿತರಣೆ ಮಾಡುವದು ತುಂಬಾ ಅಗತ್ಯವಿದೆ ಎಂದು ದೇವರಹಿಪ್ಪರಗಿ ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ ಹೇಳಿದರು.

ತಾಲೂಕಿನ ಹೂವಿನಹಿಪ್ಪರಗಿ ಗ್ರಾಮದ ರೈತ ಸಂಪರ್ಕ ಕೇಂದ್ರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮದಲ್ಲಿ ರೈತ ಬಾಂಧವರಿಗೆ ಸಾಂಕೇತಿಕವಾಗಿ ಬೀಜ ವಿತರಿಸಿ ಮಾತನಾಡಿದ ಅವರು, ನೀರಾವರಿ,ಖುಷ್ಕಿ ಜಮೀನುಗಳಿಗೆ ಬೇರೆ ಬೇರೆ ಬೀಜಗಳು ಲಭ್ಯ ಇವೆ. ನೀರಾವರಿ ಬೀಜಗಳನ್ನು ಖುಷ್ಕಿ ಜಮೀನಿನಲ್ಲಿ ಬಿತ್ತನೆ ಮಾಡಿದರೆ ನೀರಿನ ಕೊರತೆ ಉಂಟಾಗಿ ಸರಿಯಾಗಿ ಬೆಳೆಯುವುದಿಲ್ಲ. ಕಳೆದ ವರ್ಷ ಈ ರೀತಿಯಾಗಿರುವದನ್ನು ನಾವು ಕೇಳಿದ್ದೇವೆ. ಈ ವರ್ಷದ ಈ ರೀತಿಯಾಗದಂತೆ ಅಧಿಕಾರಿಗಳು ಜಾಗೃತೆ ವಹಿಸುವದು ತುಂಬಾ ಅಗತ್ಯವಿದೆ. ರೈತ ಬಾಂಧವರು ಬೆಳೆದ ಬೆಳೆಗೆ ಉತ್ತಮ ಫಲ,ಬೆಲೆ ಬಂದಾಗ ಮಾತ್ರ ಎಲ್ಲರೂ ಸಂತಸವಾಗಲು ಸಾಧ್ಯ ಎಂದರು.

ಹಿಂದೆ ಮನೆಯಲ್ಲಿ ದಡ್ಡ ಮಗನಿದ್ದರೆ ಅವನನ್ನು ಒಕ್ಕುಲುತನಕ್ಕೆ ಹಚ್ಚುತ್ತಿದ್ದರು. ಇಂದು ದಡ್ಡ ಮಗನಿದ್ದರೂ ಜಮೀನು ಮಾರಿಯಾದರೂ ಅವನಿಗೆ ನೌಕರಿ ಹಚ್ಚುವ ಕಾಲ ಬಂದಿದೆ. ಇಂದು ದಡ್ಡನಿದ್ದರೆ ಒಕ್ಕುಲುತನ ಮಾಡಲು ಸಾಧ್ಯವಿಲ್ಲ. ಒಕ್ಕುಲುತನಕ್ಕೆ ಸಂಬಂಧಿಸಿದ ಸಂಪೂರ್ಣ ಜ್ಞಾನ ಹೊಂದಿದರೆ ಮಾತ್ರ ಉತ್ತಮ ಒಕ್ಕುಲುತನ ಮಾಡಲು ಸಾಧ್ಯ. ಇಂದು ಕೃಷಿ ತಂತ್ರಜ್ಞಾನ, ಕೃಷಿ ಮಾರುಕಟ್ಟೆ ಸೇರಿದಂತೆ ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ರೈತ ಬಾಂಧವರು ಅರಿತುಕೊಂಡರೆ ಕೃಷಿಯಿಂದ ಉತ್ತಮ ಪ್ರತಿಫಲ ಪಡೆಯಬಹುದು ಎಂದರು.

ಈ ವರ್ಷ ಮುಂಗಾರು ಮಳೆ ಬೇಗ ಆರಂಭವಾಗಿದೆ. ರೈತರಿಗೆ ಬೇಕಾದ ಅಗತ್ಯ ಬೀಜಗಳನ್ನು ಅಧಿಕಾರಿಗಳು ವಿತ-ರಿಸಬೇಕು. ಬೀಜಗಳಿಗೆ ಕೊರತೆಯಿಲ್ಲ. ರೈತರು ಯಾವುದೇ ಆತಂಕವಿಲ್ಲದೇ ಬೀಜ ಪಡೆದು ಬಿತ್ತನೆ ಮಾಡಬೇಕು. ನಾನು ಹಿಂದೆ ಜಿಲ್ಲಾ ಪಂಚಾಯಿತಿ ಸದಸ್ಯನಿದ್ದ ವೇಳೆಯಲ್ಲಿ ರೈತ ಬಾಂಧವರಿಗೆ ಬೀಜಗಳ ಕೊರತೆಯಾಗದಂತೆ ನೋಡಿಕೊಂಡಿದ್ದನ್ನು ಸ್ಮರಿಸಿದರು. ಈ ಭಾಗದಲ್ಲಿ ಹತ್ತಿ ಬಿತ್ತನೆ ಮಾಡಲು ರೈತರು ಮುಂದಾದರೆ ಅವ-ರಿಗೆ ಹತ್ತಿ ಬೀಜ ಸಿಗುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಹೂವಿನಹಿಪ್ಪರಗಿ ರೈತ ಸಂಪರ್ಕ ಕೇಂದ್ರದಲ್ಲಿ ಬೀಜ,ಗೊಬ್ಬರ ದಾಸ್ತಾನು ಮಾಡಿಕೊಳ್ಳಲು ಜಾಗೆಯ ಕೊರತೆಯಿರುವ ಕಾರಣದಿಂದಾಗಿ ಗ್ರಾಮದಲ್ಲಿ ದಾಸ್ತಾನು ಮಾಡಿಕೊಳ್ಳಲು ಗೋದಾಮು ನಿರ್ಮಾಣ ಕಾರ್ಯದ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಎಂದರು.

ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಎಂ.ಎಚ್.ಯರಝರಿ ಮಾತನಾಡಿ, ಮುಂಗಾರು ಮಳೆ ಒಂದು ವಾರ ಮುನ್ನವೇ ಆರಂಭವಾಗಿದೆ. ಉತ್ತಮ ಮಳೆಯಾಗಿ ಮುಂಗಾರು ಆಶಾದಾಯಕವಾಗಿದೆ. ಈ ವಾರದಲ್ಲಿ ಹವಾಮಾನ ವರದಿಯಂತೆ ಮಳೆ ಇಲ್ಲ. ಈ ವಾರದಲ್ಲಿ ರೈತರು ಬಿತ್ತನೆ ಕಾರ್ಯ ಕೈಗೊಳ್ಳಲು ಅನುಕೂಲವಾಗುತ್ತದೆ. ಮೆಕ್ಕೆಜೋಳ, ಹೆಸರು, ತೊಗರಿ, ಸಜ್ಜೆ, ಸೂರ್ಯಕಾಂತಿ ಬೀಜ ದಾಸ್ತಾನುವಿದೆ. ಇಲಾಖೆಯಿಂದ ಎಫ್‌ಐಡಿ ಮೂಲಕ ರಿಯಾಯತಿ ದರದಲ್ಲಿ ತಮಗೆ ಬೇಕಾದ ಬೀಜಗಳನ್ನು ಪಡೆದುಕೊಂಡು ರೈತರು ಬಿತ್ತನೆ ಮಾಡಬೇಕು. ಭೂಮಿಯನ್ನು ಬಿತ್ತನೆ ಸಿದ್ಧತೆ ಮಾಡಿಕೊಂಡು ಬಿತ್ತನೆ ಮಾಡಿದರೆ ತುಂಬಾ ಅನುಕೂಲ. ರೈತರು ಬೆಳೆ ವೈವಿದ್ಯತೆ ಅನುಸರಿಸುವಂತಾಗಬೇಕು. ಕೃಷಿ ಇಲಾಖೆಯಿಂದ ಸಿಗುವ ಯೋಜನೆಗಳ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕೆಂದರು.

ಕೃಷಿಕ ಸಮಾಜದ ನಿರ್ದೇಶಕ, ನಿವೃತ್ತ ಕೃಷಿ ಅಧಿಕಾರಿ ಅರವಿಂದ ಸಜ್ಜನ ಮಾತನಾಡಿ, ರೈತ ಬಾಂಧವರು ಬೀಜೋಪಚಾರ ಮಾಡಿಕೊಂಡು ಬಿತ್ತನೆ ಮಾಡುವಂತಾಗಬೇಕು. ಮಿಶ್ರ ಬೆಳೆ ಕಡೆಗೆ ಗಮನ ಹರಿಸಬೇಕು. ರೈತರು ಕೃಷಿಗೆ ಸಂಬಂಧಿಸಿದಂತೆ ನಿರಂತರ ಚರ್ಚಿಸುವಂತಾಗಬೇಕು. ಕೃಷಿ ಇಲಾಖೆಯಿಂದ ಗುಣಮಟ್ಟದ ಕೃಷಿ ಪರಿಕರಗಳನ್ನು ರೈತರು ಪಡೆಯುವಂತಾಗಬೇಕು. ರೈತರು ಯಾವಾಗಲು ಸಂತೃಪ್ತವಾಗಿರಬೇಕು. ರೈತರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಜೊತೆಗೆ ತಾವು ಉತ್ತಮ ರೈತರಾಗಿ ಅಭಿವೃದ್ಧಿ ಹೊಂದಬೇಕೆಂದರು.

ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವುಬಾಯಿ ಗಿರಿನಿವಾಸ ವಹಿಸಿದ್ದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ರಮೇಶ ಶಿವಯೋಗಿ, ಕೃಷಿಕ ಸಮಾಜದ ನಿರ್ದೇಶಕ ಬಸವರಾಜ ಅವಟಿ, ಮುಖಂಡ ಸಂಗಮೇಶ ಹಳ್ಳೂರ ಇದ್ದರು. ಕೃಷಿ ಅಧಿಕಾರಿ ಭೀಮಾಶಂಕರ ಕುಂಬಾರ ಸ್ವಾಗತಿಸಿದರು. ಲೋಕೇಶ ಚಿಕ್ಕಮಠ ನಿರೂಪಿಸಿದರು. ಮನೋಜ ನಂದಿಕೋಲಮಠ ವಂದಿಸಿದರು. ಇದೇ ಸಂದರ್ಭದಲ್ಲಿ ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರಗಳ ಬಳಕೆ ಮಾಡುವ ಕು-ರಿತಂತೆ ರೈತರಿಗೆ ಸಲಹೆ ಇರುವ ಕರಪತ್ರ ವಿತರಿಸಲಾಯಿತು.

## ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ:: ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2024-25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇ-ರಿದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ **Food Craft Institute (FCI), Mysore ºÁUÀÆ Institute of Hotel Management (IHM),** ಬೆಂಗಳೂರು ಇಲ್ಲಿ ವಸತಿಸಹಿತ ಉಚಿತ ತರಬೇತಿ ನೀಡಲಾಗುವುದು. ಆಹಾರ ಮತ್ತು ಪಾನೀಯ ಸೇವಾ ಪರಿಚಾರಕ(**Food & Beverage Service steward)** ತರಬೇತಿಗೆ 10 ನೇ ತರಗತಿ, ಕೋಣೆ ಪರಿಚಾರಕ(**Room Attendant** ) ತರಬೇತಿಗೆ 5 ನೇ ತರಗತಿ ಹಾಗೂ ಮಲ್ಟಿಕ್ಯುಸಿನ್ ಕುಕ್ (**Multi Cuisine Cook)** ತರಬೇತಿಗೆ 8 ನೇ ತರಗತಿ ಉತ್ತೀರ್ಣರಾಗಿರಬೇಕು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆದುಕೊಂಡು, ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 13-06-2025 ರ ಸಂಜೆ 4 ಗಂಟೆಯೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ, 'ಎ' ಬ್ಲಾಕ್ ಎರಡನೇ ಮಹಡಿ ಜಿಲ್ಲಾಡಳಿತ ಭವನ. ದೇವಗಿರಿ-ಹಾವೇರಿ. ದೂರವಾಣಿ ಸಂಖ್ಯೆ 08375-296033 ಸಂಪರ್ಕಿಸಲು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಡಪದ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಅರ್ಜಿ ಅಹ್ವಾನ

ಬಸವನಬಾಗೇವಾಡಿ,

ಮುದ್ದೇಬಿಹಾಳ ತಾಲೂಕಿನ ತಂಗಡಗಿ ಗ್ರಾಮದ ಹಡಪದ ಅಪ್ಪಣ್ಣ ಮಹಾಸಂಸ್ಥಾನ ಮಠದ ಪ್ರಥಮ ಸ್ವಾಮೀಜಿ ಲಿಂ.ಬಸವಪ್ರಿಯ ಅಪ್ಪಣ್ಣ ಮಹಾಸ್ವಾಮೀಜಿ ಅವರ 17ನೇ ಪುಣ್ಯಾಸ್ಮರಣೆ ಕಾರ್ಯಕ್ರಮ ತಂಗಡಗಿ ಶ್ರೀಮಠದಲ್ಲಿ ಜೂ.22ರಂದು ಆಯೋಜನೆ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಹಡಪದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವದು. ಬಸವನಬಾಗೇವಾಡಿ ತಾಲೂಕಿನಲ್ಲಿ 2024-25ನೇ ಸಾಲಿನಲ್ಲಿ ಎಸ್. ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ರಷ್ಟು ಅಂಕ ಪಡೆದ ಹಡಪದ ಸಮಾಜದ ವಿದ್ಯಾರ್ಥಿಗಳು ಜೂ.15ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಎಸ್. ಎಸ್.ಎಲ್.ಸಿ, ದ್ವಿತೀಯ ಪಿಯುಸಿ ಅಂಕಪಟ್ಟಿ, ವಿದ್ಯಾರ್ಥಿಯ ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ, ವಿದ್ಯಾರ್ಥಿಯ 2 ಭಾವಚಿತ್ರ, ಸ್ವ-ವಿವರದೊಂದಿಗೆ ಸುಭಾಸ ಹಡಪದ, ತೆಲಗಿ ರಸ್ತೆ, ಗಣಪತಿ ಚೌಕ, ಬಸವನಬಾಗೇವಾಡಿ 586203 ಇಲ್ಲವೇ ನಾಗೇಶ ನಾಗೂರ, ಓಂ ನಗರ, ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರ, ಬಿಷ್ಟಗೊಂಡ ವಕೀಲರ ಬಿಲ್ಡಿಂಗ್, ಬಸವನಬಾಗೇವಾಡಿ 586203 ಈ ವಿಳಾಸಗಳಿಗೆ ಅರ್ಜಿ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ಮೊ-9448035801, 8970792336 ಸಂಖ್ಯೆಗಳಿಗೆ ಸಂಪರ್ಕಿಸಬಹುದೆಂದು ಶ್ರೀಮಠದ ಶ್ರೀಗಳಾದ ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳೊಂದಿಗೆ ಸೌಜನ್ಯದಿಂದ ವರ್ತಿಸದ ನೌಕರ ಬಾಂಧವರಿಗೆ ಶಿಸ್ತು ಕ್ರಮಜರುಗಿಸಲಾಗುವುದು: ಎಡಿ ಹಿರೇಮನಿ ಎಚ್ಚರಿಕೆ

ಬಸವನಬಾಗೇವಾಡಿ, : ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಬೇಕು. ಅವರೊಂದಿಗೆ ಸೌಜನ್ಯದಿಂದ ವರ್ತಿಸದ ನೌಕರ ಬಾಂಧವರ ಮೇಲೆ ಶಿಸ್ತು ಕ್ರಮಜರುಗಿಸಲಾಗುವದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಗ್ರೇಡ್-1 ಮಂಜು ಹಿರೇಮನಿ ಎಚ್ಚರಿಸಿದರು.




ಪಟ್ಟಣದ ಮೆಟ್ರಿಕ್ ನಂತರದ ಬಾಲಕಿಂ-ಯರ ವಸತಿ ನಿಲಯದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಶನಿವಾರ ಹಮ್ಮಿಕೊಂಡಿದ್ದ ವಸತಿ ನಿಲಯಗಳ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರ-ರಿಗೆ ಒಂದು ದಿನದ ಕಾರ್ಯಾಗಾರದ ಆದ-ೖಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ಅಡುಗೆಯವರು ಸ್ವಚ್ಛತೆ ಮತ್ತು ಸುರಕ್ಷತೆಗೆ ಆದ್ಯತೆ ನೀಡಬೇಕು.ವಸತಿ ನಿಲಯಗಳಲ್ಲಿ ಅಹಿತಕರ ಘಟನೆಯಾಗದಂತೆ ಎಚ್ಚರವ ಹಿಸುವುದರೊಂದಿಗೆ ವಸತಿ ನಿಲಯದ ಸಾಮಾಗ್ರಿಗಳು ಹಾನಿಯಾಗದಂತೆ ನೋಡಿಕೊಂಡು, ನಿಲಯದಲ್ಲಿಯೇ ಕೈತೋಟ ಮಾಡುವ ಮೂಲಕ ಅಗತ್ಯ ತರಕಾರಿಗಳನ್ನು ಬೆಳೆದು ಜಿಲ್ಲೆಯಲ್ಲಿಯೇ ಮಾದರಿ ನಿಲಯಗಳನ್ನಾಗಿ ಮಾಡಬೇಕೆಂದರು. ಸಮಯಪ್ರಜ್ಞೆ ಇಲ್ಲದ ಮತ್ತು ವಿದ್ಯಾರ್ಥಿಗಳ ಜೊತೆ ಸೌಜನ್ಯಯುತ ವರ್ತಿಸದ ಸಿಬ್ಬಂದಿಗಳಿಗೆ ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಸದಾನಂದ ಬಡಿಗೇರ ಅವರು ನೌಕರರ ಸೇವಾಮನೋಭಾವನೆ ಮತ್ತು ಹೊರಗುತ್ತಿಗೆ ನೌಕರರಿಗೆ ಸಿಗುವ ಸೌಲಭ್ಯಗಳ ಕುರಿತು ಮಾತನಾಡಿದರು.

ನಿಲಯ ಪಾಲಕರಾದ ಮನು ಪತ್ತಾರ, ಜಿ .ಆಯ್. ಬೆಕಿನಾಳ ಮತ್ತು ಶಾಂತಾ ಕಸ್ತೂರಿ, ಕಚೇರಿ ಅಧೀಕ್ಷಕ ಎಂ. ಎಂ. ದಫೇದಾರ್ ಹಾಗೂ ವಿರೇಶ ಗೂಡ್ಲಮನಿ ಮಾತನಾಡಿದರು.

ಈ ಸಂದರ್ಭದಲ್ಲಿ ನಿಲಯ ಪಾಲಕರುಗಳಾದ ಮೋಹಿನಿ ಬರಗಿ,ರಾಜೇಶ್ವರಿ ಗೋಗಿ, ಬಸವರಾಜ ಚಕ್ರವರ್ತಿ, ಬಡಿಗೇರ, ಅಶೋಕ ನಡುವಿನಮನಿ,ಮೋಹನ ಜಾಧವ, ಸಂಗಪ್ಪ ಹೊಳಿ, ಬೈರಪ್ಪ ಕುಂಬಾರ ಸೇರಿದಂತೆ ಇತರರು ಇದ್ದರು. ಇದೇ ಸಂದರ್ಭದಲ್ಲಿ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಪ್ರಥಮ ದರ್ಜೆ ಸಹಾಯಕ ಪಿ. ಬಿ. ರಾಠೋಡ ದಂಪತಿಗಳಿಗೆ ಸನ್ಮಾನಿಸಿ ಭಾವನಾತ್ಮಕವಾಗಿ ಬೀಳ್ಕೊಡಲಾಯಿತು.

### ಆದರ್ಶ ಮೌಲ್ಯಗಳನ್ನು ಬೆಳೆಸುವುದೇ ಜೈನ ಧರ್ಮದ ಗುರಿ

# ಜೈನ ಧರ್ಮಕ್ಕೆ ದ್ರೋಹ ಬಗೆಯಬೇಡಿ : ರಾಷ್ಟ್ರಸಂತ ಗುಣಧರನಂದಿ ಮುನಿ

ಮೋಳೆ;- ಸಮಾಜಕ್ಕೆ ಮಾದರಿ ಆಗಬೇಕಾದರೆ ಜೈನ ಧರ್ಮಿಯರು, ವ್ಯಸನಗಳಿಗೆ ದಾಸರಾಗಿ, ಕೆಟ್ಟ ದಾರಿ ತುಳಿದರೆ ಸನ್ಮಾರ್ಗದಲ್ಲಿ ನಡೆದು ಧರ್ಮವಂತರಾಗಿ ನಡೆಯಬೇಕೆಂದು ರಾಷ್ಟ್ರಸಂತ ಗುಣಧರನಂದಿ ಮುನಿ ಮಹಾರಾಜರು ಹೇಳಿದರು. ಅವರು ಐನಾಪುರದಲ್ಲಿ ಏರ್ಪಡಿಸಿದ ಪ್ರವಚನ ಕಾರ್ಯಕ್ರಮದಲ್ಲಿ ಪುಜ್ಯರು ಶ್ರಾವಕರನ್ನುದ್ದೇಶಿಸಿ ಮಾತನಾಡಿದರು.

24 ತೀರ್ಥಂಕರರು ಕಾಲಕಾಲಕ್ಕೆ ಭರತ ಭೂಮಿಯಲ್ಲಿ ಜನಿಸಿ ಇಡೀ ಮನುಕುಲಕ್ಕೆ ಅಗತ್ಯವಾದ ಸಿದ್ಧಾಂತಗಳನ್ನು ನೀಡಿದರು. ಅದಕ್ಕಾಗಿ ನಮ್ಮಿಂದ ಯಾವುದೇ ರೀತಿಯ ಶುಲ್ಕ, ಹರಕೆ, ಕಾಣಿಕೆ ಕೇಳಲಿಲ್ಲ. ಆದರೆ ನಾವು ಪಂಚೇಂದ್ರಿಯಗಳ ದಾಸರಾಗಿ ಮಾನವ ಜನ್ಮ ವ್ಯರ್ಥ ಮಾಡುತ್ತಿದ್ದೇವೆ. ಬೆಳಕು ಬಿಟ್ಟು ಕತ್ತಲೆ ಜತೆಗೆ ಸಂಬಂಧ ಬೆಳೆಸಿಕೊಂಡು ಗಾಣದೆತ್ತಿನಂತೆ ಒಂದೇ ಕಕ್ಷೆಯಲ್ಲಿ ಸುತ್ತುತ್ತಿದ್ದಾರೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ವ್ಯಸನಗಳನ್ನು ದೂರ ಮಾಡುವ ಮೂಲಕ ಮನುಷ್ಯರು ತಮ್ಮ ಅಂತರಂಗವನ್ನು ಶುದ್ದವಾಗಿ-ರಿಸಿಕೊಳ್ಳಬಹುದು.ಧರ್ಮ, ಆದ-ೖತ್ಮದಿಂದ ಅತ್ಯಂತ ಶ್ರದ್ಧಾ ಭಕ್ತಿಯಿಂದ ಉಪವಾಸ,ವ್ರತ,ಪೂಜೆ,ತಪಸ್ಸುಗಳನ



ೖ ಕೈಕೊಂಡರೆ ಅದ್ಬುತವಾದ ಯಶಸ್ಸು ಲಭಿಸುವುದರ ಜೊತೆಗೆ, ಮನುಷ್ಯ ಆದರ್ಶ ವ್ಯಕ್ತಿಯಾಗುತ್ತಾನೆ ಎಂದರು.

ಧಾರ್ಮಿಕ,ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ನೆಲೆಯಲ್ಲಿ ಮಹಿಳೆಯರು ಮಿಂಚೂಣಿಯಲ್ಲಿದ್ದಾರೆ. ಜಿನಮಂದಿರ ನಿರ್ಮಾಣ, ಬಿಂಬ ಪ್ರತಿಷ್ಠಾಪನೆ, ಶಾಸ್ತ್ರದಾನಕ್ಕೆ ಪ್ರೇರಣೆ ನೀಡುವಲ್ಲಿ ಅತ್ತಿಮಬ್ಬೆ, ಚೆನ್ನಭೈರಾದೇವಿ, ಶಾಂತಲಾ ಹೀಗೆ ಇತಿಹಾಸದ ಪುಟಗಳಲ್ಲಿ ಸಾಕಷ್ಟು ಮಹಿಳೆಯರು ಕಾಣಸಿಗುತ್ತಾರೆ ಎಂದರು. ತಾಯಂದಿರರು ಟಿವಿ, ಮೋಬೈಗಳಿಂದ ತಾವು ದೂವಿದ್ದು ಮಕ್ಕಳಿಗೆ ಶಿಕ್ಷಣದ ಜೊತೆಗೆ ಧರ್ಮ ಪರಿಪಾಲನೆ, ಗುರು ಹಿರಿಯರನ್ನು ಗೌರಿವಿಸುವುದನ್ನು ಕಲಿಸಬೇಕೆಂದು ಹೇಳಿದರು.

ಮನುಷ್ಯನಿಗೆ ಎಲ್ಲ ರಂಗಗಳಲ್ಲಿ ಸಮಸ್ಯೆ, ಸವಾಲುಗಳು ಇದ್ದೇ ಇರುತ್ತವೆ. ಅವುಗಳನ್ನು ಎದುರಿಸುವಂತಾಗಬೇಕು. ಉತ್ಕೃಷ್ಟವಾದ ಭಾರತೀಯ ಸಂಸ್ಕೃತಿಯನ್ನು ಪೂಜಿಸಿ ಗೌರವಿಸಬೇಕು. ದೇವರು, ಧರ್ಮ,ಜಾತಿಯ ಮತ್ತು ಪ್ರಾಂತೀಯ ಹೆಸರಿನಲ್ಲಿ ಸಂಘರ್ಷ ನಡೆಯುತ್ತಿರುವುದು ದುರ್ದೈವದ ಸಂಗತಿ. ಆದ್ಯಾತ್ಮಿಕ ಜ್ಞಾನದ ಕೊರತೆಯೇ ಇಂದಿನ ಸಮಸ್ಯೆಗಳಿಗೆ ಕಾರಣವೆಂದರೆ ತಪ್ಪಾಗಲಾರದು.ಯಾವುದೇ ಕಟ್ಟಡದಲ್ಲಿ ಅಡಿಪಾಯದಲ್ಲಿರುವ ಕಲ್ಲುಗಳು ಮತ್ತು ಗೋಡೆ ಕಲ್ಲುಗಳು ಎರಡೂ ಇದ್ದು ಅವುಗಳಲ್ಲಿ ಗೋಡೆಯ ಕಲ್ಲು ನೋಡಿ ಸಂತೋಷ ಪಡುವ ಜನರು ಹೆಚ್ಚು. ಆದರೆ ಆ ಕಟ್ಟಡಕ್ಕೆ ಅಡಿಪಾಯ ಕಲ್ಲುಗಳಿಂದ ಎಂಬುದನ್ನು ಜನರು ಮರತೇ ಬಿಡುವರು. ಧರ್ಮದ ಮೂಲ ತತ್ವದ ಸಿದ್ಧಾಂತಗಳನ್ನು ಮತ್ತು ಸಂಪ್ರದಾಯಗಳನ್ನು ಮರೆಯಬಾರದು, ವಿಶ್ವ ಬಂಧುತ್ವವನ್ನು ಸಾರಿದ ಜೈನ ಮುನಿಗಳ ಸಂದೇಶಗಳು ಸರ್ವ ಕಾಲಕ್ಕೂ ಅನ್ವಯಿಸುತ್ತವೆ ಎಂದರು.

ಈ ಪ್ರವಚನದಲ್ಲಿ ಉತ್ತರ ಕರ್ನಾಟಕ ಹಾಗೂ ನೆರೆಯ ಮಹಾರಾಷ್ಟ್ರದ ನೂರಾರು ಶ್ರಾವಕ, ಶ್ರಾವಕಿಂ-ಯರು ಪಾಲ್ಗೊಂಡು ರಾಷ್ಟ್ರಸಂತರ ಪ್ರವಚನ ಆಲಿಸಿ ಅವರ ಆಶೀರ್ವಾದ ಪಡೆದುಕೊಂಡರು.

# ಮಣ್ಣಿನಿಂದ ತಯಾರಿಸಿದ ಪರಿಸರ ಸ್ನೇಹಿ ವಿಗ್ರಹಗಳ ಬಳಸಲು ಕೋರಿಕೆ

ಬೆಳಗಾವಿ,ಜೂ.02(ಕರ್ನಾಟಕ ವಾರ್ತೆ): ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಮೂರ್ತಿ ತಯಾರಕರು ಹಾಗೂ ಸಾರ್ವಜನಿಕರಲ್ಲಿ, ಗಣೇಶೋತ್ಸವ ಮಹಾ ಮಂಡಳಿಗಳವರಲ್ಲಿ ವಿನಂತಿ ಏನೆಂದರೆ ಪಿ.ಓ.ಪಿ.ಯಿಂದ ತಯಾ-ರಿಸಲಾದ ಅಥವಾ ಬಣ್ಣಲೇಪಿತ ವಿಗ್ರಹಗಳನ್ನು ತಯಾರಿಸುವುದು ಮತ್ತು ಜಲಮೂಲಗಳಲ್ಲಿ ನದಿ, ಕಾಲುವೆ ಅಥ-ವಾ ಬಾವಿಗಳಲ್ಲಿ ವಿಸರ್ಜಿಸುವುದನ್ನು ನಿರ್ಬಂಧಿಸಲಾಗಿದ್ದು, ಕಾರಣ ಸಾರ್ವಜನಿಕರು ಮುಂಬರುವ ಗಣೇಶ ಹಬ್ಬದ ಪ್ರಯುಕ್ತ ಪಿ.ಓ.ಪಿ.ಯಿಂದ ತಯಾರಿಸಿದ ಅಥವಾ ಬಣ್ಣ ಲೇಪಿತ ವಿಗ್ರಹಗಳನ್ನು ಬಳಸದೇ ಮಣ್ಣಿನಿಂದ ತಯಾರಿಸಿದ ಪರಿಸರ ಸ್ನೇಹಿ ವಿಗ್ರಹಗಳನ್ನು ಮಾತ್ರ ಬಳಸಲು ಕೋರಲಾಗಿದೆ. ಮುಂಬರುವ ದಿನಗಳಲ್ಲಿ ಪಿ.ಓ.ಪಿ. ಬ್ಯಾಗ್‌ಗಳು ಹಾಗೂ ಪಿ.ಓ.ಪಿ.ಯಿಂದ ತಯಾರಿಸಿದ ಅಥವಾ ಬಣ್ಣ ಲೇಪಿತ ವಿಗ್ರಹಗಳು ಲಭ್ಯವಾದಲ್ಲಿ ಜಲಮಾಲಿನ್ಯ (ತಡೆ ಮತ್ತು ನಿಯಂತ್ರಣ) ಕಾಯ್ದೆ 1974 ರ ಕಲಂ 45-ಎ ಅಡಿಯಲ್ಲಿ ಅವುಗಳನ್ನು ವಶಪಡಿಸಿಕೊಂಡು ನಿಯಮಾನುಸಾರ ದಂಡ ವಿಧಿಸುವ ಕ್ರಮ ಕೈಕೊಳ್ಳಲಾಗವುದು ಎಂದು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016 DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 07, Issue :101, Postal Reg No. PMG/KA/NK/BM/135/25-27 / POST AT Vantamury Colony Post Office